they could be appointed. The reduction in the number of vacancies from 56 to 38, has occurred owing to the retrenchment of posts in the Food Branch, etc. The Scheduled Caste candidates being at the end of the list had to be retrenched, in view of the fact that the total number of vacancies notified to the P.S.C. about 2 years earlier on the basis of which the selections have been made, were not available, at the time of issue of appointment orders.

ಶ್ರೀ ಎಂ. ನಾಗಪ್ಪ : ಮೆರಿಟ್ ಮೇಲೆ ಲಿಸ ಮಾಡುತ್ತಾರೆ. ೩೮ ವೆಕೆನ್ಸೀಯಲ್ಲಿ ಷಡ್ಯೂಲ್ ಕ್ಯಾಸ್ಟ ಮತ್ತು ಟ್ರೈಬ್ಸ ಕ್ಯಾಂಡಿಡೇಟ್ ಬಾರದೇ ಇದ್ದರೆ ಬೇರೆ ಜಾತಿಯವರನ್ನು ಅಪಾಯಿಂಟಮೆಂಟ ಮಾಡಿದ್ದಾರೆಯೇ ? ರಿಕ್ರೂಟ್‌ಮೆಂಟ್ ರೂಲ್ ಏರಲ್ಲಿ ಖಚಿತವಾಗಿ ಹೇಳಿದೆ. ೩೮ ವೇಕೆನ್ಸಿಯಲ್ಲಿ ಷಡ್ಯೂಲ್ ಕ್ಯಾಸ್ಟನವರಿಗೆ ಎಷ್ಟು ಸಿಕ್ಕುತ್ತದೆಯೋ ಅಷ್ಟನ್ನು ಕೊಡಬೇಕು ಇಲ್ಲದಿದ್ದರೆ ರೂಲ ಉಲ್ಲಂಘನೆಯಾಗುತ್ತದೆ ಅದಕ್ಕಾಗಿ ದಯವಿಟ್ಟು ಯೋಚನೆ ಮಾಡಿ ಎಷು ರೇಷಿಯೋ ಬರುತ್ತದೆ ಅಷ್ಟನ್ನು ಕೂಡಲಿಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ :—ಇಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್ ಲಿಸ್ಟ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಈ ಪರಿಸ್ಥಿತಿ ಉದ್ಭವವಾಗುವುದಕ್ಕೆ ಕಾರಣ ಏನು ಅಂದರೆ ಎರಡು ವರ್ಷಗಳ ಹಿಂದೆ ೫೬ ವೇಕೆನ್ಸೀ ಇದ್ದುವು, ಪಿಎಸ್‌ಸಿ., ನೋಟೀಫೈ ಮಾಡಿದರು ಆದರೆ ನಂತರ ಪುಡ್ ಡಿಪಾರ್ಟಮೆಂಟಿನಲ್ಲಿ ರಿಟ್ರೆಂಚಮೆಂಟ್ ಮಾಡಿದ್ದರಿಂದ ಅಪಾಯಿಂಟಮೆಂಟ್ ಮಾಡುವಾಗ ೫೬ ವೇಕನ್ಸೀಸ್ ಇರಲಿಲ್ಲ, ಅದು ೩೮ ಆಯಿತು ಇಲ್ಲದಿದ್ದರೆ ಇಂಥ ಪರಿಸ್ಥಿತಿ ಉದ್ಭವವಾಗುತ್ತಾ ಇರಲಿಲ್ಲ. ಇದು ಕೂಡ ಮೊದಲನೇ ಸಲ ಉದ್ಭವವಾಗಿದೆ. ಚೀಫ್ ಸೆಕ್ರಟರಿಯವರು ಸ್ಪೆಷಲ್ ಸೆಕ್ರಟರಿಯವರಿಗೆ ಹೇಳಿದ್ದಾರೆ. ಇದರ ಬಗ್ಗೆ ಕ್ರಮ ತೆಗೆದು ಕೊಳ್ಳಬೇಕು ಎಂದು ಹೇಳಿದ್ದಕ್ಕೆ ಅವರು ಪರಿಶೀಲನೆ ಮಾಡುತ್ತಾ ಇದ್ದಾರೆ. ಇನ್ನು ಮುಂದೆ ಈ ರೀತಿ ಆಗಲಾರದಂತೆ ಜರೂರಾದ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ನಾಗಪ್ಪ :—ಗೆಜೆಟೆಡ್ ಮತ್ತು ಅದರ ಮೇಲಿನ ಹುದ್ದೆಗಳ ನೇಮಕಕ್ಕೆ ಪಬ್ಲಿಕ್ ಸರ್ವಿಸ್ ಕಮಿಷನ್ ಇರಬೇಕು ಮತ್ತು ಕೆಳಗೆ ಇರತಕ್ಕಂಥ ಹುದ್ದೆಗಳಿಗಾಗಿ ಡಿಪಾರ್ಟಮೆಂಟು ನೇಮಕ ಮಾಡಿದರೆ ಉಚಿತವಾಗುತ್ತದೆ. ಇಲ್ಲದಿದ್ದರೆ ಎರಡು ಮೂರು ವರ್ಷ ನೇಮಕ ತಡವಾಗುತ್ತವೆ. ಆದುದರಿಂದ ಸರಕಾರ ತನ್ನ ಪಾಲಿಸಿ ಬದಲಾವಣೆ ಮಾಡಲು ಯೋಚನೆ ಮಾಡುತ್ತದೆಯೇ ? ಹಿಂದೆ ಹೈದರಾಬಾದನಲ್ಲಿ ಹೀಗ ಇತ್ತು. ಆದನ್ನು ಇಲ್ಲಿಯೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ :—ಇದು ಹೊಸದೇನೂ ಅಲ್ಲ. ಇಲ್ಲಿಯಾ ಹಾಗೇ ಇತ್ತು ಕ್ಲಾಸ್ ೧ ಕ್ಲಾಸ್ ೨ ಪಬ್ಲಿಕ್ ಸರ್ವಿಸ್ ಕಮಿಷನ್ ರಿಕ್ರೂಟ್‌ಮೆಂಟ್ ಮಾಡುತ್ತಿತ್ತು. ಕೆಳಗಿನ ಹುದ್ದೆಗಳಿಗೆ ಸ್ಟೇಟ್ ಲೆವೆಲ್ ರಿಕ್ರೂಟ್‌ಮೆಂಟ್‌ಕಮೀಟಿ, ಡಿವಿಜನಲ್ ಲೆವೆಲ್ ರಿಕ್ರೂಟ್‌ಮೆಂಟ್ ಕಮೀಟಿ ಕೆಲಸಮಾಡುತ್ತಿದ್ದವು. ಮುಂದೆ ಕ್ಲಾಸ್ ೩ ಪೋಸ್ಟ್ ನೇಮಕ ಪಿಎಸ್‌ಸಿಗೆ., ವರ್ಗಾಯಿಸಲಾಯಿತು. ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ ಅದನ್ನು ಪರಿಶೀಲನೆ ಮಾಡಬೇಕಾಗಿದೆ.

BUDGET ESTIMATES FOR 1970-71 – *DEMANDS FOR GRANTS*

Demand Nos. 6, 29, 30, 30A, 30B, 31, 31A, 32, 43, 45, 46, 47,48, 50 & 50A — (Debate continued)

ಶ್ರೀ ಎಂ. ನಾಗಪ್ಪ (ರಾಯಚೂರು):—ಮಾನ್ಯ ಅಧ್ಯಕ್ಷರೇ, ನಾನು ಈಗ ಮಾನ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತ ಸಂಬಂಧಪಟ್ಟ ಖಾತೆಗಳ ಬಗ್ಗೆ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಶ್ರೀ ಎಂ. ನಾಗಪ್ಪ)

ನಮ್ಮ ಮೈಸೂರು ರಾಜ್ಯದಲ್ಲಿ ಸಾಧಾರಣವಾಗಿ ಶೇಕಡಾ ೭೦ಕ್ಕೂ ಮೇಲ್ಪಟ್ಟಿರತಕ್ಕವರು ವ್ಯವಸಾಯ ಮಾಡತಕ್ಕ ಜನರೆಂದರೆ ಅದರಲ್ಲಿ ಅತಿಶಯೋಕ್ತಿಯೇನೂ ಇಲ್ಲ. ನಮ್ಮ ಸರ್ಕಾರದವರು ಈ ಸಾಲಿಗೆ ವ್ಯವಸಾಯದ ಬಾಬಿಗೂ ಮತ್ತು ಎಲೆಕ್ಟ್ರಿಟಿಗೂ ಒದಗಿಸಿರತಕ್ಕ ಹಣ ಬಹಳ ಕಡಿಮೆ. ಈಗ ನಾವು ಒಂದು ಕಡೆ ಹಸಿರು ಕ್ರಾಂತಿಯನ್ನು ತರಬೇಕೆಂದು ಉದ್ದೇಶ ಇಟ್ಟುಕೊಂಡು ಅದಕ್ಕಾಗಿ ವ್ಯವಸಾಯದ ಇಲಾಖೆಗೆ ೧೧ ಕೋಟಿ ರೂಪಾಯಿಗಳನ್ನ ಒದಗಿಸಲಾಗಿದೆ. ಆದರೆ ಅದೇ ನೀತಿಯನ್ನು ನೀರಾವರಿ ಯೋಜನೆಗಳ ಬಗ್ಗೆ ಸರ್ಕಾರದವರು ತಾಳಿಲ್ಲ. ಆದ್ದರಿಂದ ರಾಜ್ಯಕ್ಕೆ ಆ ಹಸಿರು ಕ್ರಾಂತಿಯನ್ನು ಸಾಧಿಸಲು ಎಷ್ಟರಮಟ್ಟಿಗೆ ಸಾಧ್ಯ ಎಂಬುದನ್ನು ನಾವು ಪರಿಶೀಲನೆ ಮಾಡಬೇಕಾಗಿದೆ. ಸರ್ಕಾರದವರು ಈ ಎರಡು ಬಾಬುಗಳ ಬಗ್ಗೆ ತಾಳಿರತಕ್ಕ ಧೋರಣೆಗಳು ಒಂದಕ್ಕೊಂದಕ್ಕೆ ವ್ಯತ್ಯಾಸವಾಗಿವೆ; ಅಷ್ಟು ಸಮಂಜಸವಾಗಿಲ್ಲ. ನಮ್ಮಲ್ಲಿ ಇದುವರೆಗೆ ಆಗಲೀ ಮೂರು ಯೋಜನೆಗಳು ಮುಕ್ತಾಯವಾಗಿವೆ. ಈ ಮೂರು ಯೋಜನೆಗಳಿಂದಲೂ ನಮ್ಮ ಸರ್ಕಾರದವರು ೩೧೫.೦೫ ಕೋಟಿ ರೂಪಾಯಿಗಳ ಬಂಡವಾಳವನ್ನು ನಿಗದಿಮಾಡಿ ಅಷ್ಟು ಹಣವನ್ನು ಖರ್ಚುಮಾಡಿ ಇಲ್ಲಿ. ಅಂದರೆ ನಮ್ಮ ರಾಜ್ಯದಲ್ಲಿ ಹತ್ತು ಮೇಜರ್ ಮತ್ತು ಇಪ್ಪತ್ತಾರು ಮಿಡಿಯಂ ನೀರಾವರಿ ಯೋಜನೆಗಳನ್ನು ಅಂದರೆ ಒಟ್ಟು ೩೬ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಯಿತು. ಆ ಪೈಕಿ ಕೇವಲ ಭದ್ರಾ ಮತ್ತು ಇನ್ನೊಂದು ಹೀಗೆ ಎರಡು ಯೋಜನೆಗಳನ್ನು ಮಾತ್ರ ಸಂಪೂರ್ಣವಾಗಿ ಮುಗಿಸಲಾಗಿದೆ. ಇನ್ನುಳಿದ ೩೪ ಯೋಜನೆಗಳೆಲ್ಲಾ ಕೆಲಸಗಳು ಹಂತಹಂತದಲ್ಲೇ ನಿಂತು ಹೋಗಿವೆ. ಇದಕ್ಕಾಗಿ ನಮ್ಮ ಸರ್ಕಾರವವರು ಇಲ್ಲಿಯವರೆಗೂ ಖರ್ಚುಮಾಡಿರತಕ್ಕ ಹಣ ೩೧೫.೦೫ ಕೋಟಿ ರೂಪಾಯಿಗಳಲ್ಲಿ ಖರ್ಚಾಗಿರುವುದು ಕೇವಲ ೯೫.೬೫ ಕೋಟಿ ರೂಪಾಯಿಗಳು ಮಾತ್ರ. ಅಂದರೆ ಈ ಯೋಜನೆಗಳ ಕೆಲಸ ಕಾರ್ಯಗಳಲ್ಲಿ ಮೂರನೆ ಒಂದು ಭಾಗ ಕೂಡ ಆಗಿಲ್ಲವೆಂಬುವುದು ಸ್ಪಷ್ಟವಾಗಿ ಕಾಣಂತ್ತಿದೆ. ನಮ್ಮ ಎಲ್ಲಾ ಯೋಜನೆಗಳ ಕಾರ್ಯ ಸಂಪೂರ್ಣವಾಗಿ ಮುಗಿಸಿದ್ದರೆ ಅವುಗಳಿಂದ ಒಟ್ಟು ೩೧.೧೬ ಲಕ್ಷ ಎಕರೆಗಳು ನೀರಾವರಿಯಾಗುತ್ತಿತ್ತು. ಆದರಲ್ಲಿ ಸಾಧಿಸಿರತಕ್ಕುದ್ದು ೬.೬೭ ಲಕ್ಷ ಎಕರೆಗಳು ಮಾತ್ರ. ಇದನ್ನು ನೋಡಿದರೆ ನಮ್ಮ ಸರ್ಕಾರಕ್ಕೆ ನಮ್ಮ ನೀರಾವರಿ ಯೋಜನೆಗಳ ಬಗ್ಗೆ ಎಷ್ಟು ಅಲಕ್ಷ್ಯ ಮತ್ತು ನಿರ್ಲಕ್ಷ್ಯವಿದೆ ಎಂಬುದು ಇದರಿಂದಲೇ ವ್ಯಕ್ತವಾಗುತ್ತದೆ. ನಮ್ಮ ಸರ್ಕಾರದವರು ಕೈಗೊಂಡ ೩೬ ಯೋಜನೆಗಳಲ್ಲಿ ಯಾವುದು ಒಂದನ್ನೂ ಸಂಪೂರ್ಣವಾಗಿ ಮಾಡುವುದಕ್ಕೆ ಇವರು ಯೋಗ್ಯರಾಗಿಲ್ಲ. ಆದ್ದರಿಂದ ನಾನು ರಾಜ್ಯ ಸರ್ಕಾರದ ಮೇಲೆ ನೇರವಾಗಿ ಈ ಒಂದು ಭಾರ್ಜನ್ನು ಮಾಡುತ್ತಿದ್ದೇನೆ. ಅದೇ ರೀತಿ ರಾಜ್ಯ ಮತ್ತು ಆಂತರ್ ರಾಜ್ಯ ನೀರಾವರಿ ವಿವಾದಗಳನ್ನು ದಕ್ಷತೆಯಿಂದ ಬಗೆಹರಿಸಿಕೊಳ್ಳುವುದರಲ್ಲಿ ನಮ್ಮ ಸರ್ಕಾರದವರು ವಿಫಲರಾಗಿದ್ದಾರೆ. ಕಳೆದ ಹತ್ತಾರು ವರ್ಷಗಳಿಂದಲೂ ನಮಗೂ ಮತ್ತು ಆಂಧ್ರ ಹಾಗೂ ಮಹಾರಾಷ್ಟ್ರಗಳಿಗೆ ನೀರಿನ ವ್ಯವಹಾರವಿದ್ದರೂ ಅದನ್ನು ತೀರ್ಮಾನ ಮಾಡುವುದಕ್ಕಾಗಿಲ್ಲ. ಇದು ರಾಜ್ಯ ಸರ್ಕಾರದವರ ಮೊದಲನೆಯ ಕರ್ತವ್ಯವಾಗಿತ್ತು. ನಮಗೆ ಸ್ವರಾಜ್ಯ ಬಂದು ೨೨ ವರ್ಷಗಳು ಕಳೆದಾಗ್ಯೂ ನಾವು ಈ ವಿಚಾರದಲ್ಲಿ ಅಯಶಸ್ವಿಯಾಗಿದ್ದೇವೆ. ಅಷ್ಟೇ ಅಲ್ಲ ಈ ವಿಚಾರದಲ್ಲಿ ನಮಗಿದ್ದ ಕೆಲವು ಹಕ್ಕುಗಳನ್ನೂ ಕೂಡ ನಾವು ಕಳೆದುಕೊಂಡಿದ್ದೇವೆ. ನಮ್ಮ ರಾಜ್ಯ ಸರ್ಕಾರದ ಮೇಲೆ ಇದು ನನ್ನ ಎರಡನೆಯ ಭಾರ್ಜ್. ರಾಜ್ಯ ಸರ್ಕಾರದವರು ನಮ್ಮ ರಾಜ್ಯದ ವ್ಯವಸಾಯದ ಜನರ ಜೊತೆಯಲ್ಲಿ ಏನು ಆಟವಾಡುತ್ತಿದ್ದಾರೆಂಬುದಕ್ಕೆ ಕೃಷ್ಣಾ ಮತ್ತು ಗೋದಾವರಿ ನೀರಿನ ವ್ಯವಹಾರದಲ್ಲಿ ಇವರು ಮಾಡಿರತಕ್ಕ ಒಂದು ಮೆಮೊರಾಂಡದಲ್ಲಿ ಏನು ಹೇಳಿದ್ದಾರೆಂಬುದನ್ನು ನೋಡಿದರೆ ಗೊತ್ತಾಗುತ್ತದೆ. ಕೊಯಿನಾ ಪ್ರಾಜೆಕ್ಟಿನ ವಿಚಾರದಲ್ಲಿ ಕೂಡ ನಾವು ನಮ್ಮ ಹಕ್ಕನ್ನು ಕಳೆದುಕೊಂಡಿದ್ದೇವೆ. ಕೊಯಿನಾ ಅಣೆಕಟ್ಟಿನಿಂದ ರಾಜ್ಯಗಳ ಪುನರ್ವಿಂಗಡಣೆಯ ಮುನ್ನ ಬಿಜಾಪುರದ ಕೆಲವು ಭಾಗಗಳಿಗೆ ನೀರಾವರಿ ಆಗತಕ್ಕ ಯೋಜನೆ ಒಂದು ಇದ್ದುದರಿಂದ, ರಾಜ್ಯಗಳ ಪುನರ್ವಿಂಗಡಣೆಯಾದ ನಂತರ ಬಿಜಾಪುರ ಜಿಲ್ಲೆ ಮೈಸೂರಿಗೆ ಸೇರಿದ್ದರಿಂದ ಬೊಂಬಾಯಿ ಸರ್ಕಾರದವರು ಮೈಸೂರು ರಾಜ್ಯ ಸರ್ಕಾರಕ್ಕೆ ಒಂದು ಪತ್ರವನ್ನು ನಮ್ಮ ಕಡೆಯಿಂದ ನಮ್ಮ ಭಾಗದ ಹಣವನ್ನು ಹಾಕುವುದಕ್ಕೆ ಬರೆದಿದ್ದಾಗ, ನಮ್ಮ ಸರ್ಕಾರದವರು ತಾಳಿದ ಧೋರಣೆಯಿಂದ ಅಂದರೆ ಆ ಕೊಯಿನಾ ನೀರು ನಮ್ಮ ಪ್ರದೇಶಕ್ಕೆ ಬರುವುದಿಲ್ಲ ಎಂದು ಹೇಳಿ ಆ ನೀರನ್ನು ಕೈಬಿಟ್ಟರು. ಹಾಗಾಗಿ ಆ ನೀರನ್ನೂ ಕೂಡ ಕೈಬಿಟ್ಟ ಹಾಗಾಯಿತು, ಅದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಮುಂಬೈ ಸರ್ಕಾರದವರು ಬರೆದಿರತಕ್ಕ ಪತ್ರದ ಕೆಲವು ಅಂಶಗಳನ್ನು ನಾನು ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ:—

> "The Government of India are given to understand that the Government of Bombay immediately after Re-organisation had requested the Government of Mysore to share the cost of construction of the Koyna Project and take advantage of the storage contemplated for irrigation

in Bijapur District. It would appear that the Government of Mysore did not finalise this matter for a considerable time and the Government of Bombay and the successor Government of Maharashtra has no option but to make alternate arrangements."

ಈ ಒಂದು ಲೆಟರನ್ನು ನಾವು ನೋಡಿದರೆ ನಮ್ಮ ಸರ್ಕಾರ ನಮಗೆ ಬರಬೇಕಾದ ಪಾಸ್ಟವಿಕವಾದ ನೀರಿನ ಹಕ್ಕಿನ ಬಗ್ಗೆ ಯಾವ ರೀತಿ ನಡೆದುಕೊಂಡಿದ್ದಾರೆಂಬುದು ಚೆನ್ನಾಗಿ ಗೊತ್ತಾಗುತ್ತದೆ.

ಇನ್ನು ಎರಡನೇ ಉದಾಹರಣೆ ಎಂದರೆ ಅದು ರಾಜಲುಬಂಡೆಯ ಅಣೆಕಟ್ಟಿನ ವಿಚಾರ. ಆ ಅಣೆಕಟ್ಟಿಯಿಂದ ರಾಯಚೂರು ಜಿಲ್ಲೆಗೆ ಬಹಳ ಅನುಕೂಲವಾಗಿದೆ. ಆ ಅಣೆಯನ್ನು ಹಿಂದಿನ ಹೈದ್ರಾಬಾದ್ ಸರ್ಕಾರದವರು ಕಟ್ಟಿಸಿದ್ದರು. ರಾಜ್ಯಗಳ ಪುನರ್ವಿಂಗಡಣೆಯ ನಂತರ ಅದು ಮೈಸೂರು ರಾಜ್ಯಕ್ಕೆ ಬಂತು. ಆರ್. ಡಿ ಎಸ್. ಕೆಳಗಡೆ ಮೊದಲು ೬ ಸಾವಿರ ಎಕರೆ ತರೀ ಸಾಗುವಳಿ ಆಗುತ್ತಿತ್ತು. ಆ ನೀರಾವರಿ ಯೋಜನೆಯಿಂದ ಆಲಂಪುರ ಮತ್ತು ಗದ್ವಾಲ್ ತಾಲ್ಲೂಕುಗಳಿಗೂ ನೀರು ಹೋಗುತ್ತಿತ್ತು. ಅವು ಮತ್ತೆ ಆಂಧ್ರಕ್ಕೆ ಸೇರಿದ ನಂತರ ರಾಯಚೂರು ಜಿಲ್ಲೆಯ ಇನ್ನೂ ಅನೇಕ ಭಾಗಗಳಿಗೆ ಅದರ ನೀರನ್ನು ಬಳಸತಕ್ಕ ಅವಕಾಶವಿತ್ತು. ಆ ಅಣೆಕಟ್ಟಿನ ಅಚ್ಚುಕಟ್ಟಿನ ವಿಸ್ತೀರ್ಣ ೧೦ ಎಕರೆಗಳವರೆಗೂ ಅಂದಾಜು ಮಾಡಲಾಗಿತ್ತು. ಅದನ್ನು ನಮ್ಮ ಸರ್ಕಾರ ಕಾರ್ಯಗತ ಮಾಡದಿದ್ದ ಕಾರಣ ಆ ಹಕ್ಕನ್ನೂ ಕೂಡ ನಾವು ಕಳೆದುಕೊಂಡಹಾಗಾಯಿತು. ಹೀಗಾಗಿ ನಮ್ಮ ರಾಜ್ಯ ಸರ್ಕಾರದವರು ಅನೇಕ ಭಾಗದಲ್ಲಿ ತಮ್ಮ ಹಕ್ಕಿನ ನೀರನ್ನೂ ಕೂಡ ಬಳಸದೆ ಆ ಹಕ್ಕನ್ನು ಕಳೆದುಕೊಂಡಿದ್ದಾರೆ. ಆ ಹಕ್ಕನ್ನು ಊರ್ಜಿತ ಮಾಡಿಕೊಳ್ಳುವುದರಲ್ಲಿ ವಿಫಲರಾಗಿದಾರೆ. ಅದು ಈಗಾಗಲೇ ಈ ಮಾನ್ಯ ಸಭೆಯಲ್ಲಿ ಕಾವೇರಿ ಜಲಾಶಯ ಪ್ರದೇಶಗಳ ಅಣೆಕಟ್ಟುಗಳ ಬಗ್ಗೆ ಸಾಕಷ್ಟು ಚರ್ಚೆಯಾಗಿರುವುದರಿಂದ ಅವುಗಳ ಬಗ್ಗೆ ನಾನು ಮಾತನಾಡುವುದಕ್ಕೆ ಈಗ ಇಷ್ಟಪಡುವುದಿಲ್ಲ. ನಾನು ಇದೇ ಸಂದರ್ಭದಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕಾದ ಒಂದು ವಿಷಯ ಎಂದರೆ ಅದು ಅಪ್ಪರ್ ಕೃಷ್ಣಾಕ್ಕೆ ಸಂಬಂಧಿಸಿದ್ದು. ಅಪ್ಪರ್ ಕೃಷ್ಣ ಎಡನಾಲೆಯಿಂದ ರಾಯಚೂರು ಮತ್ತು ಹುನುಗುಂದ್ ತಾಲ್ಲೂಕುಗಳಿಗೆ ನೀರನ್ನು ಒದಗಿಸತಕ್ಕ ಯೋಜನೆಯಿತ್ತು. ಕೃಷ್ಣ ಎಡನಾಲೆಯಿಂದ ಲಿಫ್ಟ್ ಇರಿಗೇಷನ್ನೂ ಸೇರಿ ೧೫ ಲಕ್ಷ ಎಕರೆಗಳಿಗೆ ಅಂದಾಜುಪಾಡಲಾಗಿತ್ತು. ಅಲ್ಲದೆ ಕೃಷ್ಣ ಬಲನಾಲೆಯಿಂದ ರಾಯಚೂರು ಮತ್ತು ಬಿಜಾಪುರ ಜಿಲ್ಲೆಯ ಹುನಗುಂದ್ ಈ ತಾಲ್ಲೂಕುಗಳಿಗೆ ೫ ಲಕ್ಷ ಎಕರೆಗಳಿಗೆ ನೀರನ್ನು ಒದಗಿಸತಕ್ಕ ಅಂದಾಜು ಮಾಡಿತ್ತು. ಆದರೇ ಇದರಿಂದಲೂ ರಾಯಚೂರು ಜಿಲ್ಲೆಗೆ ಅನುಕೂಲವಾಗಲಿಲ್ಲ. ಏಕೆಂದರೆ ಕೃಷ್ಣ ಅಪ್ಪರ್ ನಾಲೆಯ ಎರಡನೇ ಸ್ಟೇಜಿಗೆ ಕೇಂದ್ರದವರ ಮಂಜೂರಾತಿ ಇನ್ನೂ ದೊರೆಯದೆ ಇರುವುದು. ಅಲ್ಲದೆ ಅತ್ತ ಆ ರಜಲುಬಂಡಾ ಯೋಜನೆಯಿಂದಲೂ ಕೂಡ ಒಡಾವಣೆ ಆಗದೆ ಅದರಿಂದಲೂ ಅನುಕೂಲವಾಗಲಿಲ್ಲ.

ನಾನು ಕೇಳುತ್ತೇನೆ ಸೆಕೆಂಡ್ ಸ್ಟೇಜ್ ಎಂದರೆ ಏನು ? ತಾವು ಏನೇನು ಕಾರ್ಯಕ್ರಮ ಹಾಕಿಕೊಂಡಿದ್ದೀರೊ ಆ ಕಾರ್ಯಕ್ರಮದ ಪ್ರಕಾರ ಬೇರೆ ಮೈನ್ ಕೆನಾಲ್ ಮಾಡುವಂಥಾದ್ದನ್ನು ಮಾತ್ರ ಬಿಟ್ಟು ಇನ್ನು ಯಾವ ಕಾರ್ಯಕ್ರಮವೂ ಸೇರಿಲ್ಲ. ಈ ಸಭೆಯಲ್ಲಿ ಈಗಾಗಲೇ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳನ್ನು ಅನೇಕ ಸಲ ಕೇಳಿದ್ದೇನೆ. ತಾವು ಬೇಕಾದರೆ ಕಾಂಟ್ರಿಬ್ಯೂಷನ್ ತೆಗೆದುಕೊಳ್ಳಿ. ಹಣ ಇಲ್ಲ ಎಂದರೆ ಜನ ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ರೈಟ್ ಬ್ಯಾಂಕ್ ಮೈನ್ ಕೆನಾಲ್ ತೆಗೆಯುವುದಕ್ಕೆ ಕ್ಲಿಯರೆನ್ಸ್ ಬೇಕಾಗಿಲ್ಲ. ಏತಕ್ಕೆಂದರೆ ಇದು ಸೆಕೆಂಡ್ ಸ್ಟೇಜ್ ಅಲ್ಲ. ಫಸ್ಟ್ ಸ್ಟೇಜಿಗೆ ಕ್ಲಿಯರೆನ್ಸ್‌ಗೆ ಕೊಟ್ಟಿದ್ದರೊಳಗೆ ಅಷ್ಟೇ ನೀರನ್ನು ನಿಲ್ಲಿಸಿ ಅದೇ ಅಂದಾಜಿಗೆ ಅಣೆಕಟ್ಟೆ ಕಟ್ಟಬಹುದು. ಇದರಲ್ಲಿ ಬೇರೆ ಕೆನಾಲ್ ಆಗೆಯುವುದು ಅಷ್ಟೆ ಉಳಿದಿದೆ. ಏತಕ್ಕೆಂದರೆ ಒಂದು ಲೆವಲ್‌ಮೇಲೆ ಈ ಎರಡು ಕೆನಾಲ್ ನೀರು ಹೋಗುತ್ತೆ. ಆದುದರಿಂದ ಸೆಕೆಂಡ್ ಸ್ಟೇಜ್‌ನ್ನು ಕೈಬಿಡಬೇಕೇ ಎನ್ನುವುದನ್ನು ಕೇಂದ್ರ ಸರ್ಕಾರದವರನ್ನಾಗಲಿ, ಸಿ. ಪಿ. ಡಬ್ಲ್ಯು. ಡಿ. ಯವರನ್ನಾಗಲಿ, ಪ್ಲಾನಿಂಗ್ ಕಮೀಷನ್ನಿನವರನ್ನಾಗಲಿ ಯಾರನ್ನೂ ಕೇಳುವುದು ಬೇಕಾಗಿಲ್ಲ. ಈ ಕೆಲಸವೆಲ್ಲಾ ಒಂದೇ ಸ್ಟೇಜಿಗೆ ಬರುತ್ತದೆ. ಆದುದರಿಂದ ಅಪ್ಪರ್ ಕೃಷ್ಣಾ ಬಲದಂಡೆ ಕಾಲುವೆಯನ್ನು ರಾಜ್ಯ ಸರ್ಕಾರದವರೇ ತೀವ್ರ ಕೈಕೊಂಡು ಮುಗಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಎರಡನೆಯದಾಗಿ ಇನ್ನು ತುಂಗಭದ್ರಾ ಪ್ರಾಜೆಕ್ಟ್ ವಿಷಯ ಹೇಳಬೇಕಾದರೆ ಇದರಲ್ಲಿ ಸರ್ಕಾರದವರು ೫ ಲಕ್ಷ ೮೨ ಸಾವಿರ ಈ ನೀರಾವರಿ ಯೋಜನೆಯಲ್ಲಿ ಬಂದಿದೆ ಎಂದು ಹೇಳಿದ್ದಾರೆ. ಅಂದರೆ, ಸಾಧಾರಣವಾಗಿ ೬ ಲಕ್ಷ ಎಕರೆ ತೆಗೆದುಕೊಳ್ಳಬಹುದು. ಇದರಲ್ಲಿ ೫೦ ರಿಂದ ೨೫ ಸಾವಿರ ಎಕರೆಯವರೆಗೆ ಕೆನಾಲ್ ಸೀಪೇಜ್ ಬಂದುನೀರಾವರಿ ಆಗದೆ ಹಾಗೆಯೇ ಉಳಿದಿದೆ. ಎರಡು ವರ್ಷದ ಮುಂಚೆಯೇ ನಮ್ಮ ರಾಜ್ಯದಲ್ಲಿ ಮಂತ್ರಿ-

(ಶ್ರೀ ಎಂ. ನಾಗಪ್ಪ)

ಗಳು ಪ್ರವಾಸ ಬಂದಿದ್ದಾಗ್ಗೆ ಲೀಕೇಜ್ ವಿಚಾರದಲ್ಲಿ ಹೇಳಿದ್ದೆ. ಅವರು ಅಷ್ಯೂರೆನ್ಸ್ ಕೊಟ್ಟರು. ಏನೆಂದರೆ ಇನ್ನೂ ೭೫ ಸಾವಿರ ಎಕರೆಯಷ್ಟು ನೀರಾವರಿ ತರಲಿಕ್ಕೆ ಯೋಜನೆ ಮಾಡುತ್ತೇವೆ ಎಂದು ಹೇಳಿದರು. ಇದರ ಬಗ್ಗೆ ಈವೊತ್ತಿನವರೆಗೂ ಏನೂ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ. ಆದುದರಿಂದ ಇದನ್ನು ಪುನರಾಲೋಚನೆ ಮಾಡಿ ಇನ್ನು ೭೫ ಸಾವಿರ ಎಕರೆಯಷ್ಟು ಹೆಚ್ಚಿಗೆ ನೀರಾವರಿಯನ್ನು ತುಂಗಭದ್ರ ಬಲದಂಡೆಯಲ್ಲಿ ಮಾಡಬೇಕು ಎಂದು ಹೇಳುತ್ತೇನೆ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯ ಹೇಳುತ್ತೇನೆ. ತುಂಗಭದ್ರ ನೀರಾವರಿ ಯೋಜನೆ ಬಗ್ಗೆ, ಇದರಲ್ಲಿ ೬ ಲಕ್ಷ ಎಕರೆ ಜಮೀನಿಗೆ ನೀರಾವರಿ ಆಗುವ ವಿಚಾರದಲ್ಲಿ ಈ ಪ್ರಾಜೆಕ್ಟ್‌ಗೆ ಎಷ್ಟು ಕೋಟಿ ರೂಪಾಯಿ ಖರ್ಚಾಗಿದೆ ಎನ್ನುವುದು ರಾಜ್ಯ ಸರ್ಕಾರಕ್ಕೂ ಗೊತ್ತಿದೆ, ಜನತೆಗೂ ಗೊತ್ತಿದೆ. ಆದರೆ ಇದರಲ್ಲಿ ಡೆವಲಪ್‌ಮೆಂಟ್ ಆಗಿರತಕ್ಕಂಥಾದ್ದು ೨ ಲಕ್ಷ ಅಥವಾ ೩ ಲಕ್ಷ ಎಕರೆ ಆಗಿದೆ. ಇನ್ನೂ ೨ ಲಕ್ಷ ಎಕರೆ ಡೆವಲಪ್‌ಮೆಂಟ್ ಮಾಡಬೇಕು. ಈ ಕೆಲಸ ಹಣ ಇಲ್ಲದ್ದರಿಂದ ಆಗುತ್ತಾ ಇಲ್ಲ. ಈಗ ನ್ಯಾಷನಲ್ ವೇಸ್ಟ್ ಆಗುತ್ತಾ ಇದೆ. ತಾವು ೧೦ ವರ್ಷ ಕಳೆದಮೇಲೆ ಡೆವಲಪ್‌ಮೆಂಟ್‌ಗಾಗಿ ಸರ್ಕಾರದವರು ರೈತರ ಮೇಲೆ ಹೆಚ್ಚು ಟ್ಯಾಕ್ಸ್ ಹಾಕಬಹುದು, ಹೆಚ್ಚು ಹೆಚ್ಚು ಫೈನ್ ಹಾಕಬಹುದು. ಅದಕ್ಕಾಗಿ ನಾನು ಒಂದು ಸಲಹೆ ಕೊಡುತ್ತೇನೆ. ತಾವು ಅವರಿಗೆ ಭೂಮಿ ಕೊಟ್ಟಮೇಲೆ ಅವರಿಗೆ ಇಂತಿಷ್ಟು ಸಮಯದಲ್ಲಿ ಆ ಭೂಮಿಯನ್ನು ಡೆವಲಪ್ ಮಾಡಬೇಕು ಎಂದು ನಿಗದಿ ಮಾಡಿ. ಅಂದರೆ ತಾವು ಕೊಟ್ಟಂಥ ಭೂಮಿಯನ್ನು ೫ ವರ್ಷದೊಳಗೆ ಡೆವಲಪ್ ಮಾಡಬೇಕು ಎಂದು ಹೇಳುತ್ತೇನೆ. ೪ ವರ್ಷದವರೆಗೂ ಅವರು ಆ ಭೂಮಿಯನ್ನು ಡೆವಲಪ್ ಮಾಡದೇ ಹಾಗೆ ಬಿಟ್ಟಿದ್ದರೆ ಬೇರೆಯವರಿಗೆ ಕೊಡುತ್ತೇವೆಂದು ಮಾಡಿ, ಯಾರು ಯಾರು ಆ ರೀತಿ ಡೆವಲಪ್ ಮಾಡುತ್ತಾರೋ ಆ ಒಂದು ನಿಗದಿಯಾದ ಸಮಯದಲ್ಲಿ ಆ ಭೂಮಿ ಡೆವಲಪ್ ಆಗಿದ್ದರೆ ಅಂಥಹವರಿಗೆ ಲೋಕಲೈಸೇಷನ್ ಮಾಡಿ. ಯಾರು ಯಾರು ಡೆವಲಪ್‌ಮೆಂಟ್ ಮಾಡುತ್ತಾ ಇಲ್ಲ, ಅವರಿಗೆ ಲೋಕಲೈಸೇಷನ್ ಮಾಡಬೇಡಿ. ಆವಾಗ ಅನೇಕ ಭೂಮಿ ಆಯ ಕಟ್ಟಿಗೆ ಬರುತ್ತದೆ. ಮತ್ತು ಅನೇಕ ಭೂಮಿಗಳು ಡೆವಲಪ್ ಮಾಡದೇ ಇರುವುದು ಬೇರೆಯವರಿಗೆ ಕೊಡುವುದಕ್ಕೆ ಬರುತ್ತದೆ. ದಯವಿಟ್ಟು ಆ ರೀತಿ ಮಾಡಬೇಕೆಂದು ನಾನು ಸೂಚನೆ ಕೊಡುತ್ತೇನೆ. ಲೋಕಲೈಸೇಷನ್ ಪ್ಯಾಟ್ರನ್ ಬಗ್ಗೆ ಮಲತಾಯಿ ಧೋರಣೆ ತೋರಿಸುತ್ತಾ ಇದ್ದೀರಿ. ಅದೇನೆಂದರೆ ಬಳ್ಳಾರಿ ಜಿಲ್ಲೆಯಲ್ಲಿ ಕಲೆಕ್ಟರ್ ಒಂದು ಲ್ಯಾಂಡನ್ನು ಪರಿಶೀಲನೆ ಮಾಡಿ ಇಂಥ ಬೆಳೆಯನ್ನು ಬೆಳೆಯಬೇಕು ಎನ್ನುವುದಾಗಲಿ ಅಥವಾ ಹೈ ಇರ್ರಿಗೇಷನ್ ಮಾಡಬೇಕು ಎನ್ನುವುದಾಗಲಿ ಹಾಗೆ ಹೇಳತಕ್ಕ ಅಧಿಕಾರ ಅವರಿಗೆ ಕೊಟ್ಟಿದೆ. ಆ ಜಿಲ್ಲೆಯ ಜಿಲ್ಲಾ ಕಲೆಕ್ಟರೇ ಈ ಕೆಲಸವನ್ನು ಮಾಡುತ್ತಾರೆ. ಆದರೆ ಇದೇ ತರಹ ಅಧಿಕಾರ ರಾಯಚೂರು ಜಿಲ್ಲೆಯ ಕಲೆಕ್ಟರಿಗೆ ಕೊಟ್ಟಿಲ್ಲ. ಇದನ್ನು ಪುನರ್ ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ. ಈಗ ನಮ್ಮ ಏರಿಯಾ ಡೆವಲಪ್ ಆಗಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ಅಲ್ಲಿ ಹೆವಿ-ಇರ್ರಿಗೇಷನ್‌ಗೆ ಸಾಕಷ್ಟು ಬೇಡಿಕೆ ಇದೆ. ಆದರ ಬಗ್ಗೆ ತಾವು ಸೂಕ್ತವಾಗಿ ಯೋಚನೆ ಮಾಡಿ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಈ ಸಮಯದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಮೈನರ್ ಇರ್ರಿಗೇಷನ್ ಬಗ್ಗೆ ಒಂದು ವಿಷಯ ಹೇಳುತ್ತೇನೆ. ರಾಯಚೂರಿನಲ್ಲಿ ೧೯೬೧-೬೨ ರಲ್ಲಿ ೨ ಟ್ಯಾಂಕು ಕಟ್ಟಿದರು. ಅದು ಮಡಿಗಲ್‌ದಿಣ್ಣೆ ಮತ್ತು ಎಗನೂರಿಗೆ ಸೇರಿದ ಟ್ಯಾಂಕ್‌ಗಳು. ಎಲೆಕ್ಷನ್ ಸಮಯದಲ್ಲಿ ಅದನ್ನು ಒಬ್ಬ ಕಂಟ್ರಾಕ್ಟರಿಗೆ ಕೊಟ್ಟು ರಿಪೇರಿ ಮಾಡಿಸಿದರು. ಒಂದೊಂದು ಟ್ಯಾಂಕ್‌ಗೂ ಒಂದೊಂದು ಲಕ್ಷ ರೂಪಾಯಿ ಖರ್ಚಾಯಿತು. ಅದು ಮೊದಲನೇ ಮಳೆ ಬಂದಾಗಲೇ ವಾಷ್‌ಔಟ್ ಆಯಿತು. ಈಗಾಗಲೇ ಒಂದು ವರ್ಷವಾದರೂ ಕೂಡ ಅಲ್ಲಿ ಚೀಫ್ ಇಂಜಿನಿಯರ್ ಆ ಕಂಟ್ರಾಕ್ಟರು ಎಲ್ಲಿ ಹೋದರೋ ಗೊತ್ತಿಲ್ಲ ಎಂದು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳಿಗೂ ನಾನು ಸ್ವಂತ ಬರವಣಿಗೆಯಲ್ಲೇ ಬರೆದುಕೊಟ್ಟಿದ್ದೇನೆ. ಇದು ೪-೫ ವರ್ಷವಾಯಿತು. ಮಣ್ಣು ಟೆಸ್ಟ್ ಮಾಡಬೇಕು, ಹೈದ್ರಾಬಾದ್ ಲ್ಯಾಬರೇಟರಿಗೆ ಕಳುಹಿಸಿದ್ದೇವೆ ಎಂದು ಹೇಳುತ್ತಾರೆ. ಆದರೆ ಆ ಆಯಕಟ್ಟಿನಲ್ಲಿರತಕ್ಕಂಥ ಜನಕ್ಕೆ ಎಷ್ಟು ಕಷ್ಟವಾಗಿದೆ ಎಂದು ತಿಳಿದು ಕೊಳ್ಳಬೇಕು. ಆ ಕಂಟ್ರಾಕ್ಟರು ಎಲ್ಲೋ ಪರಾರಿಯಾಗಿ ಹೋಗಿದ್ದಾನೆ. ಅವನಿಂದ ಯಾವ ಹಣವನ್ನೂ ಪಡೆಯುವ ಸ್ಥಿತಿಯಲ್ಲಿಲ್ಲ. ಅದು ಏನಾದರೂ ಆಗಲಿ, ಸೇಡಂ ಮತ್ತು ಆಫಜಲ್‌ಪುರ್ ರೈತರ ಕಷ್ಟಗಳನ್ನು ದೂರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗಾಗಲೇ ಮಾನ್ಯ ಮಂತ್ರಿಗಳು ಪಿ. ಡಬ್ಲ್ಯು. ಡಿ. ಮಂತ್ರಿಗಳು ಇದರಲ್ಲಿ ರಾಜಕೀಯ ಇಲ್ಲವೆಂದು ಹೇಳುತ್ತಾರೆ. ಈ ಸ್ಟೇಟ್‌ಮೆಂಟ್‌ನಲ್ಲಿ ಕೊಟ್ಟಿರುವುದನ್ನು ತಮ್ಮಗಳ ಎದುರಿಗೆ ಇಡುತ್ತೇನೆ. ಇದಕ್ಕೆ ಚಾಣಾಕ್ಷತನದ ಉತ್ತರ ಬೇಡಿ. ಆ ಸ್ಟೇಟ್‌ಮೆಂಟ್‌ನಲ್ಲಿ ಕೊಟ್ಟಿರುವ ಅಂಕಿ ಅಂಶ ಈರೀತಿ ಇದೆ: —

(3)

Gulbarga

Roads :	1966-67	3, 36, 416
	1967-68	6, 68, 891
	1968-69	3, 15, 017
Bridges :	1966-67	7, 173
	1967-68	43, 144
	1968-69	1, 47, 207
Buildings :	1966-67	2, 95, 877
	1967-68	27, 88, 022
	1968-69	22, 76, 212

Chincholi

Roads :	1966-67	1, 08, 888
	1967-68	9, 30, 180
	1968-69	6, 03, 631
Bridges :	1966-67	1, 25, 000
	1967-68	1, 37, 928
	1968-69	40, 633
Buildings :	1966-67	5, 29, 990
	1967-68	89, 693
	1969-70	31, 264

Chitapur

Roads :	1966-67	6, 03, 218
	1967-68	3, 78, 435
	1968-69	5, 21, 029
Bridges :	1966-67	6, 20, 552
	1967-68	5, 27, 871
	1968-69	3, 96, 260
Buildings :	1966-67	69, 690
	1967-68	33, 342
	1968-69	1, 19, 124

Aland

Roads :	1966-67	30, 151
	1967-68	1, 25, 844
	1968-69	96, 731
Bridges :	1966-67	21, 151
	1967-68	90, 932
	1968-69	1, 52, 861
Buildings :	1966-67	8, 809
	1967-68	22, 416
	1968-69	8, 164

(ಶ್ರೀ ಎಂ. ನಾಗಪ್ಪ)

ಈ ರೀತಿ ಅಂಕಿಅಂಶ ನೋಡಿದರೆ ತಾವು ರಾಜಕೀಯವಾಗಿ ವರ್ತಿಸುತ್ತೀರಿ ಎಂದು ಗೊತ್ತಾಗುತ್ತದೆ, ಈಗ ನಾನು ಓದಿರುವ ಅಂಕಿಅಂಶ ನೋಡಿದರೆ ಇದರಲ್ಲಿ ರಾಜಕೀಯ ಇದೆಯೇ ಇಲ್ಲವೇ ಎನ್ನುವ ಅಭಿಪ್ರಾಯ ಬರುತ್ತದೆ. ಇದನ್ನ್ ತಾವು ಗಮನಿಸಬೇಕು.

ಶ್ರೀ ಬಿ. ವಿ. ಮೂಗಾವಿ :—ರ್ಟಿ-ರ್ಟಿ ರಲ್ಲಿ ಬಿಲ್ಡಿಂಗ್ ಬಗ್ಗೆ ಸೇಡಂನಲ್ಲಿ ಎಷ್ಟು ಖರ್ಚಾಗಿದೆ ಎನ್ನುವುದನ್ನು ಓದಲಿಲ್ಲ.

ಶ್ರೀ ಎಂ. ನಾಗಪ್ಪ :— ಒಂದು ವರ್ಷ ಆ ರೀತಿ ಕೊಟ್ಟಿರಬಹುದು. ನಾನು ಈಗೊತ್ತು ಸ್ಪಷ್ಟವಾಗಿ ಹೇಳುತ್ತೇನೆ. ಏನೋ ಈ ವರ್ಷ ವಿರೋಧ ಪಕ್ಷದವರು ಬಂದಿರಬಹುದು, ಮುಂದಿನ ವರ್ಷ ನಿಮ್ಮ ಪಕ್ಷದವರೇ ಆರಿಸಿ ಬರಬಹುದು. ಆದರೆ ಆ ಏರಿಯಾ ಹಾಗೆಯೇ ಬ್ಯಾಕ್‌ವರ್ಡ್ ಏರಿಯಾ ಆಗಿ ಹಾಗೆಯೇ ಉಳಿದಿರುತ್ತೆ. ಅದನ್ನು ಗಮನಿಸಬೇಕು. ನಮ್ಮ ರಾಜ್ಯದಲ್ಲಿ ಸುಮಾರು ೨೬ ಮೇಜರು ಇರಿಗೇಷನ್ ಕೆಲಸಗಳು ಹಾಗೂ ಹತ್ತು ಮೈನರ್ ಇರಿಗೇಷನ್ ಯೋಜನೆ ಎಂದು ಇಟ್ಟುಕೊಂಡಿದ್ದೀರಿ. ನಾನು ಯೋಜನೆಗಳನ್ನು ಯಾವ ರೀತಿ ಮಾಡುತ್ತಿದ್ದಾರೆ ಎಂದು ಭಾಕ್ರಾ ನಂಗಲ್ ಕಡೆಗೆ ಹೋಗಿದ್ದಾಗ ಅಲ್ಲಿರುವ ಸರಕಾರದ ಕಡೆಯವರಿಂದ ಕೇಳಿ ತಿಳಿದುಕೊಂಡಿದ್ದೇನೆ. ೧೯೫೫ ರಲ್ಲಿ ಭಾಕ್ರಾ ನಂಗಲ್ ಯೋಜನೆಗೆ ಜವಹರಲಾಲ್ ನೆಹರೂರವರು ಅಸ್ತಿಭಾರ ಹಾಕಿ ೧೯೬೦ನೇ ಇಸವಿಯಲ್ಲೇ ನೀರು ಬಿಟ್ಟು ಹತ್ತು ಟರ್ಬೈನ್ಸ್‌ಗಳನ್ನು ವರ್ಕ್ ಮಾಡುತ್ತಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಶರಾವತಿಯನ್ನು ಯಾವಾಗ ಪ್ರಾರಂಭ ಮಾಡಿದರಿ, ಮತ್ತು ಯಾವಾಗ ಪೂರೈಸಿ ಇದರಿಂದ ಇನ್ನೂ ಆರು ಟರ್ಬೈನ್ಸ್‌ಗಳು ಪೂರ್ತಿಯಾಗಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಲು ಆಗಲಿಲ್ಲ. ಇನ್ನೂ ಮೂರು ಟರ್ಬೈನ್ಸ್‌ಗಳು ಕೆಲಸ ಮಾಡಬೇಕಾಗಿವೆ. ಇಲ್ಲಿ ಎಲ್ಲ ವ್ಯವಸ್ಥೆಯನ್ನೂ ಕಂಟ್ರಾಕ್ಟರುಗಳ ಮೂಲಕವೇ ಮಾಡಬೇಕೆಂದು ಮಾಡುತ್ತಿದ್ದೀರಿ. ಆದರೆ ನಾನು ಭಾಕ್ರಾ ನಂಗಲ್ ಕಡೆ ಹೋಗಿದ್ದಾಗ ಅಲ್ಲಿನ ಇಲಾಖೆಯವರನ್ನು ಕೇಳಿ ತಿಳಿದುಕೊಂಡಾಗ ಅವರೆಲ್ಲ ಕೆಲಸಗಳನ್ನೂ ಡಿಪಾರ್ಟುಮೆಂಟು ಮೂಲಕವೇ ಮಾಡುತ್ತಾರೆ ಮತ್ತು ಯಾವ ಕೆಲಸಗಳನ್ನೂ ಯಾವ ಕಂಟ್ರಾಕ್ಟರುಗಳಿಗೂ ಕೊಟ್ಟು ಕೆಲಸ ಮಾಡಿಸುತ್ತಿಲ್ಲ. ಅಲ್ಲಿನ ಚೀಫ್ ಇಂಜಿನಿಯರ್‌ರವರು ಯಾವ ಮೇಜರು ಕೆಲಸಗಳೇ ಆದರೂ ಅದನ್ನು ಇಲಾಖೆ ಮೂಲಕವೇ ಮಾಡುತ್ತಾರೆ ಎಂದು ಹೇಳಿದರು ಮತ್ತು ಯಾವುದನ್ನೂ ಕಂಟ್ರಾಕ್ಟರುಗಳ ಮೂಲಕ ಮಾಡುತ್ತಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಎಲ್ಲಿ ನೋಡಿದರೂ ಸರಕಾರದವರು ಬರೀ ಕಂಟ್ರಾಕ್ಟರುಗಳಿಂದಲೇ ಎಲ್ಲ ಕೆಲಸಗಳನ್ನೂ ಮಾಡಿಸುತ್ತಿದ್ದಾರೆ. ಇದು ಕಂಟ್ರಾಕ್ಟರುಗಳ ರಾಜ್ಯವೇ ಆಗಿದೆ. ಎಲ್ಲವನ್ನೂ ಕಂಟ್ರಾಕ್ಟರುಗಳ ಮೂಲಕವೇ ಮಾಡಬೇಕೆಂಥ ಮಾಡುತ್ತಿದ್ದಾರೆ. ದೊಡ್ಡ ದೊಡ್ಡ ಕೆಲಸಗಳನ್ನು ಈಚೆಗೆ ಕನ್‌ಸ್ಟ್ರಕ್ಷನ್ ಕಂಪನಿಗೆ ಕೆಲಸ ಮಾಡಲು ಕೊಡಲಾಗಿದೆ.

2-30 P. M.

Construction company is the agency to sub lease to others.

ಇಂತಹ ಒಂದು ವ್ಯವಸ್ಥೆಯನ್ನು ತೆಗೆದುಹಾಕಿ ಇನ್ನು ಮುಂದೆ ರಾಜ್ಯ ಸರಕಾರದವರೇ ನೇರವಾಗಿ ಎಲ್ಲ ಯೋಜನೆಗಳನ್ನೂ ಮಾಡಿ ಮುಗಿಸುವ ಒಂದು ಕಾರ್ಯಕ್ರಮವನ್ನು ಮಾಡಿಕೊಳ್ಳುವುದು ಉಚಿತ, ಕನಿಷ್ಟ ಪಂಜಾಬು ರಾಜ್ಯದ ಮಾದರಿಯಲ್ಲಾದರೂ ನಮ್ಮ ರಾಜ್ಯ ಸರಕಾರ ಕೆಲಸ ಮಾಡಲು ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ. ಹೆಚ್. ಮೆಕಾನಾಯಕ್ (ಹರಪನಹಳ್ಳಿ) :—ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆ ಬೇಡಿಕೆಗಳನ್ನು ಅನುಮೋದಿಸುತ್ತಾ ನಾಲ್ಕು ಮಾತುಗಳನ್ನು ಇಲ್ಲಿ ಹೇಳಲು ಇಚ್ಛಿಸುತ್ತೇನೆ. ನೀರಾವರಿ ಯೋಜನೆ ಬಗ್ಗೆ ಭದ್ರಾ ಚಾನಲ್‌ನಿಂದ ಹರಪನಹಳ್ಳಿ ತಾಲ್ಲೂಕಿನವರೆಗೆ ನೀರು ಕೊಡಬೇಕೆಂದು ಸುಮಾರು ಹತ್ತು ಲಕ್ಷದಷ್ಟು ಸರಕಾರ ವಿರ್ಚುಮಾಡಬೇಕೆಂದು ಇದ್ದರೂ, ಇದುವರೆಗೂ ಇದನ್ನು ಪೂರ್ತಿ ಮಾಡಲು ಆಗಲಿಲ್ಲ. ಇದರಿಂದ ನಮ್ಮ ಹರಪನಹಳ್ಳಿ ತಾಲ್ಲೂಕಿನ ಜನರಿಗೆ ನೀರು ಸಿಗದೆ ರೈತರುಗಳಿಗೆ ತೊಂದರೆಯಾಗಿದೆ. ಹರಿಹರ, ದಾವಣಗೆರೆ ಹಾಗೂ ಪಾಲಹೊಳ್ಳಿ ಇಲ್ಲಿ ೧೨ ತಿಂಗಳಿಗಾಗುವಷ್ಟು ನೀರು ಕೊಡುತ್ತಿದ್ದಾರೆ. ಹರಪನಹಳ್ಳಿ ತಾಲೂಕಿನಲ್ಲಿ ಕಾಲುವೆಯನ್ನು (೧) ನೀಲಗುಂದದ ಕೆರೆಯವರಿಗೆ ಅಂದರೆ ದುಗ್ಗನೆತ್ತಿ, ತೆಲಗಿ, ಎಡಿಹಳ್ಳಿ ಮತ್ತು ಚಿರಸ್ತೆಹಳ್ಳಿವರೆಗೆ ಮುಂದುವರಿಸಬೇಕೆಂದು ಸರಕಾರಕ್ಕೆ ಮನವಿ-ಮಾಡಿಕೊಳ್ಳುತಿದ್ದರೂ ಇದುವರೆಗೆ ಇದನ್ನು ತೆಗೆದುಕೊಳ್ಳಲಿಲ್ಲ. ಈ ವರ್ಷವಾದರೂ ಇದರ ಬಗ್ಗೆ

ನೀರಾವರಿ ಮಂತ್ರಿಗಳು ಮನಸ್ಸು ಮಾಡಿ ಬೇಗನೆ ಮಾಡಿಸಿಕೊಡಬೇಕೆಂದು ಹೇಳುತ್ತೇನೆ. ನಾನು ಇದರ ಬಗ್ಗೆ ಮಾನ್ಯ ಮಂತ್ರಿಗಳ ಕಡೆಗೆ ಮನವಿಯನ್ನೂ ಕೊಟ್ಟಿದ್ದೇನೆ. ನಮ್ಮ ಭಾಗದ ಜನರು ಇದರ ಬಗ್ಗೆ ಸರಕಾರದಲ್ಲಿ ಒತ್ತಾಯ ಮಾಡಬೇಕೆಂದು ಹೇಳುತ್ತಲೇ ಬರುತ್ತಿದ್ದಾರೆ. ಇದಕ್ಕಾಗಿ ಇದನ್ನು ಬೇಗನೇ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಎರಡು ಮೂರು ಲಿಫ್ಟ್ ಇರಿಗೇಷನ್ ಕೆಲಸಗಳನ್ನು ತೆಗೆದುಕೊಂಡು ಪ್ರಾರಂಭ ಮಾಡುತ್ತೇವೆಂದು ಹೇಳಿ ಇದುವರೆಗೂ ಮಾಡಿಲ್ಲ. ರೈತರು ಇದರ ಬಗ್ಗೆ ಸೊಸೈಟಿಗಳನ್ನು ಆಯಾ ಗ್ರಾಮಗಳಲ್ಲಿ ಮಾಡಿಕೊಂಡು ಅದರಲ್ಲಿ ರೈತರು ಶೇಕಡಾ ಹತ್ತರಷ್ಟು ಷೇರು ಬಂಡವಾಳ ಹಾಕಿ ಅವುಗಳ ಮೂಲಕ ಪಂಪುಸೆಟ್ಟುಗಳನ್ನು ಪಡೆಯಬಹುದು ಎಂದು ಸರಕಾರದವರು ಹೇಳಿದರು. ಇದರಂತೆ ರೈತರು ಅಲ್ಲಲ್ಲಿ ಸೊಸೈಟಿಗಳನ್ನು ಮಾಡಬೇಕೆಂದು ಹೇಳಿದರೂ ಇಂತಹ ಸೊಸೈಟಿಗಳನ್ನು ಮಾಡಲು ಆಗುತ್ತಿಲ್ಲ. ಇದನ್ನು ಸರಕಾರದವರೇ ಮುಂದುವರಿಸಿಕೊಂಡು ಮಾಡಬೇಕೆಂದು ಇಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ಕೆರೆಗಳ ಬಗ್ಗೆ ಮೂರು ನಾಲ್ಕು ವರ್ಷಗಳಿಂದಲೂ ಹೇಳುತ್ತಿದ್ದರೂ ಏನೂ ಮಾಡಲಾಗಲಿಲ್ಲ. ಅರಸನಾಳು ಕೆರೆಯನ್ನು ಮಾಡುತ್ತೇವೆಂದು ಹೇಳಿದರೂ ಇನ್ನೂ ಅದನ್ನು ಕಾರ್ಯರೂಪಕ್ಕೆ ತರಲಿಲ್ಲ. ಇದನ್ನು ಫೈವ್ ಇಯರ್ಸ್‌ಲ್ಲೇ ತೆಗೆದುಕೊಂಡು ಸ್ವಲ್ಪ ಕೆಲಸ ಮಾಡಿ ಅದನ್ನು ಹಾಗೇ ನಿಲ್ಲಿಸಿಬಿಟ್ಟಿದ್ದಾರೆ. ಇವೊತ್ತಿನವರೆಗೆ ಇದರ ಕೆಲಸಗಳನ್ನು ಮತ್ತು ಆರಂಭ ಮಾಡಿಲ್ಲ. ಈಗಲಾದರೂ ಸರಕಾರ ಇದನ್ನು ಬೇಗನೆ ಕಾರ್ಯರೂಪಕ್ಕೆ ಬರುವಂತೆ ಮಾಡಬೇಕು. ಮೂರನೇದು ರೋಡುಗಳ ಬಗ್ಗೆ. ನಾವು ಸುಮಾರು ೨೦-೨೨ ವರ್ಷಗಳಿಂದಲೂ ಹೇಳುತ್ತಲೇ ಬರುತ್ತಿದ್ದೇವೆ. ಇವೊತ್ತಿನವರೆಗೆ ಹೆಚ್ಚು ಸಂಖ್ಯೆಯಲ್ಲಿ ಪಿ ಡಬ್ಲ್ಯು ಡಿ ರೋಡುಗಳನ್ನು ಮಾಡುತ್ತಿಲ್ಲ. ಅರಸೀಕೆರೆಯಿಂದ ತಾಡೂರು, ಕಂಬಳೀಕೇರಿ ಸತ್ತೂರು ಮಾರ್ಗವಾಗಿ ದಾವಣಗೆರೆ ಹೋಗುವ ರೋಡನ್ನು ಕೇಂದ್ರ ಸರಕಾರದವರು ೧೯೫೨-೫೩ರಲ್ಲಿ ತೆಗೆದುಕೊಂಡರೂ ಇನ್ನೂ ಇದರ ಕಡೆಗೆ ಖರ್ಚು ಮಾಡಿಲ್ಲ. ಇದರ ಬಗ್ಗೆ ಹಿಂದೆ ಕೂಡ ಸರಕಾರದ ಗಮನಕ್ಕೆ ತಂದಿದ್ದರೂ ಇನ್ನೂ ಸರಕಾರ ಇಲ್ಲಿನ ರೋಡು ಕೆಲಸಗಳನ್ನು ಪೂರ್ತಿ ಮಾಡಿಲ್ಲ. ಇದರ ಬಗ್ಗೆ ಹೇಳುವಾಗ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಪಿ ಡಬ್ಲ್ಯು ಡಿ ಇಲಾಖೆಯವರು ಸರಿಯಾಗಿ ಯಾವ ರಸ್ತೆಗಳನ್ನೂ ತೆಗೆದುಕೊಳ್ಳುತ್ತಿಲ್ಲ. ಕಳೆದ ಒಂದು ವರ್ಷದಿಂದಲಾದರೂ ನಮ್ಮ ತಾಲ್ಲೂಕಿನಲ್ಲಿ ಪಿ ಡಬ್ಲ್ಯು ಡಿ ಇಲಾಖೆಯವರು ಸುಮಾರು ೧೦-೧೫ ಮೈಲಿಗಳಷ್ಟು ರಸ್ತೆಗಳನ್ನು ತೆಗೆದುಕೊಂಡಿದ್ದರೆ ಅದರಿಂದ ಎಷ್ಟೋ ಅನುಕೂಲವಾಗುತ್ತಿತ್ತು. ನಮ್ಮ ಕಡೆ ಜನರು ನಮ್ಮನ್ನು ಅಲ್ಲಿಂದ ಚುನಾಯಿಸಿ ಇಲ್ಲಿಗೆ ಕಳುಹಿಸಿದ್ದರೂ ನಮ್ಮ ಭಾಗದ ಕೆಲಸಗಳನ್ನು ಸರಕಾರದ ಮೂಲಕ ಯಾವುದನ್ನು ಮಾಡುತ್ತಿಲ್ಲ, ಸುಮ್ಮನೆ ಶಾಸಕರ್ತಾಗಿ ಬರೀ ಮೆಜಾ ಮಾಡುತ್ತಿದ್ದಾರೆ ಎಂದು ಜನ ನಮ್ಮನ್ನು ಬೈಯ್ಯುವಂತಾಗಿದೆ. ನಮ್ಮ ಕ್ಷೇತ್ರದಲ್ಲಿ ಸರಕಾರದಿಂದ ಒಂದೂ ಕೆಲಸವಾದರೂ ಆಗುತ್ತಿಲ್ಲ. ಒಂದು ವರ್ಷದಲ್ಲಿ ಸುಮಾರು ೧೫-೨೦ ಮೈಲಿ ರಸ್ತೆಗಳನ್ನು ಪಿ ಡಬ್ಲ್ಯು ಡಿ ಇಲಾಖೆಯವರು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದರೂ ಯಾವ ರಸ್ತೆಗಳನ್ನೂ ತೆಗೆದುಕೊಳ್ಳಲಿಲ್ಲ. ಈಗಲಾದರೂ ಇಲಾಖೆಯವರು ಹೆಚ್ಚು ರಸ್ತೆ ಕೆಲಸಗಳನ್ನು ನಮ್ಮ ಭಾಗವಲ್ಲಿ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಇಲ್ಲಿ ಒತ್ತಾಯದಿಂದ ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಹರಪನಹಳ್ಳಿ ವಿಭಾಗದಲ್ಲಿ ೨೧-೨೨ ವರ್ಷಗಳಿಂದಲೂ ಮೂರು ಹಳ್ಳಿಗಳಲ್ಲಿ ಎಂದರೆ ಹರಪನಹಳ್ಳಿ, ಕೊಟ್ಟೂರು ನಡುವೆ ಇರುವ ಸುಮಾರು ೧೧ ಮೈಲಿ ರಸ್ತೆ ಅಂದರೆ, ಮತ್ತಿಹಳ್ಳಿ ಸಿದ್ದಿಹಳ್ಳಿ ರಸ್ತೆಯನ್ನು ಮಾಡಿಸಿಕೊಡಬೇಕೆಂದು ಹೇಳುತ್ತಿದ್ದರೂ ಅದು ಇನ್ನೂ ಕಾರ್ಯರೂಪಕ್ಕೆ ಬರಲಿಲ್ಲ. ಈಗಲಾದರೂ ನಮ್ಮ ಭಾಗ ಬಹಳ ಹಿಂದುಳಿದ ಪ್ರದೇಶ ಎಂದು ಸರಕಾರ ಗಮನಕ್ಕೆ ತೆಗೆದುಕೊಂಡು ಹೆಚ್ಚು ರಸ್ತೆಗಳನ್ನು ಇಲಾಖಾ ವ್ಯತ್ಯಾಂತರ ಮಾಡಬೇಕು ಎಂದು ಇಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಬೇರೆ ತಾಲ್ಲೂಕುಗಳಲ್ಲಿ ಸರಕಾರ ಬೇಕಾದಷ್ಟು ಕೆಲಸಗಳನ್ನು ಮಾಡುತ್ತಿದ್ದರೂ ನಮ್ಮ ತಾಲ್ಲೂಕಿನಲ್ಲಿ ಅಷ್ಟು ಕೆಲಸಗಳು ಆಗುತ್ತಿಲ್ಲ ಎಂದು ನಮ್ಮ ಜನರು ಸರಕಾರದ ಮೇಲೆ ಆಪಾದನೆ ಮಾಡುತ್ತಿದ್ದಾರೆ. ಇನ್ನು ಮುಂದಾದರೂ ಹೆಚ್ಚು ಕೆಲಸಗಳನ್ನು ಸರಕಾರ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಹರಪನಹಳ್ಳಿಯಿಂದ ಸುಮಾರು ೧೪ ಮೈಲಿಗಳ ರೋಡನ್ನು ಎಲ್ಲಾಪುರ, ಗೌರಹಳ್ಳಿ, ತೊಗರಿಕಟ್ಟಿ, ಹುಲಿಕಟ್ಟಿಯಿಂದ ಹಡಗಲಿ ತಾಲ್ಲೂಕ್ ವರೆಗಾದರೂ ಮಾಡಬೇಕೆಂದು ಮನವಿ ಮಾಡಿ ಕೊಂಡಿದ್ದರೂ ಇನ್ನೂ ಮಾಡಲಿಲ್ಲ. ಈ ರೋಡು ಆದರೆ ಬಸ್ಸುಗಳು ಓಡಾಡಲು ಅನುಕೂಲವಾಗುತ್ತದೆ. ಇದರ ಬಗ್ಗೆ ಮಾನ್ಯ ಟ್ರಾನ್ಸ್‌ಪೋರ್ಟ್ ಉಪ ಮಂತ್ರಿಗಳು ಬಂದಾಗ ಕೂಡ ಹೇಳಿದ್ದೆವು. ಅವರೂ ಕೂಡ ಸರಕಾರದಲ್ಲಿ ಒತ್ತಾಯ ಮಾಡಿ ಈ ರೋಡನ್ನು ಮಾಡಿಸಬೇಕೆಂದು ಹೇಳಿ ಬಂದರು. ಇವೆಲ್ಲವನ್ನೂ ಸರಕಾರದವರು ಗಮನದಲ್ಲಿಟ್ಟುಕೊಂಡು ಮುಂದಿನ ಸಾಲಿನಲ್ಲಾದರೂ ಹೆಚ್ಚು ರಸ್ತೆ ಕೆಲಸಗಳನ್ನು ಮಾಡುತ್ತಾರೆಂದು ಆಶಿಸುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಜೈ ಹಿಂದ್.

SRI H. SIDDAVEERAPPA:— (Harihara) Mr. Speaker, Sir, I oppose the Demand that have been listed to-day. I think we are spending nearly 50 per cent of our revenue on these Demands that have been listed. to-day. If we take the entire amount it will come to about Rs.1.06,84,14,000. I believe, Sir, if Justice is to be done, a full discussion is to be allowed on these Demands, and some more time is necessary for that. I do not know whether you are applying guillotine at 6 O' Clock. We are giving this amount in darkness without knowing for which purpose we are giving. P.W.D. is an important portfolio. We have burning problems like building major dams and also minor irrigation problems. So far as minor irrigation is concerned. I gave suggestions and I do not know whether my suggestions have got the approval of the Government. We have got Scheduled Banks coming forward to help us for starting community projects. Therefore. I suggest to Government that it may enter into negotiations with these Banks and see as far as possible wherever perennial or permanent source of water is available, these works are taken up. We have got major Irrigation projects for which there are lots of difficulties in implementing them. I personally believe we can have, atleast not less than Rs. 1 crore of revenue under irrigation and you can simply use it for giving irrigation pumpsets. It is better in my opinion, to have Lift Irrigation projects. Do not bank upon the poor ryots giving money in advance for construction of projects. Allow them to grow the first crop under the project and then make them hold responsible for the loan after mortgaging the land and all that. Do not make them to pay in advance. They cannot afford to pay in advance. If at all they have to pay they have to borrow somwhere and give you. So far as Banks are concerned, the Scheduled Banks are prepared to come to the aid of ryots and the Government. If the legal impediments are removed, if the records are clean and the procedure is simplified, we can definitely get their help. I believe instead of 5 H. P. or 10 H. P. you can make provision for using 50 H. P. and 100 H. P. If there is any difficulty in your way, you can bring a legislation. This suggestion may be examined.

Coming to the Major Irrrigation projects, it is unfortunate to note that the enthusiasm of the agriculturists under Bhadra Project is diminishing on account of irregular water supply during this season. On account of this irregular supply of water, the crops in some parts have withered away We have not been able to do much for them. It is because on account of major breaches, you were not able to supply water. The contractors who were entrusted with that work, could not do that work properly. we are not making use of the water to the fullest possible extent. We must do our best to help the agriculturists to make use of all water that is available under this project. If not what is the use of constructing projects? The Mysore Bank at Harihar is issuing loans to agriculturists at the rate of Rs. 500 per acre. Out of this, 50% will be by way of manure and 50% by way of cash. I request the Government to see that the loan is not recoverd as the

entire crop has been lost let them examine each Survey number and see whether the corp is grown or lost. If the crop is lost let them be exempted from paying tax and also the loan. The Chief Engineer, Irrigation South, may kindly look and see which are the Survey Numbers which have not received the water this season and assess the loss that has happened and recommend to Government to give relief.

As regards the Electricity Board, it is a curse on Mysore State to have the Electricity Board stewarded by an unscrupulous Chairman. His hands are not clean He is responsible for some of the defects and difficulties that this Board is having. I also know, previously two Hon. Members Smt. Nagarathnamma Hiremath and Sri Chikke Gowda raised this point. The Government has not examined it. As the Government knows he was in charge of H. E. P., Hyderabad and he was proved as useless and was charged with corruption. I would like to bring to the notice of the Chief Minister that such persons may be removed from office under Section 10 of the Electricity Supply Act, 1948. I would like to read section 10 of the Electricity Supply Act, 1948. It reads as follows:

"Removal and suspension of members.

1) The State Government may suspend from office for such period as it thinks fit or remove from office any member of the Board who is found to be lunatic or becomes unsound mind; or is adjudged insolvant or fails to comply with the provisions of Section 9; or becomes or seeks to become a Member of a Parliament or any State Legislature or any Local authority; or in the opinion of the State Government has refused to act; or has become incapable of acting; or so abused his position as a member as to render his continuance on the Board detrimental to the interests of the general public; or otherwise unfit to continue as a member; or is convicted of an offence involving moral turpitude;

2) The State Government may suspend any member pending an enquiry against him."

Therefore the Government should take immediate action against him without waiting any longer. Sir, this Chairman is in the habit of making indiscriminate purchases to the tune of some crores. I want the Chief Minister to examine the cable business he has done. I want him to examine when he purchased, where he purchased and why it is lying idle. This cable business, probably, is done in Bangalore itself. In extensions like Rajajinagar and Jayanagar, the Board is insisting on the Consumers to use underground cables for service mains while they themselves have not laid the main cables. As a result, the poor consumers are forced to spend nearly ten times more than what they would otherwise have to pay for the overhead mains. I can understand this being insisted in congested areas like Chickpet

(SRI H. SIDDAVEERAPPA)

and Balepet. The Chief Minister may kindly examine why they have put the cables indiscriminately spending lakhs and lakhs of rupees, without any proper assessment. What is the procedure that is being adopted in this Board while purchasing the materials required? They do not call for any tenders. No enquiry is being published before purchase. They want some to register their names in their office. it is only to those who register their names in the Board Office that the enquiries are being sent. What is the procedure that they are following and why have they issued orders to those people? I am not able to follow this closed door dealing; there are no tenders and there are no competitive rates. Only very few people go there and articles are bought as though there is an understanding between the the Board and the firm. Every year they purchase articles worth Rs. 8 to Rs. 10 crores approximately. This is not a small thing. Even if they were to get one percent commission as is the case in all these dealings, it is a big amount. Why open-tenders are notcalled for? Added to this, they have to pay very heavy interest unnecessarily on their borrowings. There is a firm in Bangalore in Narasimharja Road called the Consolidated Electrical Industries. I would like to know how many orders are placed with this firm after the present Chairman took charge of the Electricity Board. My information is that this Consolidated Electrical Industries are the friends of the present Chairman. So many orders are placed without taking recourse to other procedures of open-door methods, and here is a firm which is favoured by the Chairman. I would like the Chief Minister to examine it I want the Chief Minister to examine whether he is considering any extension for him after the period is over or whether there is any possibility of helping only such people about whose dealings there is a good deal of doubt.

What is it they have done with regard to rural electrification? The present Chairman seems to be satisfied by providing new lights and new installations only in Bangalore City. Does he want to make Bangalore NewYork or Paris? Rural electrification is totally neglected. How many rural places has he visited and what special attention was paid by him so for as rural electrification is concerned? If we see how things are managed, no man's life is safe. He is paying more attention for the beautification of Bangalore than trying to help the rural electrification. That is my complaint.

I would like to say a few wards as to how this Board is warking. There are many installations which are directly connected to the overhead mains by using the bare wire with stone fixed to the end. One day I was going in Davanagere and a stone fell. I asked them as to what is it about. They told me that they do not have materials. for connecting the main wire, they put a rope and try to see that both ends are connected. The other materials like cut-outs, copper

clamps etc. are not to be found. They say that they do not have supply of these materials. They connect the wires without cut-outs and without any safety device. My house caught fire very recently, because in the main wire they had not provided a safety cut-out. Fortunately we were not burnt. I know in Jayanagar recently five people died in such an incident. On the very same day on which my house caught fire, some other house also caught fire. Nobody in the Board cares about the safety of the consumers. I should say the Electricity Board is callous and negligent. At times even property and life are endangered. The procedure now adopted for connecting the mains is against the very provisions of the Act. There is a Government officer called the Electrical Inspector to the Government of Mysore, who is expected to inspect every house to see whether connections are properly given or not. I do not know who that gentleman is. He has not cared to come and examine whether the connections are properly given or not. There is a 400 KV main line from Sharavati to Hubli. The insulators for this line are supplied by the Porcelain factory —my friend Sri Rajasekhara Murthy, Minister for Industries is not here. These insulators are defective because proper material is not used and in the required proportion. When these insulators break, the wires come into contact and vilagers are scared. Even the officers have given notices to the villagers not to go there. To change these insulators they have spent about Rs. 30 to Rs. 40 lakhs. When the Government have formed the Electricity Board, they cannot sleep over matters and say that everything is O.K. This Board sometimes is more a curse than a help to the State. Nothing comes out of the accounts unless we prove into it. I hear that there are many misappropriations. I feel that not only the Chairman but even the senior officers will have to be called to explanation and should be alerted as to how things are going on here. My friend Sri Ghorpade, who is the Chairman of the Public Undertakings Committee, must first probe into the working of the Electricity Board. I want the Chief Minister to direct the Vigilance Commission to enter into it and examine the whole thing. I am sorry I had to bring to the notice of the Chief Minister all these facts, because I know in some cases there were some enquiries pending about some misappropriations.

You might have read that records were destroyed in Central Zone office just two days back. Sir, one's heart begins to bleed if we see such things in our State. I think the Chief Minister might have visited he spot because it is very near. I think there is sabotage and an nquiry has to be thoroughly conducted because the files and ledgers of nearly 20,000 to 30,000 consumers have been burnt. They say that they can reconstruct the files and ledgers. We know how Khadi Board records were reconstructed. I feel it is an act of sabotage I learn that when press people were printing something at night they were told it was not a case of short-circuit. I hold the Chairman and the Board criminaly responsible

(SRI H. SIDDAVEERAPPA)

for this. On this account only you must summarily dismiss the Board or else keep the Board under suspensin till the enquiry is completed. I feel Sir Mysore has been suffering and let us not suffer more on account of these thing. We have been paying interest; it is all borrowed capital that has been invested in this Board. when such is the position. I personally feel that the Electricity Board is the curse of Mysore State and it will have to be set right by instituting an enquiry by the Vigilance Commission and also by the committee that this House has constituted. If necessary, they must hava a sub-committee and examine as to what has happened, how money is being spent etc. Then only all matters will come to light. With these words I oppose the demands and conclude my speech.

3-00 P.M.

ಶ್ರೀ ಎಸ್ ಎಂ ಗುರೆಡ್ಡಿ(ಮುದ್ದೆಬಿಹಾಳ್);—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಮುಂದಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಒಂದೆರಡು ಮಾತುಗಳನ್ನು ಹೇಳುತ್ತೇನೆ ಈ ಮನೆಯಲ್ಲಿ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಅದರ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ನಮಗೆ ಅಲಾಟ್ ಮಾಡಿದಂತಹ ನೀರಿನ ಪಾಲನ್ನು ಉಪಯೋಗ ಮಾಡುವುದಕ್ಕೆ ನಾವು ಯಾವ ಪ್ರಕಾರ ಕಾರ್ಯಕ್ರಮ ಗಳನ್ನು ಕೈಗೊಂಡಿದ್ದೇವೆ ಎನ್ನುವುದು ಮುಖ್ಯವಾಗಿದೆ. ನಮ್ಮ ಕೃಷ್ಣಾ ಮೇಲ್ದಂಡೆಯ ವಿಚಾರವಾಗಿ, ಹೇಳುವುದ್ದಾದರೆ, ಪ್ರತಿವರ್ಷ ಕೆಲವು ಒಂದು-ಒಂದೂವರೆ ಕೋಟಿ ರೂಪಾಯಿಗಳನ್ನು ಒದಗಿಸುತ್ತಿದ್ದೇವೆ. ಹೋದ ಸಲ ಒಂದು—ಒಂದೂವರೆ ಕೋಟಿ, ನಂತರ ಎರಡು ಕೋಟಿ ೬೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದನ್ನು ಎಷ್ಟುಮಟ್ಟಿಗೆ ಖರ್ಚು ಮಾಡಿದ್ದಾರೆಂಬುದು ಗೊತ್ತಿಲ್ಲ. ಆದರೆ ಈ ವರ್ಷದ ಬಜೆಟಿನಲ್ಲಿ ಕೊಟ್ಟ ಒಂದು ಕೋಟಿ ನಾಲ್ಕು ಲಕ್ಷ ಹಣವನ್ನು ನೋಡಿದರೆ, ಕೃಷ್ಣಾ ಮೇಲ್ದಂಡೆ ಯೋಜನೆ ಎಂದು, ಎಷ್ಟು ವರ್ಷದಲ್ಲಿ ಮುಗಿಯುವುದೆನ್ನುವ ಸಂಶಯ ಬರುತ್ತದೆ. ತಾವು ಹೇಳಿದ ಹಾಗೆ ಇದರ ಎಸ್ಟಿಮೇಟೆಡ್ ಕಾಸ್ಟ್ ಈಗ ಮಾಡಿದಂತೆ ೧೪೦ ಕೋಟಿ ರೂಪಾಯಿಗಳು. ಆದು ಬರಬರುತ್ತಾ ೨೦೦ ಕೋಟಿ ರೂಪಾಯಿಗಳಿಗೆ ಹೋಗಬಹುದು. ಆದರೆ ಇದಕ್ಕೆ ಪ್ರತಿ ವರ್ಷ ಒಂದು—ಒಂದೂವರೆ ಕೋಟಿ ರೂಪಾಯಿ ಒದಗಿಸುತ್ತಾ ಹೋದರೆ, ಈ ಯೋಜನೆ ಎಂದು ಮುಗಿಯಬಹುದೆಂಬ ಸಂಶಯ ಬರುತ್ತದೆ. ಆದರೆ ತಾವು ಸಾಕಷ್ಟು ಪ್ರಯತ್ನ ಮಾಡಿದ್ದೇವೆಂದು ಹೇಳುತ್ತಿದ್ದೀರಿ. ಮತ್ತು ತಾವು ಈಗಾಗಲೇ ಜಾಗತಿಕ ಬ್ಯಾಂಕನ್ನು ಕೇಳಿಕೊಂಡಿದ್ದೇವೆಂದು ಕೂಡ ಹೇಳಿದ್ದೀರಿ. ಅವರು ಕೂಡ ಅಲ್ಲಿಗೆ ಬಂದು ನೋಡಿ ಹೋದರು. ಆದರೆ ಅವರು ಹಣ ಕೊಡುವ ವಿಚಾರ ಏನು ಮಾಡಿದ್ದಾರೆಂಬುದು ತಿಳಿದಿಲ್ಲ. ಆದ್ದರಿಂದ ನಾನು ಕೇಳಿಕೊಳ್ಳುವುದು ಇಷ್ಟೆ—ಈ ಯೋಜನೆಗಳನ್ನು ನಾವು ಎಷ್ಟು ತಡವಾಡಿ ಮುಗಿಸುತ್ತೇವೆಯೋ, ಅಷ್ಟೆ ಸಮಸ್ಯೆಗಳು ನಮಗೆ ಜಾಸ್ತಿಯಾಗುತ್ತಾ ಹೋಗುತ್ತವೆ ಇವೊತ್ತಿನ ದಿವಸ ನಾವು ಕಾವೇರಿ ಬೇಸಿನ್‌ನಲ್ಲಿ ನೋಡುತ್ತಿದ್ದೇವೆ. ಅದೇ ರೀತಿ ಕೃಷ್ಣಾದ ಪರಿಸ್ಥಿತಿಯೂ ಕೂಡ ಆಗಬಹುದು. ಆದ್ದರಿಂದ ಅದಕ್ಕೆ ಹೆಚ್ಚಿನ ಗಮನವನ್ನು ಹರಿಸಿ, ಯೋಜನೆಗಳನ್ನು ತೀವ್ರವಾಗಿ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ನಮಗೆ ಹಣದ ಅವಶ ಕತೆ ಇದೆ. ಆದರೆ ನಮ್ಮ ರಾಜ್ಯ ಬೊಕ್ಕಸದ ಹಣವನ್ನು ಕಾದು ಇದನ್ನು ಮಾಡುತ್ತಾ ಹೋದರೆ, ಇನ್ನೂ ಇದಕ್ಕೆಶೆ೦-೬೦ ವರ್ಷ ಬೇಕಾಗುತ್ತದೆ. ಆದುದರಿಂದ ನಾವು ಇದಕ್ಕೆ ಒಂದು ಕಾರ್ಪರೇಶನ್ ಮಾತ, ಕೃಷ್ಣಾ ವಾಲಿಯಲ್ಲಿರುವ ಎಲ್ಲಾ ಯೋಜನೆಗಳನ್ನು ಏಕೆ ಕೈಗೊಳ್ಳಬಾರದು? ಆದ್ದರಿಂದ ಈ ಒಂದು ಕಾರ್ಪರೇಶನ್ ಮಾಡುವ ಕಡೆ ಸರ್ಕಾರದವರು ಗಮನ ಕೊಡಬೇಕೆಂದು ಹೇಳುತ್ತೇನೆ. ಮತ್ತು ಈ ಕೃಷ್ಣಾ ಅಣೆಕಟ್ಟನ್ನು ಕಟ್ಟುವಾಗ, ಈಗಲೇ ಅದನ್ನು ಕನ್‌ಸ್ಟ್ರಕ್ಷನ್ ಕಾರ್ಪರೇಶನಿಗೆ ಕೊಟ್ಟಿದ್ದಾರೆ ಈ ಕಾರ್ಪೊರೇಶನವರು ಎಷ್ಟು ಉತ್ಸುಕರಿದ್ದಾರೆಂಬುದು ತಿಳಿದಿಲ್ಲ ತಾವು ಇದನ್ನು ಕ್ವಾಲಿಟಿ ಕಂಟ್ರೋಲ್ ಮಾಡಬೇಕೆನ್ನುವ ದೃಷ್ಟಿಯಿಂದ ಕೊಟ್ಟದ್ದು ಸ್ವಾಗತಾರ್ಹವಾದರೂ. ಅವರು ಮಾಡುವಂತಹ ಕೆಲಸ ಬಹಳ ನಿಧಾನವಾಗುತ್ತದೆ ಆದ್ದರಿಂದ ಅದರ ಬಗ್ಗೆ ತಾವು ಎನ್‌ಕ್ವಾಯರಿ, ಮಾಡಿ, ತಾವು ವಹಿಸಿಕೊಟ್ಟ ಕೆಲಸವನ್ನು ಮಾಡುವಂತಹ ಪ್ರಯತ್ನ ಮಾಡಬೇಕು. ಅದೇ ರೀತಿ ಮುಳುಗಡೆ ಜನರ ವಿಚಾರವನ್ನು ತೆಗೆದುಕೊಳ್ಳಿರಿ. ಈಗಾಗಲೇ ಅಲ್ಲಿ ಕೆಲವು ಭೂಮಿಯನ್ನು ವಶಪಡಿಸಿಕೊಂಡಿದ್ದಾರೆ. ಆ ಜನರ ಆಶ್ರಯಕ್ಕಾಗಿ ತಾವು ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲು

ಆದ್ದರಿಂದ ಅಲ್ಲಿ ಮುಳುಗಡೆಯಾಗುವ ಜನರಿಗೆ ಒಂದು ಪರಿಹಾರವನ್ನು ಸಕಾಲದಲ್ಲಿ ಜದಗಿಸುವುದಕ್ಕೆ ಸರ್ಕಾರದವರು ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ. ಇವತ್ತು ಕೇವಲ ದೊಡ್ಡ ದೊಡ್ಡ ಆಣೆಕಟ್ಟುಗಳನ್ನು ಕಟ್ಟುವುದರಿಂದ ನಮ್ಮ ಸಮಸ್ಯೆಗಳು ಬಗೆಹರಿಯುವುದಿಲ್ಲ. ಈಗಾಗಲೇ ನಾವು ಕಟ್ಟಿದ. ಆಣೆಕಟ್ಟುಗಳ ಕಡೆಗೆ ನಮ್ಮ ದೃಷ್ಟಿಯನ್ನು ಹರಿಸಿದರೆ ಗೊತ್ತಾಗುತ್ತದೆ. ಉದಾಹರಣೆಗೆ ತುಂಗಭದ್ರಾ ಆಚು ಕಟ್ಟಿನಲ್ಲಿ ನೋಡಿದರೆ, ಈಗಾಗಲೇ ೬ ಲಕ್ಷ ಎಕರೆಗಳಲ್ಲಿ ಕೇವಲ ಎರಡು—ಎರಡೂವರೆ ಲಕ್ಷ ಎಕರೆಗೆ ಮಾತ್ರ ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಮಾನ್ಯ ನಾಗಪ್ಪನವರೂ ಹೇಳಿದ್ದಾರೆ. ನನ್ನ ಅನುಭವದ ಪ್ರಕಾರ ತುಂಗಭದ್ರಾ ಆಣೆಕಟ್ಟಿನ ಕೆಲವು ಪ್ರದೇಶದಲ್ಲಿ ಫೀಡ್ ಚ್ಯಾನಲ್ ತೆಗೆದಿದ್ದಾರೆ. ಅಲ್ಲಿ ನೀರು ಸರಿಯಾಗಿ ಹೋಗುತ್ತದೋ ಇಲ್ಲವೋ ಎಂದು ಇಂಜಿನಿಯರ್ಸ್ ನೋಡುತ್ತಾ ಇಲ್ಲ. ಎಷ್ಟೋ ಫೀಡ್ ಚಾನಲಿನಲ್ಲಿ ನೀರು ಹೋಗುತ್ತಾ ಇಲ್ಲವೆಂದು ಹೇಳಿದರೆ, ಅದನ್ನು ರೈತರೇ ಮಾಡಿಕೊಳ್ಳಬೇಕೆಂದು ಹೇಳುತಾರೆ. ಫೀಡ್ ಚಾನಲಿನಲ್ಲಿ ಪ್ರತಿಯೊಬ್ಬ ರೈತನ ಭೂವಿಗೂ ನೀರು ಹೋಗುತ್ತದೆಯೇ ಇಲ್ಲವೋ ಎಂಬುದನ್ನು ನೋಡುವುದು ತಮ್ಮ ಕರ್ತವ್ಯವೆಂದು ತಿಳಿದು ಕೊಂಡಿದ್ದೇನೆ. ತುಂಗಾಭದ್ರ ಆಣೆಕಟ್ಟಿನ ಕೆಳಗಡೆ ಡೆವಲಪ್ ಆಗಬೇಕಾದ ರಸ್ತೆಗಳು ಹಾಗೆಯೇ ಇವೆ. ಮತ್ತು ಅಲ್ಲಿ ಸೀಪೇಜ್ ಕೂಡ ಇದೆ. ಹೀಗಿರುವಾಗ ಪ್ರತಿಯೊಂದು ವಿಚಾರವನ್ನೂ ಸರ್ಕಾರದಲ್ಲಿ ಬಂದು ಮನವಿ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಆದ್ದರಿಂದ ತುಂಗಾಭದ್ರ ಆಣೆಕಟ್ಟಿನ ಕೆಳಗಡೆ ಪ್ರದೇಶಕ್ಕೆ ಸಂಬಂದಪಟ್ಟ ಹಾಗೆ ಒಂದು ಸ್ಪಾಚುಟರಿ ಬೋರ್ಡನ್ನು ಮಾಡಿ, ಆ ಬೋರ್ಡಿನ ಮುಖಾಂತರ ಅಲ್ಲಿನ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಹೇಳುತ್ತೇನೆ. ಎಲ್ಲಿ ಸಮಸ್ಯೆಗಳು ಇವೆಯೋ, ಅಲ್ಲಿ ಒಂದು ಬೋರ್ಡು ಮಾಡಿ, ಅದರ ಮುಖಾಂತರ ಅಲ್ಲಿಯ ಕೆಲಸಗಳನ್ನು ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೇಜರ್ ಇರಿಗೇಶನ್ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ನಾವು ಕೈಗೊಂಡಿರತಕ್ಕ ಚಿಕ್ಕ ಚಿಕ್ಕ ಕೆರೆಗಳ ವಿಚಾರವಾಗಿ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಕೆಲವು ಭಾಗಗಳಲ್ಲಿ ನಾವು ಕೈಗೊಂಡ ಕೆರೆಗಳನ್ನು ೫—೬ ವರ್ಷವಾದರೂ ಮುಗಿಸಲಿಲ್ಲ. ಇದಕ್ಕೆ ನಾನಾ ಕಾರಣಗಳೂ ಇವೆ. ಅಲ್ಲಿ ಕಂಟ್ರಾಕ್ಟರುಗಳು ಬರುತ್ತಾ ಇಲ್ಲವೆನ್ನುವುದು ಒಂದು ಪ್ರಶ್ನೆ. ಸರ್ಕಾರೀ ಸಿಬ್ಬಂದಿ ಇಲ್ಲವೆಂಬುದು ಇನೊಂದು ಪ್ರಶ್ನೆ. ಹೀಗೆ ೫—೬ ವರ್ಷ ಬೇದು ಟ್ಯಾಂಕ್ ಕಟ್ಟುವುದಕ್ಕೆ ತೆಗೆದುಕೊಂಡರೆ ಹೇಗೆ? ಆದ್ದರಿಂದ ಈ ಕೆಲಸಗಳನ್ನು ಆದಷ್ಟು ತೀವ್ರವಾಗಿ ಆಸಕ್ತಿಯಿಂದ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ರಸ್ತೆಗಳ ವಿಚಾರದಲ್ಲಿ ಈಗಾಗಲೇ ಒಂದು ಬುಕ್‌ಲೆಟ್ ಕೊಟ್ಟಿದ್ದಾರೆ. ನಮ್ಮ ಮೈಸೂರು ರಾಜ್ಯದಲ್ಲಿ ಎಷ್ಟು ರಸ್ತೆಗಳನ್ನು ಮಾಡಿದ್ದಾರೆ, ಮಾಡತಕ್ಕದ್ದು ಎಷ್ಟು ಇದೆ ಎಂದು ಅದರಲ್ಲಿ ಕೊಟ್ಟಿದ್ದಾರೆ. Requirements as per All India Road plan 1961-81. The road mileage required for Mysore State acc ording to the recommendations of the All India Road Plan 61-81 would be 42,565 miles as against the existing road mileage of 39,332 miles and a comparison with this total road mileage by classification of roads, would reveal the existing inadequate coverage of Roads in the State ಎಂದು ಹೇಳಿದ್ದಾರೆ. ೩೯,೩೩೭ ಮೈಲು ರಸ್ತೆಯಲ್ಲಿ ಪಿಡಬ್ಲ್ಯೂಡಿಯವರು ಮೈಂಟೈನ್ ಮಾಡುವಂತದ್ದು ೨೮,೪೬೮ ಮೈಲು ರಸ್ತೆಗಳು, ಮತ್ತು ೧೦,೮೬೪ ಮೈಲು ರಸ್ತೆಗಳನ್ನು ತಾಲ್ಲೂಕು ಬೊರ್ಡಿನವರು ಅಥವಾ ಫಾರೆಸ್ಟ್ ಇಲಾಖೆಯವರ ಅಧೀನದಲ್ಲಿದೆ ಎಂದು ಹೇಳಿದಾರೆ ತಾವು ಹೇಳಿದ ಹಾಗೆ ರೂರಲ್ ಕಮ್ಯುನಿಕೇಶನ್ ಕೆಳಗಡೆ ಬರುವ ರಸ್ತೆಗಳಿಗೆ ೧೫೦ ರೂಪಾಯಿ ಕೊಡುತ್ತಿದ್ದೀರಿ. ಒಂದು ಮೈಲು ಮಾರ್ಗಕ್ಕೆ ೧೫೦ ರೂಪಾಯಿ ಕೊಟ್ಟರೆ ದುರುಸಿ ಮಾಡುವುದಕ್ಕೆ ಸಾಧ್ಯವೇ? ಇನ್ನು ರೋಡುಗಳ ವಿಚಾರ ಹೇಳುವುದಾದರೆ, ನಮ್ಮ ಆಸ್ಫಾಲ್ಟ್ ರೋಡ್ ೪೦೦ ಪರ್‌ಸೆಂಟ್ ಹೆಚ್ಚಾಗಿ ಮಾತಿದ್ದೇವೆ ಎಂದು ಹೇಳಿದ್ದೀರಿ. ಇದು ಯಾವ ಭಾಗದಲ್ಲಿ ಆಗಿದೆ? ನಾನು ತಮಗೆ ಹೇಳಿದ ಹಾಗೆ ಬಿಜಾಪುರಕ್ಕೆ ಮಾನ್ಯ ಶ್ರೀ ಲಕ್ಕಪ್ಪನವರು ಮತ್ತು ಶ್ರೀ ಮಾಗಾವಿಯವರು ಬಂದಿದ್ದರು. ಅವರು ಭೇಟಿಯ ಕಾಲಕ್ಕೆ ಆ ಜಿಲ್ಲೆಯಲ್ಲಿ ಟೂರ್ ಮಾಡಿದರು, ಆವರು ಫೇಸ್ ಪೌಡರ್ ಹಾಕಿ ಕೊಂಡು ಬಂದಿದ್ದರಿಂದ ಅವರನ್ನು ಗುರುತು ಹಿಡಿಯುವುದಕ್ಕಾಗಲಿಲ್ಲ. ಯಾವ ಪ್ರದೇಶ ಹಿಂದುಳಿದಿದೆಯೊ ಆ ಪ್ರದೇಶವನ್ನು ತಾವು ಮುಂದುವರಿಸುವುದಕ್ಕೆ ಪ್ರಯತ್ನಮಾಡಬೇಕೇ ವಿನಹ ಸುಮ್ಮನೆ ಮಾತುತ್ತೇವೆಂದು ಹೇಳುವುದರಲ್ಲಿ ಅರ್ಥ ಇಲ್ಲ. ಎಷ್ಟೋ ಕಡೆಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳು ಸರಿಯಾಗಿಲ್ಲ. ಸಣ್ಣ ಸಣ್ಣ ದಾಗಿ ಆಸ್ಫಾಲ್ಟರಸ್ತೆಗಳನ್ನಾಗಿ ಮಾಡಿದ್ದಾರೆ. ಹೀಗಾಗಿ ಜನರಲ್ಲಿ ಏನು ಭಾವನೆ ಬರುತ್ತದೆಂಬುದನ್ನು ತಾವು ವಿಚಾರ ಮಾಡಬೇಕು.

(ಶ್ರೀ ಎಸ್. ಎಂ. ಗುರೆಡ್ಡಿ)

ಇನ್ನು ಸೇತುವೆಗಳ ವಿಚಾರ. ನಮ್ಮ ಬಿಜಾಪುರದ ವಿಷಯವಾಗಿ ಹೇಳುವುದಾದರೆ, ನಮ್ಮಲ್ಲಿ ಸೇತುವೆಗಳು ಸಾಕಷ್ಟು ಆಗಿವೆ. ಇನ್ನೂ ಆಗುತ್ತಾ ಇವೆ. ಆದರೆ ಆಲ್ಲಿಯ ಅವಶ್ಯಕತೆಗೆ ಅನುಸಾರವಾಗಿ ಆ ಸೇತುವೆಗಳು ಆಗುತ್ತಾ ಇಲ್ಲ. ಇವತ್ತಿನ ದಿವಸ ಹಣಕಾಸಿನ ಸಚಿವರು ತಮ್ಮ ಒಂದು ಸ್ಟೇಟ್‌ಮೆಂಟಿನಲ್ಲಿ ಪಿ. ಡಬ್ಲ್ಯೂ-ಡಿ. ರಸ್ತೆಗಳಲ್ಲಿ ಮೇಲಿಂದಮೇಲೆ ಪ್ರತಿಯೊಂದು ತಾಲ್ಲೂಕಿನಿಂದ ಜಿಲ್ಲಾ ಸ್ಥಳಕ್ಕೆ ಹೋಗಬೇಕಾದರೆ ಆವನ್ನು ಸರ್ವರುತು ರಸ್ತೆಯನ್ನಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಬಿಜಾಪುರ ಜಿಲ್ಲೆಯನ್ನು ಯಾವ ತಾಲ್ಲೂಕಿನಿಂದ ಮುಟ್ಟಬೇಕಾದರೆ ಮಳೆಗಾಲದಲ್ಲಿ ಹೋಗುವುದಕ್ಕಾಗುವುದಿಲ್ಲ. ಮುದ್ದೇಬಿಹಾಳದಿಂದ ಬಿಜಪುರಕ್ಕೆ ಮಳೆಗಾಲದಲ್ಲಿ ಹೋಗುವುದಕ್ಕೇ ಸಾಧ್ಯವಿಲ್ಲ. ಹೀಗಾಗಿ ತಾವು ಆಲ್ಲಿ ಮಾಡಿದಂಥ ಕೆಲಸಗಳಿಂದ ಏನೂ ಉಪಯೋಗವಾಗುವುದಿಲ್ಲ ಆದ್ದರಿಂದ ಯಾವಾಗಲೂ ಎಲ್ಲೆಲ್ಲಿ ಹಿಂದುಳಿದ ಪ್ರದೇಶಗಳು ಇವೆಯೋ ಅಂತಹ ಕಡೆಗಳಲ್ಲಿ ಸರ್ಕಾರದವರು ಹೆಚ್ಚಿಗೆ ಗಮನಕೊಡಬೇಕು. ಈಗಾಗಲೇ ಈ ಬಾಬಿಗೆ ೩ ಕೋಟಿ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಿದ್ದಾರೆ. ಈ ಮೂರು ಕೋಟಿ ರೂಪಾಯಿಗಳಿಂದ ಎಷ್ಟರಮಟ್ಟಿಗೆ ಕೆಲಸಗಳನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ರೋಡ್ ಮೈಲೇಜ್‌ಪ್ರತಿವರ್ಷವೂ ಬೆಳೆಯುತ್ತಿದೆ ಅದನ್ನು ಮೇಂಟೇನ್ ಮಾಡುವುದಕ್ಕಾಗುವುದಿಲ್ಲ. ಎಷ್ಟು ಮಹತ್ವವನ್ನು ಇರಿಗೇಷನ್ನಿಗೆ ಕೊಟ್ಟಿದ್ದೀರೋ ಅಷ್ಟೇ ಮಹತ್ವವಾದಂಥ ಗಮನವನ್ನು ಕಮ್ಯೂನಿಕೇಷನ್ನಿಗೂ ಕೊಡಬೇಕಾಗುತ್ತದೆ. ಇದರಲ್ಲಿ ಯಾವುದಾದರೂ ಒಂದನ್ನು ನೆಗ್‌ಲೆಕ್ಟ್ ಮಾಡಿದರೆ, ಮತ್ತೊಂದು ಯಾವುದೂ ಉದ್ಧಾರವಾಗುವುದಿಲ್ಲ. ಆದ್ದರಿಂದ ಕಮ್ಯೂನಿಕೇಷನ್ಸ್ ಅದರ ಜೊತೆಗೆ ಡೆವಲಪ್‌ಮೆಂಟ್ ಆಗಬೇಕೆಂದು ನಾನು ಹೇಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಸಲುವಾಗಿ ಸಾಕಷ್ಟು ಸದಸ್ಯರು ಈಗಾಗಲೇ ಹೇಳಿದ್ದಾರೆ. ಆದರೆ ಎಲೆಕ್ಟ್ರಿಸಿಟಿ ಬೋರ್ಡಿನವರು ಸಾಧಿಸಿದಂಥ ಕೆಲಸವನ್ನು ನಾವು ಒಬ್ಬರೂ ಹೇಳುತ್ತಾ ಇಲ್ಲ. ನಿಜವಾಗಿ ಹೇಳುವುದಾದರೆ ಎಲೆಕ್ಟ್ರಿಸಿಟಿ ಬೋರ್ಡಿನವರು ಸಾಧಿಸಿರಬಹುದಂಥ ಕೆಲಸ ಬಹಳ ಗಣನೀಯವಾಗಿದೆ. ಕ್ವಾಂಟಿಟಿ ಬಹಳಜಾಸ್ತಿಯಾಗಿದೆ.ಆದರೆಕ್ವಾಲಿಟಿ ಇನ್ನೂ ಇಂಪ್ರೂವ್ ಆಗಬೇಕು. ಅದಕ್ಕೆ ಹೆಚ್ಚು ಗಮನವನ್ನು ಸರ್ಕಾರದವರು ಕೊಡಬೇಕು. ರೂರಲ್ ಎಲೆಕ್ಟ್ರಿಫಿಕೇಶನ್‌ನಲ್ಲಿ ಲಾಸ್ ಆದರೂ ಆಡಿ ಇಲ್ಲ. ಇವತ್ತಿನದಿವಸ ಕ್ರಾಂತಿ ಗ್ರಾಮಾಂತರ ಪ್ರದೇಶಗಳಲ್ಲಿಆಗಬೇಕುಏಂದರೆ ಇಂಡಸ್ಟ್ರೀಸ್‌ನಿಂದ ಪ್ರತಿ ವರ್ಷವೂ ಲುಕ್ಸಾನು ಆಗುತ್ತಿದೆ. ಅದನ್ನು ತುಂಬಬೇಕು ಹಾಗೆ ಎಲ್ಲದರಲ್ಲಿಯೂ ಗ್ರಾಮಾಂತರ ಪ್ರದೇಶಗಳ ಜನರನ್ನು ಮುಂದಕ್ಕೆತರಬೇಕು. ಇದರಲ್ಲಿ ಲಾಸ್ ಆಗುತ್ತಿದೆಯೇದುತಿಳಿದು ರೂರಲ್ ಎಲೆಕ್ಟ್ರಿಫಿಕೇಷನ್ನನ್ನು ಕಡಿಮೆಮಾಡುವುದು ನಿಜವಾಗಿಯೂ ಒಂದು ದುಃಖಕರವಾದ ಸಂಗತಿ. ಒಟ್ಟಿನಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್ ಕಡೆಗೆ ಸರ್ಕಾರದವರು ಹೆಚ್ಚಿಗೆ ಗಮನ ಕೋಡಬೇಕು ಆದರಂತೆ ಪಂಪುಸೆಟ್ಟುಗಳಿಗೂ ಹೆಚ್ಚು ಗಮನಕೊಡಬೇಕು. ಎಲೆಕ್ಟ್ರಿಕ್ ಲೈನುಗಳೆನ್ನು ನದಿಯ ದಂಡೆ ಕಡೆಗೆ ಹಾಕುವಂತೆ ಮಾಡಬೇಕು. ಈಗಾಗಲೇ ಚಿಕ್ಕ ಚಿಕ್ಕ ೫-೧೦ ಎಚ್‌ಪಿ ಹಾಕುವುದಕ್ಕೆ ಲೈಸನ್ಸ್ ಕೊಡುತ್ತಿದ್ದಾರೆ ದೊಡ್ಡ ದೊಡ್ಡ ಕೃಷ್ಣದಂಡೆ ಮಲಪ್ರಭಾ, ಘಟಪ್ರಭಾ ಇರುವ ಕಡೆಗಳಲ್ಲಿ ಎಲೆಕ್ಟ್ರಿಕ್ ಲೈನ್ ಎಳೆದರೆ, ಬೇಕಾದ ರೈತರಿಗೆ ಬಹಳವಾಗಿ ಸಹಾಯವಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಬಿ. ಜ್ವಾಲಯ್ಯ (ಹಾಸನ):- ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಈ ದಿನ ನಮ್ಮ ಮುಂದೆ ಮಂಡಿಸಿರುವ ಎಲ್ಲಾ ಡಿಮ್ಯಾಂಡ್‌ಗಳನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ ನಮ್ಮ ರಾಜ್ಯದಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಸುಮಾರು ಶೇಕಡ ೨೭ ರಷ್ಟು ಇದ್ದಿತು ಈಗ ನಾವು ಆದರಲ್ಲಿ ಉಪಯೋಗಿಸಿರುವುದು ಕೇವಲ ಶೇಕಡ ೯ರಷ್ಟು ಮಾತ್ರವೆಂದು ಹೇಳುವಾಗ ಇನ್ನು ಹೆಚ್ಚಿನ ಕಾರ್ಯ ನಮ್ಮ ಮುಂದೆ ಆಗಾಧವಾಗಿದೆಯೆಂಬುದು ತೋರಿಸಿಕೊಡುತ್ತದೆ. ಈಗ ಪಿ. ಡಬ್ಲ್ಯೂ ಡಿ ಮತ್ತು ಎಲೆಕ್ಟ್ರಿಸಿಟಿ ಇವುಗಳಿಗೆ ನಾವು ವಿನಿಯೋಗಿಸುವ ಹಣ ಮತ್ತು ಆದರಿಂದ ಬರತಕ್ಕ ನಷ್ಟ ಅಥವ ನಷ್ಟ ಇವುಗಳ ಚಿತ್ರವನ್ನು ತಮ್ಮ ಮುಂದೆ ಇಡುತ್ತೇನೆ. ಇರಿಗೇಷನ್ ಸಲುವಾಗಿ ೬೬-೬೭ನೇ ಸಾಲಿನವರೆಗೆ ಕ್ಯಾಪಿಟಲ್ ಔಟ್‌ಲೆ ೧೮೦ ಕೋಟಿ ರೂಪಾಯಿಗಳಷ್ಟು ಇತ್ತು. ಆದರಲ್ಲಿ ವರ್ಕಿಂಗ್ ಎಕ್ಸ್‌ಪೆನ್ಸಸ್ಸಿಗೆ ವಿನಿಯೋಗಿಸಿದ್ದು ಸುಮಾರು ೪೧-೧೩ ಲಕ್ಷ ರೂಪಾಯಿಗಳಾಗುತ್ತದೆ. ಬರುವ ಉತ್ಪತ್ತಿ ೧೫೦ ಲಕ್ಷದ ೧೧ ಸಾವಿರ ರೂಪಾಯಿಗಳು. ಆದರೆ ಹಾಕಿರತಕ್ಕ ಮೂಲ ಬಂಡವಾಳ ೧೦೦ ಕೋಟಿ ರೂಪಾಯಿಗಳು. ಇದರಲ್ಲಿ ಬರತಕ್ಕ ರೆವಿನ್ಯೂ ೧ ಕೋಟಿ ೨೦ ಲಕ್ಷದ ೧೧ ಸಾವಿರ ರೂಪಾಯಿಗಳು. ನಾವು ವಿನಿಯೋಗಿಸಿದ ಹಣಕ್ಕೆ ಕೊಡುವ ಬಡ್ಡಿ ೪ ಕೋಟಿ ೪೮ ಲಕ್ಷದ ೨೦ ಸಾವಿರ ರೂಪಾಯಿಗಳು. ಆದ್ದರಿಂದ ನೀರಾವರಿಯೋಜನೆಗಳಿಂದ ನಮಗೆ ಬರುವ ಒಟ್ಟು ನಷ್ಟ ಏನು ಇಲ್ಲ. ನಷ್ಟ ೫ ಕೋಟಿ ೧೯ ಲಕ್ಷದ ೨೬ ಸಾವಿರ ರೂಪಾಯಿಗಳು. ನೀರಾವರಿಯಲ್ಲಿ ನಾವು ವಿನಿಯೋಗಿಸಿರುವ ೧೦೦ ಕೋಟಿ ರೂಪಾಯಿಗಳಲ್ಲಿ ಪ್ರತಿಫಲ ಯಾವರೀತಿಯೂ ಬಂದಿಲ್ಲ. ಸರ್ಕಾರದವರು ಸರಿಯಾದ ರೀತಿಯಲ್ಲಿ ಆದರಿಂದ ಪ್ರತಿಫಲ ಪಡೆಯುವುದಕ್ಕೆ ಪ್ರಯತ್ನವನ್ನೂ ಮಾಡಲಿಲ್ಲವೆಂಬುದು ಗೊತ್ತಾಗುತ್ತದೆ. ಅದೇ ರೀತಿಯಲ್ಲಿ ಕೃಷ್ಣರಾಜಸಾಗರ ವಿಷಯ

೬೫-೯೯ರಲ್ಲಿ ರೆವಿನ್ಯೂ ಬಂದುದು ೩೦ ಲಕ್ಷದ ೧೨ ಸಾವಿರ ರೂಪಾಯಿಗಳು. ೬೬--೬೭ಕ್ಕೆ ೧೧ ಲಕ್ಷದ ೩ ಸಾವಿರ ರೂಪಾಯಿಗಳು ಖಂತು. ವರ್ಕಿಂಗ್ ಎಕ್ಸ್‌ಪೆನ್ಸಸ್ ೬೫--೬೬ಕ್ಕೆ ೨೩ ಲಕ್ಷ ಚಿಲ್ಲರೆ ಇದ್ದುದು ೬೬ ೬೭ ಕ್ಕೆ ೨೭ ಲಕ್ಷದ ೬೬ ಸಾವಿರಕ್ಕೆ ಏರಿತು. ಆದ್ದರಿಂದ ವರ್ಕಿಂಗ್ ಎಕ್ಸ್‌ಪೆನ್ಸಸ್ ಏರಿತು, ಇನ್‌ಕಂ ಬರುವುದು ಕಡಿಮೆಯಾಯಿತು ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿ ಏನು ಗೌತ್ತಾಗುತ್ತದೆಂದರೆ ಬಹಳ ಹಣ ಬರಬೇಕೆಂದು ಹೇಳಿದ್ದಾರೆ. ಈ ಹಣವನ್ನು ವಸೂಲಿಮಾಡುವುದಕ್ಕೆ ಸರ್ಕಾರ ಸರಿಯಾದ ರೀತಿಯಲ್ಲಿ ತೀಮಾರ-ತಗೆದುಕೊಳ್ಳದೇ ಇರುವುದರಿಂದ ಬಹಳವಾಗಿ ಹಣ ಬಾರದೆ ಈ ಯೋಜನೆಯಲ್ಲಿ ತುಂಬಾ ನಷ್ಟ ಕರ್ಾನ ತ್ತಿದೆ. ಆದೇ ರೀತಿಯಲ್ಲಿ ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ ಶರಾವತಿಯಲ್ಲಿ ೮೦ ಕೋಟಿ ೩೮ ಲಕ್ಷ ಣು ಪಾಯಿಗಳನ್ನು ನಾವು ವಿನಿಯೋಗಿಸಿದ್ದೇವೆ. ಭದ್ರಾಗೆ ೩೦ ಕೋಟಿ ರೂಪಾಯಿಗಳನ್ನು ವಿನಿಯೋಗಿಸಿದ್ದೇವೆ ಶರಾವತಿಯಲ್ಲಿ ನೆಟ್ ಪ್ರಾಫಿಟ್ ೩೭ ಲಕ್ಷ ರೂಪಾಯಿಗಳು ಬರುತ್ತದೆ. ಸರ್ಕಾರದವರು ವಿದ್ಯುಚ್ಛಕ್ತಿಯನ್ನು ಮೈಸೂರು ಎಲೆಕ್ಟ್ರಿಸಿಟಿ ಬೋರ್ಡಿನ ಮೂಲಕ ಮಹಾರಾಷ್ಟ್ರಕ್ಕೆ ಮತ್ತು ಆಂಧ್ರಕ್ಕೆ ಮಾರಾಟಮಾಡುತ್ತಿದ್ದ ೩೮ ಲಕ್ಷ ರೂಪಾಯಿಗಳಷ್ಟು ಇಂಟರೆಸ್ಟ್ ಹೋಗಿ ಭದ್ರಾದಲ್ಲಿ ಸುಮಾರು ೭ ಲಕ್ಷ ರೂಪಾಯಿಗಳಷ್ಟು ನಷ್ಟವಾಗುತ್ತಿದೆ. ಏಕೆ ಈ ರೀತಿ ನಷ್ಟವಾಗುತ್ತದೆಂಬುದಾಗಿ ಹೇಳುವುದು ನಮಗೆ ಅರ್ಥವಾಗುತ್ತಾ ಇಲ್ಲ. ಈ ಸಾರಿ ಕಾಳಿ ನದಿ ಪ್ರಾಜೆಕ್ಟನ್ನು ತೆಗೆದುಕೊಳ್ಳಬೇಕೆಂದೂ, ಅದಕ್ಕೆ ೪ ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದೂ ನಮ್ಮ ಮುಂದೆ ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ನಾನು ಹೇಳುವುದಿಷ್ಟೆ. ಈಗ ಸುಮಾರು ೪೫ ಕೋಟಿ ರೂಪಾಯಿಗಳ ಯೋಜನೆಯನ್ನು ತೆಗೆದುಕೊಂಡರೂ ಸರ್ಕಾರದ ಅಭಿಪ್ರಾಯದ ಪ್ರಕಾರ ೧೯೭೩ನೇ ಇಸವಿಯೊಳಗೆ ಶರಾವತಿ ಮತ್ತು ಭದ್ರಾದಲ್ಲಿ ಬರತಕ್ಕ ವಿದ್ಯುಚ್ಛಕ್ತಿ ಪೂರ್ತಿಯಾಗಿ ಮುಗಿದು ಹೋಗುತ್ತದೆ. ಆಗ ವಿದ್ಯುಚ್ಛಕ್ತಿ ಅಭಾವ ಬರುತ್ತದೆ. ಈಗ ೪ ೧/೨ ಕೋಟಿ ರೂಪಾಯಿಗಳನ್ನು ಪಾತ್ರ ಕಾಳೀನದಿ ಪ್ರಾಜೆಕ್ಟ್‌ಗೆ ವಿನಿಯೋಗಿಸುವ ಬದಲು ೧೦ ಕೋಟಿ ರೂಪಾಯಿಗಳನ್ನು ವಿನಿಯೋಗಿಸಬೇಕು ವಿದ್ಯುಚ್ಛಕ್ತಿ ಉತ್ಪಾದನೆಗೆ ಬೇಕಾದಂಥ ಯಂತ್ರಗಳಿಗೆ ಈಗ ಪರದೇಶಗಳ ಮೇಲೆ ಅವಲಂಬಿಸುವ ಅವಶ್ಯಕತೆ ಇರುವುದಿಲ್ಲ. ಎಲ್ಲಾ ಜನರೇಟರುಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲಾ ಭಾಗಗಳನ್ನು ನಾವೇ ತಯಾರು ಮಾಡುತ್ತಾ ಇರುವಾಗ, ಈ ಯೋಜನೆಗಳನ್ನು ತೀವ್ರಗತಿಯಿಂದ ಕಾರ್ಯಗತಗೊಳಿಸುವುದಕ್ಕೆ ಬೇಕಾದಷ್ಟು ಸಾಲವನ್ನು ನಾವು ಬ್ಯಾಂಕುಗಳ ಮುಖಾಂತರ ತೆಗೆದುಕೊಳ್ಳಬಹುದು.

ಯಾಕೆಂದರೆ ಸರಕಾರಕ್ಕೆ ಆದಾಯ ಬರುವುದಕ್ಕೆ ಮಾರ್ಗವಾಗಿರುವುದರಿಂದ ಹೆಚ್ಚು ಹಣವನ್ನು ವಿನಿಯೋಗಿಸಿ ತೀವ್ರಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಶರಾವತಿಯಲ್ಲಿ ಮೂರು ಜನರೇಟರುಗಳು ಇನ್‌ಸ್ಟಾಲ್ ಮಾಡಿಲ್ಲ ಎಂದು ತಿಳಿದು ಬಂದಿದೆ. ಮೊದಲು ಹತ್ತು ಜನರೇಟರುಗಳು ಪರದೇಶದಿಂದ ಬರಬೇಕಾಗಿತ್ತು. ಭೂಪಾಲ್ ಹೆವಿ ಎಲೆಕ್ಟ್ರಿಕಲ್ಸ್‌ನವರು ಕೆಲವು ಯಂತ್ರಗಳನ್ನು ಈಗ ಸೆಪ್ಲೈ ಮಾಡುತಾರೆ. ಈಗ ಆಲ್ಲಿ ಇರುವುದನ್ನು ಉಪಯೋಗಿಸುವ ಸೌಲಭ್ಯ ಇರುವುದರಿಂದ ಪರದೇಶದಿಂದ ಜನರೇಟರ್ ತರಿಸುತ್ತಾ ಇಲ್ಲ. ಆದರೆ ಇಲ್ಲಿಯು ಜನರೇಟರುಗಳು ಸಿಕ್ಕದೆ, ಶರಾವತಿಯಲ್ಲಿ ದೊರೆಯುವ ವಿದ್ಯುಚ್ಛಕ್ತಿಯನ್ನು ಪೂರ್ಣವಾಗಿ ಉಪಯೋಗ ಮಾಡುವುದಕ್ಕೆ ಅವಕಾಶವಾಗುತ್ತಾ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಪಿ.ಡಬ್ಲ್ಯೂ.ಡಿ ಯವರು ಕೈಗೊಂಡಿರುವ ಮೇಜರ್ ಇರಿಗೇಷನ್ ನಿಂದ ಪ್ರತಿಫಲ ನಿಧಾನವಾಗಿ ಬರುತ್ತದೆ. ಆದರೆ ಮೈನರ್ ಇರಿಗೇಷನ್ ಲಿಫ್ಟ್ ಇರಿಗೇಷನ್‌ಬಗ್ಗೆ ಸರಕಾರ ಆಸಕ್ತಿ ವಹಿಸಿದರೆ ಅದರ ಪ್ರತಿಫಲ ಬೇಗ ಬರುತ್ತದೆ ಆದುದರಿಂದ ಆದಕ್ಕೆ ಹೆಚ್ಚು ಹಣವನ್ನು ಸರಕಾರ ವಿನಿಯೋಗಿಸಬೇಕಾಗಿದೆ. ಇದರ ಜೊತೆಗೆ ಖರ್ಚುಮಾಡುವುದನ್ನು ಹೇಗೆ ಉಳಿತಾಯ ಮಾಡಬೇಕೆಂದು ಯೋಚಿಸಬೇಕಾಗಿದೆ ಪಿ ಡಬ್ಲ್ಯೂ ಡಿ. ಒಂದರಲ್ಲೇ ಎರಡು ಮೂರು ಕೋಟಿ ರೂಪಾಯಿಗಳ ಬೆಲೆಬಾಳತಕ್ಕ ಯಂತ್ರಗಳು ನಿರುಪಯೋಗವಾಗಿವೆ. ಇದರ ಬಗೆಯೂ ಸರಕಾರ ಸಾಕಷ್ಟು ಗಮನ ಹರಿಸುತ್ತಾ ಇಲ್ಲ ಸ್ಪೇರ್ ಪಾರ್ಟ್ಸ್‌ಗಾಗಿ ಲಕ್ಷಾಂತರ ರೂಪಾಯಿ ಖರ್ಚುಮಾಡಿದವು ಒಂದು ಸಣ್ಣ ಸ್ಪೇರ್ ಪಾರ್ಟ್ಸ್ ಇಲ್ಲದೆ ಯಂತ್ರಗಳು ಹಾಗೆಯೇ ಬಿದ್ದಿರುವುದನ್ನು ನಾವು ನೋಡಬಹುದು. ಆಡಿಟ್ ವರದಿಯಲ್ಲಿ ಸ್ಪಷ್ಟವಾಗಿ ಹೇಳಿರುವಂತೆ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಐಡಿಲ್ ಮಿಷನರಿಯನ್ನು ನಮ್ಮ ಸರಕಾರದವರು ಉಪಯೋಗಿಸದೆ ಇರುವಂತ ಕ್ರಿಮಿನಲ್ ವೇಸ್ಟ್ ಎಂದು ಹೇಳಿದರೆ ತಪ್ಪಾಗಲಾರದು. ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದ ಹಾಗೆ ನಮ್ಮ ಆದಾಯ ಶೇಕಡಾ ೬೦ರಷ್ಟು ಹಣವನ್ನು ಖರ್ಚುಮಾಡುತ್ತಾ ಇರುವ ಡಿಪಾರ್ಟ್‌ಮೆಂಟ್‌ನಲ್ಲಿ ಶಿಸ್ತು ಕಾಣುತ್ತಾ ಇಲ್ಲ ಅಲ್ಲಿ ಶಿಸ್ತು ಇಲ್ಲದಿದ್ದರೆ ಬೇರೆ ಎಲ್ಲಿಯೂ ಶಿಸ್ತು ಬರುವುದಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಪ್ರತಿಯೊಂದು ಡಿಪಾರ್ಟ್‌ಮೆಂಟಿಗೆ ಬೇಕಾದ ಸಿವಿಲ್ ವರ್ಕ್ಸ್ ಪಿ. ಡಬ್ಲ್ಯೂ. ಡಿ. ಅವರೇ ಮಾಡಬೇಕಾಗಿರುತ್ತದೆ. ಆಸ್ಪತ್ರೆಗೆ ಬೇಕಾದ ಕಟ್ಟಡ ಆಗಲೇಬೇಕು. ಅದು ಸರಿಯಾದ ಕಾಲದಲ್ಲಿ ಪೂರೈಸದೆ ಹೋದರೆ ಆಸ್ಪತ್ರೆಯ ಕಾರ್ಯಕ್ರಮಗಳು ನಿಂತು ಹೋಗಿ ಆನಾಯಕತ್ವಕ್ಕೆ ಅವಕಾಶವಾಗುತ್ತದೆ. ಪಿ. ಡಬ್ಲ್ಯೂ. ಡಿ: ಮುಖ್ಯ ಡಿಪಾರ್ಟ್‌ಮೆಂಟ್. ಅಲ್ಲಿ ಹಣದ ವಿಚ್ಚದ ಬಗ್ಗೆ ಹೆಚ್ಚಿನ ಶಿಸ್ತನ್ನು ನಿರೀಕ್ಷಿಸುತ್ತೇನೆ. ಆದೂ ಇಲ್ಲದಿದ್ದರೆ ಅವ್ಯವಸ್ಥೆ ಆಗುವುದರಲ್ಲಿ ಯಾವ ಸಂಶಯವೂ ಇಲ್ಲ ಎಂದು ಹೇಳಬಹುದು. ಕೆಲವು ಯೋಜನೆಗಳನ್ನು ನೋಡೋಣ,

(ಶ್ರೀ ಹೆಚ್. ಬಿ. ಜ್ವಾಲನಯ್ಯ)

ಬಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಏನಿದೆ ಆದ ಬಹಳ ಸ್ಕಿಲ್ಡ್ ಡಿಪಾರ್ಟ್‌ಮೆಂಟ್ ಎಂದು ಹೇಳಿ ಪಹುದು. ಆದರೆ ಅವರು ಮಾಡುವಂಥ ಯೋಜನೆಗಳು ತಿಳುವಳಿಕೆ ಇಲ್ಲದೆ ಮಾಡುವ ಯೋಜನೆಗಳು ಆಗಿವೆ. ಅನೇಕ ಸಾರಿ ಉದಾಹರಣೆಗೆ ಯಾವುದಾದರೂ ಒಂದು ಯೋಜನೆಗೆ ಎಷ್ಟು ಖರ್ಚಾಗುತ್ತದೆ ಎಸ್ಟಾಬ್ಲಿಷ್‌ಮೆಂಟಿಗೆ ಖರ್ಚಾಗುತ್ತದೆ ಎಂದು ಮುಂಚಿಯೇ ನಿಗದಿ ಮಾಡುತ್ತಾರೆ. ತುಂಗಭದ್ರ ಹೆ ಲೆವಲ್ ಕಾಲುವೆ ಬಗ್ಗೆ ಅವರ ಎಸ್ಟಿಮೇಟ್ ಪ್ರಕಾರ ಎಸ್ಟಾಬ್ಲಿಷ್‌ಮೆಂಟ್ ಮೇಲೆ ಶೇಕಡಾ ೯ ರಷ್ಟು ಮಾತ್ರ ಖರ್ಚುಮಾಡಬೇಕಾಗಿತ್ತು. ಆದು ಎಲ್ಲಿಯವರೆಗೆ ಹೋಗಿದೆ ಎಂದರೆ ಶೇಕಡಾ ೨೦ ರಷ್ಟರವರೆಗೆ ಹೋಗಿದೆ. ಆಲ್ಲಿ ಎಷ್ಟು ಭೂಮಿಯನ್ನು ನೀರಾವರಿಗೆ ಆಳವಡಿಸಬೇಕು ಎಂದು ಯೋಜನೆಯನ್ನು ಮಾಡಿ ಟಾರ್‌ಗೆಟ್ ಫಿಕ್ಸ್ ಮಾಡಿಕೊಂಡಿದ್ದಾರೆ. ತುಂಗಭದ್ರ ಪ್ರಾಜೆಕ್ಟಿನ ಕೆಳಗೆ ೧೯೬೬-೬೭ ರಲ್ಲಿ ೨೦ ಸಾವಿರ ಎಕರೆ ಟಾರ್‌ಗೆಟ್ ಇಟ್ಟುಕೊಂಡಿದ್ದು, ಅವರು ಮುಗಿಸಿರುವುದು ೧೬,೩೮೦ ಎಕರೆ ೧೯೬೭-೬೮ರಲ್ಲಿ ೨೦ ಸಾವಿರ ಎಕರೆ ಗುರಿ ಇಟ್ಟುಕೊಂಡು ಅವರು ಮುಗಿಸಿರುವುದು ಕೇವಲ ೧೨,೨೦೦ ಎಕರೆಗಳು ಮಾತ್ರ. ಇದು ಆಧಿಕ್ಕಿಂತ ಸ್ವಲ್ಪ ಜಾಸ್ತಿ, ಆದರೂ ಎಸ್ಟಾಬ್ಲಿಷ್‌ಮೆಂಟ್ ಮಾತ್ರ ಜಾಸ್ತಿಯಾಗುತ್ತಾ ಇದೆ. ಈ ಯೋಜನೆಯ ಗುರಿ ನಿರ್ದೇಶದ ರೀತಿಯ ಮಟ್ಟದಲ್ಲಿ ಹೋಗುತ್ತಾ ಇಲ್ಲ ಎಂದು ಕಾಣುತ್ತದೆ. ತುಂಗಭದ್ರ ಹೈಲೆವಲ್ ಕೆನಾಲ್‌ಗೆ ೯ ಪರ್ಸೆಂಟ್ ಎಸ್ಟಾಬ್ಲಿಷ್‌ಮೆಂಟ್‌ಗೆ ಇಟ್ಟಿದ್ದು ಖರ್ಚಾದದ್ದು ೨೦ ಪರ್ಸೆಂಟ್. ೧೯೬೬-೬೭ರಲ್ಲಿ ಮೈಸೂರಿನವರು ಖರ್ಚುಮಾಡಿದ ಹಣ ೩ ಕೋಟಿ ೩೩ ಲಕ್ಷ ರೂಪಾಯಿಗಳು ಆದರೆ ೧೯೬೭ರಲ್ಲಿ ಅಲ್ಲಿಂದ ಬಂದಂಥ ನೀರನ್ನು ಒಂದು ಎಕರೆಗೂ ಉಪಯೋಗಿಸಿಕೊಳ್ಳಲಿಲ್ಲ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ಮಾಡಿದಂತ ಯೋಜನೆಗಳ ಪ್ರತಿಫಲವನ್ನು ಇನ್ನೊಂದು ಇಲಾಖೆಯವರು ಉಪ ಯೋಗಿಸಿಕೊಳ್ಳದೆ ಹೋದರೆ ಸರಕಾರಕ್ಕೆ ನಷ್ಟವಾಗುತ್ತದೆ. ಅದೇ ರೀತಿ ಕಬಿನಿ ಪ್ರಾಜೆಕ್ಟ್ ಎಸ್ಟಾಬ್ಲಿಷ್‌ಮೆಂಟ್‌ಗೆ ಪ್ರೊವೈಡ್ ಮಾಡಿದ್ದು ಕೇವಲ ೫ ಪರ್ಸೆಂಟು. ಖರ್ಚಾದದ್ದು ೪೦ ಲಕ್ಷ ೨೧ ಸಾವಿರ, ಆದರೆ ೧೪ ಪರ್ಸೆಂಟ್ ವರ್ಕ್ ಔಟ್ ಆಯಿತು ಇಷ್ಟು ಖರ್ಚುಮಾಡಬೇಕಾದರೆ ಡೆವಲಪ್‌ಮೆಂಟ್ ಎಷ್ಟು ಕಡಿಮೆ ಆಯಿತು, ಯಾಕೆ ಕಡಿಮೆ ಆಯಿತು, ಎಂದು ಸರಕಾರದವರು ಸೂಕ್ಷ್ಮವಾಗಿ ಪರಿಶೀಲಿಸಬೇಕು. ಇದಕ್ಕೆ ನಾನಾ ಕಾರಣಗಳು ಇವೆ. ಅಕೌಂಟೆಂಟ್ ಜನರಲ್ ಅವರು ಅನೇಕ ಕಾರಣಗಳನ್ನು ಹೇಳಿದ್ದಾರೆ. ಅದರಲ್ಲಿ ಬಹಳ ಮುಖ್ಯವಾದದ್ದು ಸರಕಾರ ಕ್ಲಿಯರೆನ್ಸ್ ತೆಗೆದುಕೊಳ್ಳದೆ ಇಗುವುದು, ಟೆಂಡರ್ಸ್ ವಿಚಾರದಲ್ಲಿ ಆಗಲಿ ಆಥವಾ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಸಂದರ್ಭದಲ್ಲಿ ಆಗಲಿ ತೀವ್ರವಾದ ಡಿಸಿಷನ್ ತೆಗೆದುಕೊಳ್ಳದೆ ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ ಕೆಲವು ಕಡೆ ಅಡ್‌ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಆಗಿ ೨೦ಲ್ಕೈದು ವರ್ಷಗಳಾದರೂ ಟೆಕ್ನಿಕಲ್ ಸ್ಯಾಂಕ್ಷನ್ ಕೊಡದೆ ಇರುವುದು ಇದೆ. ೧೪೦ ಲಕ್ಷ ರೂಪಾಯಿ ಯೋಜನೆಗೆ ಅಡ್‌ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಕೊಟ್ಟು ಟೆಕ್ನಿಕಲ್ ಸ್ಯಾಂಕ್ಷನ್ ಕೊಡದೆ ೧೪೮ ಲಕ್ಷ ರೂಪಾಯಿಗಳು ಖರ್ಚುಮಾಡಿರುವುದೂ ಉಂಟು ಪಿ. ಡಬ್ಲ್ಯೂ. ಡಿ. ಯಲ್ಲಿ ಹಣದ ಖರ್ಚಿನ ಬಗ್ಗೆ ಶಿಸ್ತನ್ನು ನಾವು ಸರಿಯಾದ ರೀತಿಯಲ್ಲಿ ತರದೇ ಹೋದರೆ ಹಣ ಅಪವ್ಯಯವಾಗುತ್ತದೆ. ಎಷ್ಟು ಹಣವನ್ನು ಕೊಟ್ಟರೂ ಅದನ್ನು ಖರ್ಚುಮಾಡುವವರು ಚೀಫ್ ಇಂಜಿನೀಯರು, ಸೂಪರಿಂಟೆಂಡಿಂಗ್ ಎಗ್ಸಿಕ್ಯೂಟೀವ್ ಇಂಜಿನೀಯರ್ ಕೆಳಮಟ್ಟದಲ್ಲಿ ಸೂಪರ್ ವೈಸರ್, ಜೂನಿಯರ್ ಇಂಜಿನೀಯರುಗಳು, ಜೂನಿಯರ್ ಅಸಿಸ್ಟೆಂಟ್ ಇಂಜಿನೀಯರುಗಳೂ ಬರುತ್ತಾರೆ. ಜೂನಿಯರ್ ಅಸಿಸ್ಟೆಂಟ್ ಇಂಜಿನೀಯರುಗಳ ಸಮಸ್ಯೆಯ ದೊಡ್ಡ ಗೊಂದಲದಲ್ಲಿ ಸಿಕ್ಕಿಹಾಕಿಕೊಂಡಿದೆ ಅವರಿಗೆ ಸರಿಯಾದ ಸ್ಕೇಲುಗಳನ್ನು ಕೊಡುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದಾರೆ. ಜೂನಿಯರ್ ಇಂಜಿನಿಯರುಗಳಿಗೆ ಮೆಡಿಕಲ್ ಪದವೀಧರರ ಸಂಬಳದ ಸ್ಕೇಲುಗಳನ್ನು ಕೊಡದೆ ಇರುವುದರಿಂದ ಅವರಲ್ಲಿ ಕೆಳಮಟ್ಟದಲ್ಲಿ ಕೆಲಸ ಮಾಡುವ ಜೂನಿಯರ್ ಇಂಜಿನಿಯರುಗಳ ಕೆಲಸ ನಿಧಾನವಾಗುವುದಕ್ಕೆ ಒಂದು ಮೂಲ ಕಾರಣವಾಗಿದೆ. ಈ ಸಮಸ್ಯೆ ಪರಿಹಾರವಾಗದೆ ಇದ್ದರೆ; demoralisation in the cadre will develop which will be ultimately fatal to the country's development."

ಇನ್ನು ವಾಟರ್ ಟ್ಯಾಕ್ಸ್ ಬಗ್ಗೆ ಮಾನ್ಯ ಮಂತ್ರಿಗಳು ಪರಿಶೀಲಿಸಬೇಕಾಗಿದೆ. ಎಲ್ಲಿ ಸರಕಾರ ತನ್ನ ಹಣವನ್ನು ಹಾಕಿ ಯೋಜನೆಗಳನ್ನು ಮಾಡಿ ಮುಗಿಸಿದೆಯೋ, ಅಲ್ಲಿ ಆ ಯೋಜನೆಗಳಿಂದ ನೀರನ್ನು ಪಡೆಯುವ ಕಡೆ ಜನರಿಂದ ವಾಟರ್ ಟ್ಯಾಕ್ಸ್ ವಸೂಲುಮಾಡುವುದು ಧರ್ಮವಾದದ್ದು ಮತ್ತು ನ್ಯಾಯ ವಾದದ್ದು. ಆದರೆ ಹಾಸನ ಮತ್ತು ಸಕಲೇಶಪುರದಲ್ಲಿ ಟಿಪ್ಪುಸುಲ್ತಾನನ ಮತ್ತು ಮಹಾರಾಜರ ಕಾಲದ ಕೆರೆಗಳ ಆಚ್ಚುಕಟ್ಟಿಗೆ ವಾಟರ್ ಟ್ಯಾಕ್ಸ್ ಕೊಡಬೇಕೆಂದು ಮಾಡಿದ್ದಾರೆ. ರೈತನ ಮನಸಿನಲ್ಲಿ ನ್ಯವಸಾಯ ಒಂದು ಲಾಭದಾಯಕವಾಗಿ ಮಾಡಬಹುದು ಎನ್ನುವ ಭಾವನೆ ಹುಟ್ಟುತ್ತಾ ಇರುವಾಗ, ಈ ರೀತಿಯ ಕಿರುಕುಳ ಕೊಟ್ಟು ಅವನ ಆಸೆಗೆ ಪೆಟ್ಟು ಕೊಟ್ಟರೆ ಸರಕಾರ ಅದರಿಂದ ಜನತೆಗೆ ತೊಂದರೆ ಮಾಡಿ ದಂತಾಗುತ್ತದೆ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ವಾಟರ್ ಟ್ಯಾಕ್ಸ್‌ನ್ನು ಪುನರ್ ಪರಿಶೀಲನೆ

ಮಾಡುವುದು ಅವಶ್ಯಕ. ಸರಕಾರದವರು ಎಲ್ಲಿ ಹೊಸ ಯೋಜನೆಗಳನ್ನು ಮಾಡುತ್ತಾರೋ ಆ ಯೋಜನೆಗಳ ಕೆಳಗೆ ಬರುವ ಅಚ್ಚುಕಟ್ಟುದಾರರಿಗೆ ಟ್ಯಾಕ್ಸ್ ಹಾಕಬೇಕು. ಬಾಕಿ ಕಡೆ ಹಾಕಬೇಕಾಗಿಲ್ಲ. ಮಲೆನಾಡಿನಲ್ಲಿ ಮಳೆ ನೀರಿನ ಸಹಾಯದಿಂದ ವ್ಯವಸಾಯ ಮಾಡುವವರಿಗೆ ವಾಟರ್ ಟ್ಯಾಕ್ಸ್ ಕೊಡಿ ಎಂದು ಕೇಳುವುದು ಧರ್ಮವಲ್ಲ ಮತ್ತು ಪ್ರಜ್ಞಾಪ್ರಭುತ್ವದ ಲಕ್ಷಣವಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

3-30 P. M.

ಯಗಜಿ ನಾನ್‌ಷೆಡ್ಯೂಲ್ ರಿವರು. ಮೈಸೂರು ಮತ್ತು ಮದ್ರಾಸಿಗೆ ಆಗಿರುವ ಒಪ್ಪಂದದಲ್ಲಿ ಆ ನದಿಯ ಮೇಲ್ಬಾಗ ಬರುತ್ತದೆ. ೫೭ ಸಾವಿರ ಎಕರೆ ಆಬಾದು ಆಗುವ ಅವಕಾಶ ಇದೆ. ೬ ಕೋಟಿ ರೂಪಾಯಿ ಎಸ್ಟಿಮೇಟ್ ಮಾಡಿದ್ದಾರೆ, ಇದು ಅತ್ಯವಶ್ಯಕವಾದುದು. ಹೇಮಾವತಿ ಪ್ರಾಜೆಕ್ಟ್‌ನಿಂದ ಹಾಸನದ ನಮ್ಮ ಭಾಗಕ್ಕೆ ಯಾವ ರೀತಿಯ ಅನುಕೂಲವು ಇಲ್ಲ, ನನ್ನ ಒಂದು ಕ್ಷೇತ್ರದಲ್ಲಿ ೭ ಸಾವಿರ ಎಕರೆಗಿಂತ ಹೆಚ್ಚು ಭೂಮಿ ಮುಳುಗಡೆಯಾಗುತ್ತದೆ, ಶ್ರೀ ಮಾನ್ ನಂಜೇಗೌಡರ ಕ್ಷೇತ್ರದಲ್ಲಿ ೫-೬ ಸಾವಿರ ಎಕರೆ ಮುಳುಗಡೆಯಾಗುತ್ತದೆ. ಅದಕ್ಕೆ ಹೇಮಾವತಿ ಪ್ರಾಜೆಕ್ಟ್ ಬೇಡ ಅಂತ ಅಲ್ಲ. ಆದರ ಮೇಲ್ಕಡೆ ಕಟ್ಟತಕ್ಕ ಯಗಜಿ ಪ್ರಾಜೆಕ್ಟು ಒಹಳ ದಿವಸದಿಂದ ಕೇಳತಕ್ಕ ಒಂದು ಪ್ರಾಜೆಕ್ಟಾಗಿದೆ. ಅದು ಅವಶ್ಯಕ. ಆದರಿಂದ ಬರುವಂತಹ ಪ್ರತಿಫಲ ಬೇರೆ ಯಾವ ಯೋಜನೆ ಮಾಡಿದರೂ ಬರುವಂತೆ ಇಲ್ಲ ಎಂದ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹೇಮಾವತಿ ಯೋಜನೆಯಿಂದ ಮುಳುಗಡೆಯಾಗತಕ್ಕ ರೈತರ ಪರಿಸ್ಥಿತಿ ಒಹಳ ಚಿಂತಾಜನಕವಾಗಿದೆ. ಏಕೆಂದರೆ ಅವರ ಬಗ್ಗೆ ತೀವ್ರವಾಗಿ ಒಂದು ತೀರ್ಮಾನ ತೆಗೆದುಕೊಳ್ಳದೆ ಏನಾನುಕೂಲವಾಗಿದೆ. ಹಾಸನ ಜಿಲ್ಲೆಯಲ್ಲಿ ೫ ತಾಲ್ಲೂಕುಗಳಲ್ಲಿ ಯಾವ ಜಮೀನು ಇತರರಿಗೆ ಕೊಡಕೂಡದು ಎಂದು ಸರ್ಕಾರದವರು ತೀರ್ಮಾನಮಾಡಿ ಆದೇಶ ಕೊಟ್ಟಿದ್ದಾರೆ. ಈ ತೀರ್ಮಾನ ಮಾಡುವುದಕ್ಕೆ ಮುಂದೆಯೇ ಅತ್ಯುತ್ತಮವಾದ ಎಲ್ಲಾ ಜಮೀನುಗಳನ್ನು ಆಗಲೇ ತಹಸೀಲ್ದಾರರು, ಅಸಿಸ್ಟೆಂಟ್ ಕಮೀಷನರು ಕೊಟ್ಟುಬಿಟ್ಟಿದ್ದಾರೆ. ಇನ್ನು ಜಮೀನು ಇಲ್ಲ. ಫಲವತ್ತಾದ ಭೂಮಿ ಮುಳುಗಡೆಯಾದರೂ ಕೂಡ ಸರಿಯಾದಂತಹ ಒಂದು ಪ್ರತಿಫಲ ಅವರಿಗೆ ಸಿಕ್ಕುವುದಿಲ್ಲ ಎಂಬ ಸಂಶಯ ಬಂದಿದೆ. ಕಾಲುವೆಗಳಿಗೆ ಜನರು ಆಡ್ಡಿ ಬರುತ್ತಾರೆ, ನಾವು ಅದಕ್ಕೆ ಬೆಂಬಲ ಕೊಡುತ್ತಾ ಇದ್ದೇವೆ ಎಂದು ಹೇಳುತ್ತಾರೆ. ಇದು ಸರಿಯಲ್ಲ. ಕಾಲುವೆಗಳನ್ನು ತೆಗೆಯುವಾಗ ಅದಕ್ಕೆ ಪರಿಹಾರವನ್ನು ಕೊಡತಕ್ಕ ಸಂದರ್ಭದಲ್ಲಿ ಇರತಕ್ಕ ವಿಧಿ ವಿಧಾನಗಳು ಒಹಳ ದೀರ್ಘವಾಗಿದೆ, ಅದಕ್ಕೋಸ್ಕರ ತಕ್ಷಣವೇ ಶೇಕಡ ೬೦ ರಷ್ಟು ಪರಿಹಾರವನ್ನು ಕೊಟ್ಟು ಉಳಿದಿದ್ದರ ಬಗ್ಗೆ ತೀರ್ಮಾನವಾದ ಮೇಲೆ ಕೊಡುವಂತಹ ಕ್ರಮ ಅನುಸರಿಸುವುದು ಒಳ್ಳೆಯದು. ಆಯಾಯಾ ಗೋರ್ಮಾದಲ್ಲಿ ತಹಸೀಲ್ದಾರರು ಅಥವಾ ಸಂಬಂಧಪಟ್ಟ ಅಧಿಕಾರಿಗಳು ಮುಳುಗಡೆಯಾಗತಕ್ಕ ಜನರಿಗೆ ಜಮೀನನ್ನು ಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ.ಎಂ. ಇದಿನಬ್ಬ (ಮಂಗಳೂರು-೨):—ಸನ್‌ಮಾನ್ಯ ಅಧ್ಯಕ್ಷರೇ, ನಾನು ಸಣ್ಣ ನೀರಾವರಿ ಮತ್ತು ವಿದ್ಯುತ್ತಿನ ವಿಷಯದಲ್ಲಿ ಎರಡು ವಿಷಯಗಳನ್ನು ಹೇಳಿ ಮುಂದೆ ಬಂದರುಗಳ ವಿಷಯದಲ್ಲಿ ಕೆಲವು ಸೂಚನೆಗಳನ್ನು ಹೇಳಲು ಇಚ್ಛಿಸುತ್ತೇನೆ. ಸಣ್ಣ ನೀರಾವರಿ ಬಹಳ ಪ್ರಾಮುಖ್ಯವಾದ ಒಂದು ಯೋಜನೆ. ದೊಡ್ಡ ನೀರಾವರಿ ಆಗಬೇಕೆಂದು ಹೇಳುವಂತಹದು ಬಹಳ ಹಣ ಖರ್ಚು ಮಾಡಿ ಆಗುವಂತಹದಾಗಿದೆ. ಈ ಸಣ್ಣ ನೀರಾವರಿ ಅನುಕೂಲ ಎಲ್ಲಾ ಕಡೆಗಳಲ್ಲಿ ಕೊಡದಿದ್ದರೆ ಆಹಾರ ಬೆಳಸಬೇಕೆಂದು ಹೇಳತಕ್ಕ ಕಾಲದಲ್ಲಿ ರೈತರ ಆಹಾರ ಬೆಳೆಸಲಿಕ್ಕೆ ಬಹಳ ಕಷ್ಟವಾಗುತ್ತದೆ ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆ ತೆಗೆದುಕೊಂಡರೆ ಅಲ್ಲಿ ದೊಡ್ಡ ನೀರಾವರಿ ಯೋಜನೆ ಇಲ್ಲವೇ ಇಲ್ಲ. ಎಲ್ಲ ಸಣ್ಣ ನೀರಾವರಿ ಯೋಜನೆಗಳೇ ಇರುವಂತಹದು, ಪಂಪ್‌ಸೆಟ್ಟುಗಳ ಮೂಲಕವೇ ಮಾಡಬೇಕು ಅಲ್ಲಿ ಕೆಲವು ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಸಿಗದಿ ಮಾಡಿದರೂ ಕೂಡ ಯಾವದೂ ಇನ್ನು ಕಾರ್ಯರೂಪಕ್ಕೆ ಬಂದು ಸಂಪೂರ್ಣವಾಗಿಲ್ಲ. ಆದು ಅಲ್ಲದೆ ಪಂಪ್‌ಸೆಟ್ಟು ನಮಗೆ ಬೇಕು ಎಂದು ರೈತರು ಬೇಕಾದಷ್ಟು ಮುಂದೆ ಬರುತ್ತಾ ಇದ್ದರೂ ಸಹ ಸರ್ಕಾರದವರು ಪೇಳತಕ್ಕ ಮಾತುಗಳನ್ನು ಅನುಲಕ್ಷಿಸಿ ಹೆಚ್ಚು ಬೆಳೆ ಬೆಳೆಯಬೇಕೆಂದು ಎಲ್ಲಾ ರೈತರು ಒಹಳ ಹುಮ್ಮಸ್ಸನ್ನು ತೋರಿಸತಕ್ಕ ಈ ಕಾಲದಲ್ಲಿ ಅವರಿಗೆ ಸಾಕಾದಷ್ಟು ಪಂಪ್‌ಸೆಟ್ಟುಗಳು ಸಿಕ್ಕುವುದಿಲ್ಲ, ಸಿಕ್ಕಿದರು ಸಹಿತ ವಿದ್ಯುತ್ ಸಿಕ್ಕುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ತೊಂದರೆಯಾಗಿರುವುದನ್ನು ನಾನು ನೋಡಿದೇನೆ. ಅಷ್ಟೇ ಬೇಕಾದಷ್ಟು ನದಿಗಳು ಇವೆ, ೧೫೦ ಇಂಚು ಮಳೆಯಾಗುತ್ತದೆ ಅದೆಲ್ಲಾ ಇಂಗಿಹೋಗುತ್ತದೆ, ನದಿ ನೀರು ಹರಿದು ಸಮುದ್ರಕ್ಕೆ ಹೋಗುತ್ತದೆ. ಪಂಪ್‌ಸೆಟ್ಟುಗಳ ಮೂಲಕ ಅದನ್ನು ಉಪಯೋಗಮಾಡಿದರೆ ಆಹಾರದ ಕೊರತೆಯನ್ನು ನೀಗಬಹುದು. ಈ ವರ್ಷ ಒಳ್ಳೆಯದಾಗಿದೆ ಎಂದು ಹೇಳಿದರೂ ಬರುವ ವರ್ಷ ಏನಾಗುತ್ತದೆಯೋ ಅದರ ಬರುವ ವರ್ಷ

(ಶ್ರೀ ಬಿ. ಏಂ. ಇದಿನಬ್ಬ)

ಏನಾಗುತ್ತದೆಯೋ ಅಂತ ಹೇಳಲಿಕ್ಕೆ ಬರುವುದಿಲ್ಲ. ಅದೂ ಅಲ್ಲದೆ ಬತ್ತದ ಕ್ರಯ, ಅಕ್ಕಿಯ ಕ್ರಯ ಸರಿಯಾಗಿ ಇಲ್ಲದೇ ಇದ್ದರೆ ಬೆಳೆಯತಕ್ಕವರು ಉದಾಸೀನರಾಗುತ್ತಾರೆ. ಅದು ಒಂದು ಮಟ್ಟದಲ್ಲಿದ್ದರೆ ಹೆಚ್ಚಾಗಿ ಬೆಳೆಯಲಿಕ್ಕೂ ಸಾಧ್ಯವಾಗುತ್ತದೆ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ನೀರಾವರಿ ಯೋಜನೆಯ ಬಗ್ಗೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕು. ಪಂಪ್‌ಸೆಟ್ಟುಗಳನ್ನು ಒದಗಿಸುವುದರ ಬಗ್ಗೆ ಶೀಘ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸಂಬಂಧಪಟ್ಟ ಮಂತ್ರಿಗಳ ಹತ್ತಿರ ವಿನಯದಿಂದ ಕೇಳಿಕೊಳ್ಳುತ್ತಾ ಇದ್ದೇನೆ. ಕೆಲವೊಂದು ಸಂದರ್ಭದಲ್ಲಿ ಈ ಹಳ್ಳಿಗಳಲ್ಲಿರತಕ್ಕ ವಿದ್ಯುತ್ ಸೂಪರ್‌ವೈಸರುಗಳು ಸಾಕಾದಷ್ಟು ಜಾಗರೂಕತೆಯಿಂದ ಕೆಲಸ ಮಾಡದೇ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಾ ಇದೆ. ಆದ್ದರಿಂದ ಅವರ ಮೇಲೆ ಸರಿಯಾದ ನಿಗ ಇಟ್ಟು ಕೆಲಸ ಮಾಡಿದರೆ ಪಂಪ್ ಸೆಟ್ಟುಗಳಿಗೆ ಹೆಚ್ಚಾಗಿ ವಿದ್ಯುತ್ತನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಲು ಅಪೇಕ್ಷಿಸುತ್ತೇನೆ. ಹಿರಿಯಡಕದಲ್ಲಿರತಕ್ಕೆ ಟ್ರಾನ್ಸ್‌ಫಾರ್ಮರ್ ಹಾಳಾದ್ದರಿಂದ ವಿದ್ಯುತ್ ಕೆಲಸಕ್ಕೆ ತೊಂದರೆಯಾಗಿದೆ ಎಂದು ಹೇಳುತ್ತೇನೆ. ೫೦ ಲಕ್ಷ ರೂಪಾಯಿ ಬೆಲೆ ಬಾಳುವಂತಹ ಟ್ರಾನ್ಸ್‌ಫಾರ್ಮರು ನಷ್ಟವಾಗಿದೆ ಎಂದು ತಜ್ಞರು ಹೇಳುತ್ತಾ ಇದ್ದಾರೆ. ಅಷ್ಟು ಅಲ್ಲದೇ ಇದ್ದರೂ ೨೦-೩೦ ಲಕ್ಷ ರೂಪಾಯಿ ಆಗಬಹುದು. ಇದು ಹೇಗೆ ಹಾಳಾಯಿತು ? ಯಾರು ಸರಿಯಾಗಿ ನಿಗಾ ವಹಿಸಿಲ್ಲ ಎಂಬುದನ್ನೂ ಕೂಡ ಸರ್ಕಾರದವರು ಜಾಗರೂಕತೆಯಿಂದ ನೋಡಬೇಕು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಾಗ ವಿದ್ಯುತ್ ನಿಂತು ಹೋಗತಕ್ಕ ಪರಿಸ್ಥಿತಿ ಇದೆ ಇದಕ್ಕೆ ಕಾರಣ ಟ್ರಾನ್ಸ್‌ಫಾರ್ಮರ್ ಹಾಳಾದ್ದರಿಂದ ಅಂತ ಹೇಳುತ್ತಾ ಇದ್ದೇವೆ. ಇದನ್ನೂ ಕೂಡ ಪರಿಶೀಲನೆ ಮಾಡಬೇಕೆಂದು ಹೇಳಲು ಅಪೇಕ್ಷಿಸುತ್ತೇನೆ.

ಹಾಲಾಡಿ ನೀರಾವರಿ ಯೋಜನೆ ಸಣ್ಣ ನೀರಾವರಿ ಯೋಜನೆಗಿಂತ ಸ್ವಲ್ಪ ದೊಡ್ಡದು, ಆದರೂ ಕೂಡ ಅದನ್ನು ಮಾಡಬೇಕೆಂದು ಸರ್ಕಾರದವರನ್ನು ಕೇಳುತ್ತಾ ಇದ್ದೇವೆ. ಇದರಿಂದ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆಗೂ ಕೂಡ ಉಪಕಾರವಾಗುತ್ತದೆ. ಹೆಚ್ಚು ಆಹಾರ ಬೆಳೆಯಲಿಕ್ಕೂ, ಪ್ರಗತಿ ಪಥದಲ್ಲಿ ತರಲಿಕ್ಕೂ ಸಹಕಾರಿಯಾಗುತ್ತದೆ. ಇದನ್ನು ಪರಿಪಾಲಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳಲು ಅಪೇಕ್ಷಿಪಡುತ್ತೇನೆ.

ಇನ್ನು ಒಂದನುಗಳ ವಿಚಾರ, ಬಹಳ ಪ್ರಾಮುಖ್ಯವಾದುದು. ನಮ್ಮ ಮೈಸೂರು ರಾಜ್ಯ ಎಂಬಂಥ ಒಂದು ಮುತ್ತಿನ ಮೂಲೆಯಲ್ಲಿ ೧೯ ಜಿಲ್ಲೆಗಳು ಇವೆ. ದಕ್ಷಿಣ ಕನ್ನಡ ಜಿಲ್ಲ. ಉತ್ತರ ಕನ್ನಡ ಜಿಲ್ಲೆ ಆ ಮೂಲೆಯಲ್ಲಿ ೫ ವರ್ಣದ ಮಣಿಗಳು ಎಂದು ಹೇಳಬಹುದು. ಮೂಲೆಯ ಮಧ್ಯೆದಲ್ಲಿ ಪಂಚವರ್ಣದಿಂದ ಕೂಡಿ ಬಹಳ ಸುಂದರವಾಗಿದೆ. ಏಕೆಂದರೆ ೨೦೦ ಮೈಲಿ ಕರಾವಳಿ ಪ್ರದೇಶ ಧರ್ಮಾರ್ಥವಾಗಿಯೂ, ಆರ್ಥಿಕವಾಗಿಯೂ ಇರುವಂತಹ ಈ ಒಂದು ಪ್ರದೇಶ ನಮ್ಮ ರಾಜ್ಯದಲ್ಲಿ ಇದೆ. ಇವತ್ತು ಒಂದು ರಾಜ್ಯ ಪ್ರಗತಿ ಪಥದಲ್ಲಿ ಮುಂದುವರಿಯಬೇಕಾದರೆ ಅಲ್ಲಿ ನೆಸರ್ಗಿಕ ದತ್ತವಾದ ಅನುಕೂಲತೆಗಳು ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಹೆಚ್ಚು ಮಾಡತಕ್ಕ ಅನುಕೂಲತೆಗಳು ಇರಬೇಕು ಎಂದು ತಜ್ಞರು ಹೇಳುತ್ತಾರೆ. ಅಂತಹ ಎರಡು ಅನುಕೂಲತೆಗಳೂ ಕೂಡ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮ್ಮಿಳನವಾಗಿ ಸಿಕ್ಕಿದೆ. ಇವತ್ತು ಪಣಂಬೂರಿನಲ್ಲಿ ಬಂದರು ಆಗತ್ತಾ ಇದೆ, ಎರಡನೆ ಹಂತದಲ್ಲಿ ಮಾಡುತ್ತಾ ಇರುವಾಗ ೩೦ ಫುಟ್ ಗಿಂತ ಜಾಸ್ತಿ ಆಳ ಇರಬೇಕೆಂದು ಹೇಳುತ್ತಾ ಇದ್ದಾರೆ ಕಾರಣ ಆಲ್ಲಿ ದೊಡ್ಡ ಹಡಗುಗಳು ಬರುವುದಕ್ಕೆ ಸಾಧ್ಯವಾಗಬೇಕು ಅಂತ ಹೇಳಿ. ಆ ಕೆಲಸ ಆಗುತ್ತಾ ಇವೆ ಅದೇ ರೀತಿ ಇಡೀ ಜಗತ್ತಿನಲ್ಲೇ ಸಿಕ್ಕಿದಿರುವಷ್ಟು ಪ್ರಮಾಣದಲ್ಲಿ ಅದುರು ಕುದುರೆ ಮುಖದಲ್ಲಿ ಸಿಕ್ಕುತ್ತದೆ. ಆ ಅದುರು ಬಹಳ ಶ್ರೇಷ್ಟ ವಾದುದು ರಾಜ್ಯಕ್ಕೆ ಬಹಳ ಹಣ ಬರುತ್ತದೆ ಅಂತಹ ಅದು ಇನ್ನೆಲ್ಲೂ ಇಲ್ಲ ಎಂದು ಹೇಳುತ್ತಾರೆ ಅದನ್ನು ಸಾಗಿಸುವುದಕ್ಕೆ ಪಣಂಬೂರು ಬಂದರು ಎರಡನೆ ಹಂತದ ಕೆಲಸ ಪ್ರಾರಂಭ ಮಾಡುವಾಗ ೩೫-೪೦ ಫೂಟು ಆಳ ಮಾಡಬೇಕೆಂಬ ವಿಚಾರವನ್ನು ಪರಿಶೀಲನೆ ಮಾಡಿ ಕೇಂದ್ರಸರ್ಕಾರಕ್ಕೆ ತಿಳಿಸುವಂತಹದು ಬಹಳ ಅಗತ್ಯ ವಾದ ವಿಷಯ ಎಂದು ಹೇಳಲು ಇಚ್ಛೆಪಡುತ್ತೇನೆ. ಇದೇ ರೀತಿ ಸಣ್ಣ ಸಣ್ಣ ಒಂದರುಗಳು ಇವೆ, ಅವುಗಳನ್ನೂ ಕೂಡ ಅಭಿವೃದ್ಧಿ ಮಾಡಬೇಕು. ಕೈ ಬಿಡಬಾರದು. ಮಂಗಳೂರು, ಕುಂದಾಪುರ, ಕಾರವಾರ, ಮಲ್ಪೆ ಇವುಗಳನ್ನೂ ಕೂಡ ಅಭಿವೃದ್ಧಿ ಮಾಡಬೇಕು ಕೈ ಬಿಡಬಾರದು ಏಕೆಂದರೆ ಈ ರಾಜ್ಯದ ಮುಂದಿನ ಏಳಿಗೆಗೆ, ಆರ್ಥಿಕ ಪ್ರಗತಿಗೆ ಸಹಕಾರಿಯಾದಂತಹ ಇವುಗಳ ಕಡೆಗೆ ಗಮನ ಕೊಟ್ಟು ಬೆಳವಣಿಗೆ ಮಾತಿದ್ದೇ ಆದರೆ ನಮ್ಮ ರಾಜ್ಯ ಪ್ರಗತಿ ಪಥದಲ್ಲಿ ಕಾಲಿಡಲು ಸಾಧ್ಯವಾಗುತ್ತದೆ ಎಂದು ಹೇಳಿ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಲ್ಲಿ ಹೇಳಲಿಚ್ಚಿಸುತ್ತೇನೆ.

ಇದೇ ಸಂದರ್ಭದಲ್ಲಿ ಮಂಗಳೂರಿನಿಂದ ಕಾರವಾರದವರೆಗೆ ಕಾಲುವೆ ತೋಡುವ ಕೆಲಸ ಮಾಡಬೇಕು, ಹಾಗೆ ಮಾಡುವುದು ವ್ಯಾಪಾರ ಮತ್ತು ಇತರ ದೃಷ್ಟಿಗಳಿಂದ ಒಳ್ಳೆಯದು ಎಂದು ಹೇಳುತ್ತೇನೆ. ಇದನ್ನು

ಗಮನಿಸಬೇಕು. ಇನ್ನು ಕಾರವಾರ ಬಂದರನ್ನು ಅಭಿವೃದ್ಧಿಪಡಿಸಬೇಕಾದ್ದು ಬಹಳ ಮುಖ್ಯವಾದುದು, ಹಾಗೆ ಮಾಡಿದರೆ ಹೊಸಪೇಟೆಯಿಂದ ಕಬ್ಬಿಣದ ಅದಿರನ್ನು ಸಾಗಿಸಲು ಅನುಕೂಲವಾಗುವುದು. ಈಗ ಇದರ ಕೆಲಸ ಮಂದಗತಿಯಲ್ಲಿ ಸಾಗುತ್ತಿದೆ, ವೇಗದಲ್ಲಿ ಈ ಕೆಲಸ ಮಾಡಿ ಬಳ್ಳಾರಿ ಮತ್ತು ಹೊಸಪೇಟೆಯಿಂದ ಅದಿರನ್ನು ಸಾಗಿಸಲು ಅನುಕೂಲ ಕಲ್ಪಿಸಬೇಕು. ಇದರ ಬಗ್ಗೆ ಇದುವರೆಗೆ ತೆಗೆದುಕೊಂಡಿರುವ ಕ್ರಮ ಸಾಲದು, ದೈವದತ್ತವಾಗಿ ದೊರೆಯುವ ಅದಿರನ್ನು ಜಾಗ್ರತೆ ಉಪಯೋಗಮಾಡಿಕೊಳ್ಳಲು ಕಂಕಣಬದ್ಧರಾಗಬೇಕು. ಕಾರವಾರ ಬಂದರು ೧೭ ಲಕ್ಷ ಟನ್ ಅದಿರನ್ನು ಸಾಗಿಸುವಷ್ಟು ಕೆಪ್ಯಾಸಿಟಿ ಹೊಂದಿದೆ, ಅದರಲ್ಲಿ ೪ ಲಕ್ಷ ಈಗ ಹೋಗಿದೆ. ಏಕೆ ಹೆಚ್ಚು ಸಾಗಿಸಿಲ್ಲ? ಬಹುಶಃ ಮೈಸೂರು ಮಿನರಲ್ ಕಾಪೆನಿಯವರು ಸರಿಯಾಗಿ ಸಹಾಯ ಮಾಡಿಲ್ಲವೆಂದು ಕೇಳುತ್ತೇನೆ. ಕಬ್ಬಿಣದ ಅದಿರನ್ನು ಜಾಗ್ರತೆ ಸಾಗಿಸಲು ಅನುಕೂಲವಾಗುವಂತೆ ಕಾರವಾರ ಬಂದರನ್ನು ಶೀಘ್ರವಾಗಿ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಮಲ್ಪೆಯು ಮಿಾನುಗಾರಿಕೆ ಬಂದರು, ಅಲ್ಲಿ ಮಿಾನು ಹೆಚ್ಚಾಗಿದೆ, ಅದನ್ನು ಹೆಚ್ಚಾಗಿ ಪಡೆಯಬೇಕು; ಅದಕ್ಕೆ ಈ ಬಂದರು ಮುಖ್ಯವಾದುದು. ಆದುದರಿಂದಲೇ ಮಲ್ಪೆಯನ್ನು ಮಿಾನುಗಾರಿಕೆ ಬಂದರಾಗಿ ಜಾಗ್ರತೆ ಮಾಡಬೇಕೆಂದು ಹೇಳುತ್ತಿದ್ದೇವೆ. ಅದರ ಕೆಲಸ ಇನ್ನೂ ಶೈಶವಾವಸ್ಥೆಯಲ್ಲೇ ಇದೆ. ಅದರ ಕಡೆ ಗಮನ ಕೊಟ್ಟು ಶೀಘ್ರವಾಗಿ ಕೆಲಸ ಮಾಡಬೇಕು.

ಸಣ್ಣ ಸಣ್ಣ ಬಂದರುಗಳ ಅಭಿವೃದ್ಧಿಯಾಗಬೇಕು. ಈಗ ದೊಡ್ಡ ದೊಡ್ಡ ನೌಕೆಗಳು ಸಮುದ್ರದಲ್ಲೇ ನಿಲ್ಲುವುವು, ಆದರಿಂದ ಸ್ಮಗ್ಲಿಂಗ್‌ಗೆ, ಕಾಳಸಂತೆಗೆ ಹೆಚ್ಚು ಅವಕಾಶವಾಗಿದೆ, ಸಂಕ ಬರಬೇಕಾದ್ದು ಸೋರಿ ಹೋಗುತ್ತಿದೆ ಎಂದು ಹೇಳಲಾಗುತ್ತಿದೆ ಮಂಗಳೂರು ಸಣ್ಣ ಬಂದರಿನಲ್ಲಿ ಹೆಚ್ಚು ನೌಕೆಗಳು ತಂಗುವುದು ಉಂಟು, ಬೇಕಾದಷ್ಟು ಸರಕು ಹೋಗುತ್ತಿದೆ. ಇದರ ಕಡೆ ಗಮನಕೊಡಬೇಕೆಂದು ವಿನಯಪೂರ್ವಕವಾಗಿ ಹೇಳುತ್ತೇನೆ. ಕಾರವಾರ, ಮಲ್ಪೆ ಬಂದರುಗಳ ಕೆಲಸವನ್ನು ಬರುವ ವರ್ಷದಲ್ಲೇ ಮುಗಿಸಿದರೆ ಆರ್ಥಿಕ ಪ್ರಗತಿಯಾಗುವುದು, ಹಾಗೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಪಬ್ಲಿಕ್‌ವರ್ಕ್ಸ್ ಇಲಾಖೆ ಕಡೆ ಬಂದರೆ ಇದು ಪ್ರಾಮುಖ್ಯವಾದ ಇಲಾಖೆ. ದಕ್ಷಿಣ ಕನ್ನಡ ಜಿಲ್ಲೆ ವಿಚಾರ ಹೇಳುವುದಾದರೆ ಶ್ರೀನಿವಾಸ ಮಲ್ಯರು ಪಾರ್ಲಿಮೆಂಟಿನ ಸದಸ್ಯರಾಗಿದ್ದಾಗ ಮಣಿ-ಉಳ್ಳಾಲ ರಸ್ತೆ ಕೆಲಸ ಅರ್ಧವಾಗಿತ್ತು, ಅದು ದೊಡ್ಡ ರಸ್ತೆ, ಅದಿರು ಸಾಗಿಸಲು ಅನುಕೂಲವಾಗಿರುವ ಮಾರ್ಗ, ಅದಕ್ಕೆ ಎರಡು ಮೂರು ಸೇತುವೆ ಆಗಬೇಕು ರಸ್ತೆ ಕೆಲಸ ಪೂರೈಸಿಲ್ಲ, ಹಾಗೆಯೇ ಇದೆ. ಅದಕ್ಕೆ ೪೦ ಲಕ್ಷ ಬೇಕಾಗ ಬಹುದು, ಮುಕ್ಕಾಲು ರಸ್ತೆ ಮಾಡಿ ಎಷ್ಟೋ ಲಕ್ಷ ಖರ್ಚು ಮಾಡಿದ್ದಾರೆ, ಅಲ್ಲಿಗೇ ನಿಂತಿದೆ. ಲಕ್ಕಪ್ಪನವರು ಮೊನ್ನೆ ಅಲ್ಲಿಗೆ ಬಂದಾಗ ಆ ರಸ್ತೆಯನ್ನು ತೋರಿಸಿದೆ, ಅದಕ್ಕೆ ೩೮ ಲಕ್ಷ ಕೊಡಿಸುವ ಪ್ರಯತ್ನಮಾಡಿ ಪೂರ್ಣ ಮಾಡುತ್ತೇವೆಂದು ಹೇಳಿದರು. ಅರ್ಧವಾಗಿರುವ ರಸ್ತೆಗಳ ದುರಸ್ತಿಯಿಲ್ಲ. ಅದಕ್ಕೆ ಒಂದು ಲಕ್ಷ ಕೊಟ್ಟು ದುರಸ್ತಿ ಮಾಡಿಸಬೇಕೆಂದು ಹೇಳಿದೆ ಮಾಡುವುದಾಗಿ ಹೇಳಿದ್ದಾರೆ. ಅದನ್ನು ಪೂರ್ಣಮಾಡಬೇಕು. ತೊಕ್ಕೊಟ್ಟು ಓವರ್ ಬ್ರಿಡ್ಜ್‌ಗೆ ಸರಿಯಾದ ದುರಸ್ತಿ ಮಾಡಿಲ್ಲ, ಅದರ ಕಡೆ ಎಗ್ಸಿಕ್ಯುಟಿವ್ ಎಂಜಿನಿಯರು ಅಥವ ಸೂಪರಿಂಟೆಂಡಿಂಗ್ ಎಂಜಿನಿಯರು ಗಮನ ಕೊಟ್ಟು ಅವಸರವಾಗಿ ಅದರ ಕೆಲಸಮಾಡಬೇಕು.

ಕಟ್ಟಡಗಳ ಕೆಲಸವನ್ನು ಕಡಿಮೆ ಮಾಡಿಯಾದರೂ ಸಣ್ಣ ಸಣ್ಣ ರಸ್ತೆ ಮತ್ತು ಸೇತುವೆ ಕೆಲಸಗಳನ್ನು ಕೈಕೊಳ್ಳಬೇಕು, ಆ ಕೆಲಸ ಮಾಡುವುದಿಲ್ಲವೆಂದು ಹೇಳುವುದು ಸರಿಯಲ್ಲ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದು ಮುಖ್ಯವಾದುದು ಅಲ್ಲಿಗೆ ದೊಡ್ಡ ನೀರಾವರಿ ಕೆಲಸ ಬೇಡ, ಹಳ್ಳಿಗಳಲ್ಲಿ ಬೆಳೆದ ಆಹಾರ ಪದಾರ್ಥ ಮುಂತಾದ್ದನ್ನು ಪೇಟೆಗೆ ತರುವುದಕ್ಕೆ ಅವಕಾಶವಿಲ್ಲ. ಆದುದರಿಂದ ಅದಕ್ಕೆ ಹೆಚ್ಚು ಗಮನ ಕೊಡಬೇಕು. ಸೇತುವೆ ಕಟ್ಟುವಾಗ ಸಣ್ಣ ಸಣ್ಣ ಜೊಪ್ಪು ಕಲ್ಲುಗಳನ್ನು ಉಪಯೋಗಮಾಡಿದರೆ ಅನುಕೂಲವಾಗುವುದು. ದೊಡ್ಡ ದೊಡ್ಡ ಕೆಲಸ ಮಾಡುವಾಗ ಸಣ್ಣ ಕೆಲಸಗಳ ಕೈಬಿಡಬಾರದು. ಅವು ದೇಶಾಭ್ಯುದಯಕ್ಕೆ ಅನುಕೂಲ.

ಅರಕಲಗೂಡು ಸದಸ್ಯರು ದ್ರೌಪದಿ ಇಲಾಖೆ ಎಂದು ಹೇಳಿದರು. ಆಕೆ ಪತಿವ್ರತೆ, ಕೌರವರ ಆಸ್ಥಾನದಲ್ಲಿ ಆಕೆಯ ಸೀರೆಯನ್ನು ಸೆಳೆಯುವಾಗ ಶ್ರೀಕೃಷ್ಣನ ಕೃಪೆಯಿಂದ ಅದು ಅಕ್ಷಯವಾಯ್ತು ಆದುದರಿಂದ ದ್ರೌಪದಿ ಇಲಾಖೆ ಎಂದರೆ ಒಳ್ಳೆಯ ಇಲಾಖೆ ಎಂದು ಭಾವಿಸಿ ಹೇಳಿದರೆಂದು ನಂಬುತ್ತೇನೆ. ದ್ರೌಪದಿಯು ಪತಿಭಕ್ತಿಯುಳ್ಳ ಸಾಧ್ವಿಯಾದ್ದರಿಂದ ಇಲಾಖೆ ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿದೆ ಎಂದು ಹೇಳಿರಬೇಕು. ನಮ್ಮ ಜಿಲ್ಲೆ ವಿಚಾರದಲ್ಲಿ ಹೇಳಿರುವುದನ್ನು ಮಂತ್ರಿಗಳು ಟಿಪ್ಪಣಿ ಮಾಡಿಕೊಂಡು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿ ಎರಡು ಮೂರು ನಿಮಿಷ ಹೆಚ್ಚಾಗಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಗುಂಡ್ಲು ಪೇಟೆ): _ ಮಾನ್ಯ ಅಧ್ಯಕ್ಷರೇ, ನನ್ನ ದುರದೃಷ್ಟವೋ ಏನೋ ನಮ್ಮ ಮುಖ್ಯಮಂತ್ರಿಗಳು ಇವತ್ತೂ ಇಲ್ಲ. ಜನರಲ್ ಅಡ್ಮಿನಿಸ್ಟ್ರೇಷನ್ನಿನ ಮೇಲೆ ಮಾತನಾಡಿದ ದಿವಸವೂ ಅವರು ಹಾಜರಿರಲಿಲ್ಲ, ಅಲ್ಲದೆ ಅಂದು ಮಾಡಿದ ಟೀಕೆಗೆ ಉತ್ತರ ಕೂಡ ಬರಲಿಲ್ಲ, ಬಹುಶಃ ಕಾಲಾವಕಾಶವಿರಲಿಲ್ಲ ಎಂದು ಹೇಳಬಹುದು. ದ್ರೌಪದಿ ಪತಿವ್ರತೆ ಎಂದು ಇದಿಸಬ್ಬರವರು ಹೇಳಿದರು. ಆದರೆ ಆಕೆಯ ಗಂಡಂದಿರ ವಿಚಾರ ಹೇಳಲಿಲ್ಲ, ಅವರಲ್ಲಿ ನೂರು ಗಜಗಳ ಬಲವುಳ್ಳವರಿದ್ದರು. ಧರ್ಮನಿರತ ನಾದ ಧರ್ಮರಾಯನಿದ್ದ. ಸಮಾಧಾನಶೀಲರಾದ ನಕುಲ ಸಹದೇವರು ಇದ್ದರು. ಸನ್ಯಾಸಿಯಾಗಿದ್ದ, ಬೃಹನ್ನಳೆಯಾಗಿದ್ದ ಅರ್ಜುನ ಇದ್ದ. ಇಂಥ ೫ ಜನ ಇದ್ದ ಇಲಾಖೆ ಅದು. ಆ ೫ ಜನ ವೀರರು ದ್ರೌಪದಿ ಮಾನಭಂಗವಾಗುವಾಗ ಏನು ಮಾಡುತ್ತಿದ್ದರೆನ್ನುವುದನ್ನು ಏಕೆ ಮರೆತರೋ ಜ್ಞಾಪಕ ಮಾಡಿಕೊಳ್ಳಲಿ.

ಸಿದ್ದವೀರಪ್ಪನವರು. ನಮ್ಮ ನಾಯಕರು ವಿದ್ಯುಚ್ಛಕ್ತಿ ಇಲಾಖೆ ವಿಚಾರವೆಲ್ಲಾ ಹೇಳಿದ್ದಾರೆ, ಅಲ್ಲಿರುವ ಲೋಪದೋಷಗಳನ್ನು ಸೂಚಿಸಿದ್ದಾರೆ. ನಾನು ಜನಸಾಮಾನ್ಯರಿಗೆ, ಹಳ್ಳಿಯವರಿಗೆ ಆಗುತ್ತಿರುವ ಕಷ್ಟ ಹೇಳಬೇಕೆಂದು ಆಸೆಪಟ್ಟಿದ್ದೇನೆ. ಇದು ದೊಡ್ಡ ಇಲಾಖೆ, ನಾನು ಈ ಇಲಾಖೆಯಲ್ಲಿ ಮುಖ್ಯಸ್ಥರಾಗಿದ್ದವರ ಮಗಳು. ಹಿಂದೆ ಹೇಗೆ ನಡೆಯುತ್ತಿತ್ತು, ಈಗ ಹೇಗೆ ನಡೆಯುತ್ತಿದೆ ಎಂದು ನೋಡಿದರೆ ಸಂಕಟವಾಗುವುದು. ಒಂದು ಬಿಲ್ಲೂ ಸರಿಯಾಗಿ ಬರುವುದಿಲ್ಲ, ಹಳ್ಳಿಯವರು ಪಂಪು ಸೆಟ್ಟಿನ ಕಂತು ಕಟ್ಟಿದ್ದರೂ ಕೂಡ ತಾಸಿಲ್ದಾರರು ಪೀನಲ್ ಇಂಟರೆಸ್ಟ್ ಸೇರಿಸಿ ಆಸ್ತಿ ಹರಾಜು ಹಾಕುತ್ತಿದ್ದಾರೆ. ಏನು ಇಲಾಖೆಯಲ್ಲಿರುವವರು ಕಳ್ಳಿಪುರಿ ತಿನ್ನುತ್ತಿದ್ದಾರೆಯೆ? ಅವರಿಗೆ ಉದಾಸೀನವೋ ಅಥವ ಕೆಲಸಮಾಡಲು ಮನಸ್ಸಿಲ್ಲವೋ ಎಂದು ಪ್ರಶ್ನೆ ಮಾಡಬೇಕಾಗಿದೆ. ಬೆಂಗಳೂರಿನಲ್ಲಿ ಬೆಳಗಾದರೆ ಕರೆಂಟಿಲ್ಲ ಎಂಬ ದೂರು ಕೇಳಿಬರುತ್ತಿದೆ, ಇಲ್ಲಿ ಸಾಮಾನ್ಯವಾಗಿ ಅನೇಕ ಮನೆಗಳು ಆಲ್ ಎಲೆಕ್ಟ್ರಿಕ್ ಹೋಮ್ಸ್ ಆಗಿವೆ, ಸಾದೆ ಸಿಕ್ಕುವುದಿಲ್ಲ, ಸೀಮೆ ಎಣ್ಣೆ ಬೆಲೆ ಜಾಸ್ತಿಯಾಗಿದೆ. ಕಾಫಿ ಮಾಡಲು ಒಲೆಯಮೇಲೆ ನೀರಿಡಲು ಕರೆಂಟೇ ಇರುವುದಿಲ್ಲ. ವೋಲ್ಟೇಜ್ ಡ್ರಾಪ್ ಆಗುವುದು, ಫ್ಯೂಜ್ ಪಗೈರೆ ಬರ್ನ್ ಆಗುವುದು ಯಾವಾಗಲೂ ಇದ್ದೇ ಇರುತ್ತದೆ. ಹೀಗಾಗಿ ಈ ಇಲಾಖೆ ಬಹುಶಃ ಎಲೆಕ್ಟ್ರಿಸಿಟಿ ಬೋರ್ಡ್ ಆದಮೇಲೆ ಹೊಲಸಾಗಿದೆ, ಹೇಳುವವರು ಕೇಳುವವರು ಯಾರೂ ಇದ್ದಂತಿಲ್ಲ. ಈ ಬೋರ್ಡನ್ನು ಮೊದಲು ನಿಕಾಲ್ ಮಾಡಿ ವಾಪಸು ಸರಕಾರ ತೆಗೆದುಕೊಂಡರೆ ಜನರಿಗೆ ಒಳ್ಳೆಯದಾಗುವುದು.

ಇನ್ನು ಪಿ. ಡಬ್ಲ್ಯೂ ಡಿ ರಸ್ತೆ ವಿಚಾರ. ನನ್ನ ಗುಂಡ್ಲುಪೇಟೆ ತಾಲ್ಲೂಕು ಬಡ ತಾಲ್ಲೂಕು, ಆ ತಾಲ್ಲೂಕಿನ ರೋಡುಗಳ ಆನ್ಯುಯಲ್ ರಿಪೇರಿ ಕೂಡ ಮಾಡುವುದಿಲ್ಲ ಇದಕ್ಕಾಗಿ ಕೊಡುವ ಹಣ ಉಳಿದರೆ ವರ್ಷಕ್ಕೊಂದು ಸಲ ಸೂಪರಿಂಟೆಂಡಿಂಗ್ ಎಂಜಿನಿಯರುಗಳೆಲ್ಲಾ ಸೇರಿ ರೀ ಅಪ್ರೋಪ್ರಿಯೇಟ್ ಮಾಡುವರು ಎಂದು ಈ ದಿನ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಉಪಮಂತ್ರಿಗಳು ಹೇಳಿದರು. ಅದು ಎಲ್ಲಿಗೆ ಹೋಗುವುದೋ ಏನೋ, ಹಣ ಒದಗಿಸಿದರೂ ಬೇಕಿಲ್ಲದ ಕಡೆ ಮನಸ್ಸಿಲ್ಲದ ಕಡೆ ಕೆಲಸಮಾಡದೆ ನಿಲ್ಲಿಸಿ ಕೊನೆಯಲ್ಲಿ ಎಲ್ಲಿಗೆ ಬೇಕೋ ಅಲ್ಲಿಗೆ ತೆಗೆದುಕೊಂಡು ಹೋಗುವರು. ಮಂತ್ರಿಮಂಡಲ ನಿಲ್ಲುವುದಕ್ಕೆ ಯಾರು ಓಟು ಕೊಟ್ಟಿರುವರೋ ಅವರಿಗೆ ಅನುಕೂಲವಾಗುವಂತೆ ಕಾಂಗ್ರೆಸ್ಸಿನವರು ಇರುವ ಕಡೆಗೆ ಹಣವನ್ನು ಕೊಡುವರು, ಅಲ್ಲಿ ಬೇಕಾದಂತಹ ಕೆಲಸಗಳನ್ನು ಮಾಡಿ ಕೊಡುವರು. ಅಂಥದ್ದರಲ್ಲಿ ನಮ್ಮ ಕಡೆ ರಸ್ತೆಗಳನ್ನು ತೆಗೆದುಕೊಂಡರೆ, ಹೊಸ ರಸ್ತೆಗಳನ್ನು ಮಾಡುವುದಿರಲಿ, ಪ್ರತಿವರ್ಷ ಮಾಡಬೇಕಾದ ರಿಪೇರಿ ಕೆಲಸವನ್ನೂ ಮಾಡುವುದಿಲ್ಲ. ಇಷ್ಟು ಮೈಲಿ ರಸ್ತೆಯನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸೇರಿಸಿಕೊಂಡಿದ್ದೇವೆ ಎಂದು ಗೆಜೆಟ್ಟಿನಲ್ಲಿ ಬರುವುದನ್ನು ನೋಡಿ ಸಂತೋಷ ಪಡಬೇಕು. ಒಂದು ರಸ್ತೆಗೆ ಕಲ್ಲು ಹಾಕಿಲ್ಲ, ಚೂರು ಮಣ್ಣು ಹಾಕಿಲ್ಲ, ಟಾರ್ ಅಂತೂ ಸ್ವಪ್ನಾವಸ್ಥೆ. ಈ ರೀತಿ ನಮ್ಮ ರಸ್ತೆಗಳ ಗತಿಯಾಗಿದೆ.

ಸರಿಯಾದ ಅಧಿಕಾರಿಗಳನ್ನು ಹಾಕಿ ಎಂದರೆ ಅದಕ್ಕೂ ಗಮನ ಕೊಡುವುದಿಲ್ಲ. ಮಂಡ್ಯದಲ್ಲಿ ಚಿಕ್ಕಣ್ಣ ಎಂಬುವವರಿಗೆ ವರ್ಗವಾಗುತ್ತದಂತೆ, ಅವರನ್ನು ಚಾಮರಾಜನಗರಕ್ಕೆ ಕೊಡಿ ಎಂದರೆ ಶಂಕರ ಗೌಡರು ಜಗಳಕ್ಕೆ ಬರುತ್ತಾರೆಂದು ಹೇಳುತ್ತಾರೆ. ಕೋಲಾರದಿಂದ ಇನ್ನೊಬ್ಬರನ್ನು ನಮ್ಮ ಊರಿಗೆ ಹಾಕಬೇಕು ಎಂದು ಕೇಳಿದರೆ ಅವರನ್ನು ಬಿಳಿ ಕುದುರೆಯಂತೆ ಎಂದು ಹೇಳುತ್ತಾರೆ ಯಾರಾದರೂ ಒಳ್ಳೆಯವರನ್ನು ಹಾಕಿ ಎಂದರೆ ಒಳ್ಳೆಯವರು ಎಂದು ಯಾರನ್ನು ಹಾಕ್ಕುತ್ತಾರೆ ಎಂದರೆ ಇವರು ಹೇಳಿದಂತೆ ಡ್ಯಾನ್ಸ್ ಮಾಡಿ, ಹಣ ಮಿಗಿಸಬೇಕು, ರೀ-ಅಪ್ರೋಪ್ರಿಯೇಷನ್ ಮಾಡಬೇಕು ಅಂಥ ಇಂಜಿನಿಯರುಗಳನ್ನು ಹಾಕುತ್ತಾರೆ. ಇವರಿಗೆ ಬೇಕಾದ ಅಸಿಸ್ಟೆಂಟ್ ಇಂಜಿನಿಯರನ್ನು ಹಾಕುವುದು, ಇವರಿಗೆ ಬೇಕಾದ ಕೆಲಸ ಯಾರು ಮಾಡುತ್ತಾರೆ ಅಂಥವರನ್ನು ಹಾಕುತ್ತಾರೆ. ಮೈಸೂರಿನಲ್ಲಿ ೧೦—೧೨ ವರ್ಷ—ದಿಂದ ಕೆಲವರು ಅಧಿಕಾರಿಗಳಿದ್ದಾರೆ, ಅವರನ್ನು ವರ್ಗ ಮಾಡುವುದಕ್ಕೆ ಆಗುತ್ತದೆಯೆ ಎಂದು ಚೀಫ್

ಇಂಜಿನಿಯರನ್ನು ಕೇಳಿದಾಗ ಮಾಡುತ್ತೇನೆ ಎಂದು ಹೇಳಿದರು. ಆದರೆ ಅವರು ಏನೂ ಮಾಡುವುದಕ್ಕೆ ಆಗಲಿಲ್ಲ. ಆಲ್ಲಿ ಇರುವವರನ್ನು ವರ್ಗ ಮಾಡುವ ವಿಷಯ ತೆಗೆದುಕೊಂಡಾಗ ಆವರಿಗೆ ನಡುಕ ಬಂತು. ಯಾರೋ ಆರ್ಡರ್ ಮಾಡಬೇಕು, ಯಾರೋ ಕೇಳಬೇಕು.

ಶ್ರೀ ಕೆ. ಲಕ್ಕಪ್ಪ :—ಎಂಟು ಹತ್ತು ವರ್ಷದಿಂದ ಯಾರಿದ್ದಾರೆ ಎಂದು ಹೇಳುತ್ತೀರಾ ?

ಶ್ರೀ ಮತಿ ಕೆ. ಎಸ್. ನಾಗರತ್ನಮ್ಮ :— ನಾನು ಏಕೆ ಹೇಳಬೇಕು ? ನಿಮ್ಮ ಅಧಿಕಾರಿಗಳು ಏನು ಕೆಲಸ ಮಾಡುತ್ತಾರೆ ? ನನಗೆ ಸಂಬಳ ಕೊಡುತ್ತೀರಾ ? ರಿಜಿಸ್ಟರನ್ನು ತೆಗೆಸಿ ನೋಡಿ ನೀವಿದ್ದೀರಿ, ನಿಮ್ಮ ಅಧಿಕಾರಿಗಳಿದ್ದಾರೆ ನಿಮ್ಮ ಪ್ಯಾರಫರ್‌ನೇಲಿಯೊ ಇದೆ. ನಾನು ಇರುವ ವಿಷಯವನ್ನು ಹೇಳುವುದಕ್ಕೆ ನಿಂತಿದ್ದೇನೆ. ನಿಮಗೆ ಗೊತ್ತಾಗದೆ ಹೋದರೆ ಆ ಹೊತ್ತಿನ ದಿವಸ ಹೇಳುತ್ತೇನೆ.

ಅಧ್ಯಕ್ಷರೇ, ಮೈಸೂರಿನಲ್ಲಿ ೮—೧೦ ವರ್ಷದಿಂದ ಇರುವವರ ಹೆಸರುಗಳನ್ನು ಬರೆದು ಕೊಡುತ್ತೇನೆ. ಅವರಿಗೆ ಗೊತ್ತಾಗಲಿಲ್ಲವೆಂದು ಹೇಳಿದ ದಿನ ನೀವು ಅದನ್ನು ಅವರಿಗೆ ಕೊಡಿ.

ಯಾರಾದರೂ ಹಳೇ ಮೈಸೂರಿನವರು, ಬೆಂಗಳೂರಿನವರು, ಮೈಸೂರಿನವರು, ಚಿತ್ರದುರ್ಗದವರು ಇವರನ್ನೆಲ್ಲ ಧಾರವಾಡ, ಬೆಳಗಾಂ ಅಂಥ ಕಡೆಗೆ ಹಾಕುತ್ತಾರೆ ೮—೧೦ ವರ್ಷದಿಂದ ಆ ಕಡೆಯೇ ಇದ್ದರೂ ಅವರಿಗೆ ಈ ಕಡೆಗೆ ವರ್ಗ ಮಾಡವುದಿಲ್ಲ. ಅವರಿಗೆ ಗತಿ ಇಲ್ಲ, ಹೇಳುವವರಿಲ್ಲ, ಕೇಳುವವರಿಲ್ಲ. ಆದರೆ ಇಲ್ಲಿಗೆ ಆ ಕಡೆಯಿಂದ ಬಂದವರು ಪುನಃ ಆ ಕಡೆಗೆ ಹೋಗುವುದೇ ಇಲ್ಲ. ಇಲ್ಲಿ ಅವರಿಗೆ ಅನುಕೂಲವಾಗಿದೆ, ಚೀಪ್ ಲಿವಿಂಗ್ ಇಲ್ಲಿದೆ. ಈ ರೀತಿ ಅಧಿಕಾರಿಗಳ ಪಾಡಾಗಿದೆ.

ಇನ್ನು ಸಣ್ಣ ನೀರಾವರಿ ವಿಷಯಕ್ಕೆ ಬರುತ್ತೇನೆ. ಚೀಫ್ ಇಂಜಿನಿಯರಾಗಿದ್ದ ಶ್ರೀ ಬಸಣ್ಣನವರು ನಮ್ಮ ಕಡೆ ಎರಡು ಮೂರು ಕೆಲಸ ಮಾಡಿಸಿಕೊಟ್ಟರು. ಕಲ್ಕಟ್ಟಿ ಹಳ್ಳಿ, ಅಕ್ಕಲಪುರ ಕೆರೆಗಳನ್ನು ವೀರಣ್ಣ ಗೌಡರ ಕಾಲದಲ್ಲಿ ಮಾಡಿಸಿಕೊಟ್ಟರು. ಆಲ್ಲಿನ ಜನ ಅವರಿಬ್ಬರ ಹೆಸರು ಹೇಳಿಕೊಂಡು ಅನ್ನ ತಿನ್ನುತ್ತಿದ್ದಾರೆ.

ಮಗಹಳ್ಳಿ ಕೆರೆ, ಬೊಮ್ಮಲಾಪುರದಕ ಕೆರೆ, ದೇವನ ಹಳ್ಳಿ ಕೆರೆ, ಮುಂತಾದ ಕೆಲವು ಕೆರೆಗಳ ಕೆಲಸಗಳೂ ಆಗಿವೆ. ಈ ಕೆರೆಗಳನ್ನು ಶ್ರೀ ಚನ್ನಬಸಪ್ಪವರು ಮಾಡಿಸಿಕೊಟ್ಟರು. ಆದರಲ್ಲಿ ಒಂದು ಹನಿ ನೀರೂ ನಿಲ್ಲುವುದಿಲ್ಲ. ಯಾವ ಕಂಟ್ರಾಕ್ಟರಿಗೆ ಆಗಬೇಕಾಗಿತ್ತೋ ಏನ್ನೊ ಅದನ್ನು ಮಾಡಿ ಕೊಟ್ಟರು.

ಸೋಮನಪುರದ ಕೆರೆ ವಿಚಾರ ಶ್ರೀ ದೊಡ್ಡಮೇಟಿಯವರಿಗೆ ಹೇಳಿದೆ. ಬಸಣ್ಣನವರ ಕಾಲದಲ್ಲಿ ಇನೆವೆಸ್ಟಿಗೇಷನ್ ಆಯಿತು, ರೈತರು ಮುಚ್ಚಳಿಕೆಯನ್ನೂ ಬರೆದು ಕೊಟ್ಟರು. ಆ ಕೆರೆಯ ಕೆಲಸವನ್ನು ತೆಗೆದುಕೊಳ್ಳಲಿಲ್ಲ. ಒಗರುಕಟ್ಟೆ ಕೆರೆ ಸ್ವಲ್ಪ ಉಟಾವಣೆ, ಬಡಾವಣೆ ಕೆಲಸವನ್ನು ಮಾಡಿಕೊಡಿ ಎಂದರೆ ಅದನ್ನೂ ತೆಗೆದುಕೊಳ್ಳಲಿಲ್ಲ. ದೇವಲಾಪುರದ ಕೆರೆ ಇದೆ, ಅದಕ್ಕೆ ಟೆಂಡರುಗಳನ್ನು ಕರೆದರು. ಮಂಜೂರಾಗಲಿಲ್ಲ. ಕೊನೆಗೆ ಯಾರೋ ದೊಡ್ಡ ಮನುಷ್ಯರು ಕಂಟ್ರಾಕ್ಟರನ್ನು ಇವರ ಹತ್ತಿರ ಕರೆ ತಂದು ಮಾತನಾಡಿದ ಮೇಲೆ, ಮೊನ್ನೆ ಮಂಜೂರಾಯಿತು. ಸೇರಿಸಿದ್ದೇವೆಂದು ಹೇಳುತ್ತಾರೆ. ಎಷ್ಟು ನಿಜವೋ ಗೊತ್ತಿಲ್ಲ. ಮುಡಿಗೂರು ಕೆರೆ ಕೆಲಸ ಇಷ್ಟರೊಳಗೆ ಮುಗಿಯಬೇಕಾಗಿತ್ತು. ಟೆಂಡರ್‌ನಲ್ಲಿ ಹ್ಯಾಂಡ್ ರೋಲರ್‌ನಲ್ಲಿ ಕೆಲಸ ಮಾಡಬೇಕು ಎಂದು ಇದ್ದರೂ ಪವರ್ ರೋಲರ್‌ನಲ್ಲಿ ಮಾಡಬೇಕು ಎಂದು ಹೇಳಿದರು. ಇಬ್ಬರಿಗೂ ಜಗಳವಾಗಿ ಆ ಕಂಟ್ರಾಕ್ಟರನ್ನು ಓಡಿಸಿದರು. ಕೆರೆ ಕೆಲಸ ನಿಂತುಹೋಯಿತು.

ಆ ಮೇಲೆ ನಮ್ಮ ನಳೂರುಅಮಾನಿ ಕೆರೆ ವಿಚಾರವನ್ನು ಹೇಳುತ್ತೇನೆ. ಶ್ರೀಮಾನ್ ಚನ್ನಬಸಪ್ಪ ನವರು ಅದನ್ನೆಲ್ಲ ನೊಡಿದ್ದವರು ಆವಾಗ ಕೆಲಸ ನಡೆಯಲಿಲ್ಲ. ಶ್ರೀಮಾನ್ ವೀರಣ್ಣ ಗೌಡರ ಕಾಲದಲ್ಲಿ ಶ್ರೀ ಬಸವಣ್ಣನವರು ಚೀಫ್ ಇಂಜಿನಿಯರ್ ಆಗಿದ್ದಕಾಲದಲ್ಲಿ, ಸದ್ಯಕ್ಕೆ ಷಿಕಪ್ ಮಾಡೋಣ, ಆಮೇಲೆ ನೋಡೋಣ ಎಂದು ಅದಕ್ಕೆ ಒಂದು ಅಣೆ ಹಾಕಲು ಮಂಜೂರು ಮಾಡಿದರು. ೪ ಲಕ್ಷ ೧೫ ಸಾವಿರ ರೂಪಾಯಿ ಖರ್ಚಾಗುತ್ತದೆಂದೂ ಅಂದಾಜು ಮಾಡಿದ್ದರು. ಎರಡು ಲಕ್ಷ ರೂಪಾಯಿ ಖರ್ಚಾಗಿ ಅರ್ಧರ್ಧ ಕೆಲಸವಾಗಿದೆ. ಇದರಿಂದ ೫ ಎಕರೆ ೩೭ ಗುಂಟೆ ಜಮೀನು ಮಾತ್ರ ಮುಳುಗಡೆಯಾಗುತ್ತದೆ. ಎರಡು ಲಕ್ಷ ರೂಪಾಯಿ ಕೆಲಸವಾಗಿತ್ತು. ನಮ್ಮ ಅದೃಷ್ಟವೋ ದುರಾದೃಷ್ಟವೋ ಶ್ರೀ ಬಾಣಕುದ್ರಿ ಯವರು ಚೀಫ್ ಇಂಜಿನಿಯಾರಾಗಿ ಬಂದು ಇಷ್ಟು ಪೊಟೆನ್‌ಷಿಯಲ್ ಇರುವ ಕೆರೆ, ಗುಂಡ್ಲು ಪೇಟೆ ತಾಲ್ಲೂಕು ಹಾಳು ಸುರಿಯುತ್ತಿದೆ, ಜನಗಳು ತಿನ್ನುತ್ತಾರೆ ಹುಲ್ಲು ತಿನ್ನುತ್ತಿಲ್ಲ, ಮಣ್ಣು ತಿನ್ನುತ್ತಿದ್ದಾರೆ ಇಂಥ ಕಡೆಯಲ್ಲಿ ಇಂಥ, ನೀರಿನ ಒರತೆ ಇರುವಾಗ ಸುಮ್ಮನೆ ನೋಡಿಕೊಂಡು ಇರುವುದರಿಂದ ಪ್ರಯೋಜನವಿಲ್ಲ, ಏನಾದರೂ ಮಾಡಬೇಕೆಂದು, ಒಂದು, ಒಂದೂವರೆ ವರ್ಷ ಕಷ್ಟಪಟ್ಟು ೭ಳ ಲಕ್ಷ ರೂಪಾಯಿ ಅಂದಾಜು ವೆಚ್ಚದಲ್ಲಿ ೫–೦೨೦ ಎಕರೆ ಅಚ್ಚು ಕಟ್ಟಾಗುತ್ತದೆ, ಬಲದಂಡೆಯಲ್ಲಿ ೨೯೦ ಎಕರೆ ಮತ್ತು

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಎಡದಂಡೆಯಲ್ಲಿ ೨೦೪೦ ಎಕರೆ ಆಚ್ಚುಕಟ್ಟಾಗುತ್ತದೆ ಎಂದು ಪ್ರಾಜೆಕ್ಟ್ ತಯಾರು ಮಾಡಿದರು. ಇದರಿಂದ ಗುಂಡ್ಲು ಪೇಟೆ ಜನರ ಆರ್ಥಿಕ ಸ್ಥಿತಿ ಒಹಳಮಟ್ಟಿಗೆ ಉತ್ತಮವಾಗುತ್ತಿತ್ತು. ಆದರೆ ಆ ಕೆಲಸವನ್ನು ತೆಗೆದುಕೊಳ್ಳಲಿಲ್ಲ. ಅದನ್ನು ಬಿಟ್ಟು ಬಿಟ್ಟರು. ಈಗ ಲಿಫ್ಟ್ ಇರಿಗೇಷ್ ಮಾಡುತ್ತಾರಂತೆ ! ಇದೆಲ್ಲ ಬಿಟ್ಟು ಮಂಗಳ ಪ್ರಾಜೆಕ್ಟ್ ತೆಗೆದು ಕೊಂಡರು. ಅದರ ಅಂದಾಜು ವೆಚ್ಚ ೧೪. ಲಕ್ಷ ೯೦ ಸಾವಿರ ರೂಪಾಯಿ, ಆಚ್ಚುಕಟ್ಟು ೧೮೮೦ ಎಕರೆ ಸೆಮಿ ಡ್ರೈ. ಮುಳುಗಡೆಯಾಗುವ ಜಮೀನು ೮೦೦ ಎಕರೆ ೩೪ ಗುಂಟೆ, ಅದೂ ಬಂಡೀಪುರದ ಅರಣ್ಯ ಪ್ರದೇಶ. ಅರಣ್ಯ ಖಾತೆಯ ಮಂತ್ರಿಗಳನ್ನು ಕೇಳಿದರೆ ಯಾವುದು ಅದು ? ಫಾರೆಸ್ಟ್ ಏರಿಯಾನೇ ? ಅದು ನಮ್ಮದೇ ಎಂದು ಕೇಳುತ್ತಾರೆ. ಬಂಡಿಪುರ ಪ್ರದೇಶ ಫಾರೆಸ್ಟ್ ಏರಿಯಾ ಎನ್ನುವುದೂ ಗೊತ್ತಿಲ್ಲವೆಂದು ಕಾಣುತ್ತದೆ. ನಮ್ಮ ಇಂಡಿಯಾ ದೇಶದಲ್ಲಿ ಬಂಡೀಪುರ ಒಳ್ಳೆಯ ಗೇಮ್ ಸಾಂಕ್ಚುಯರಿ ಬೆಸ್ಟ್ ಸಾಂಕ್ಚುಯರಿ ಎಂದು ಒಂದುಕಡೆ ಹೇಳುತ್ತಾರೆ, ಅದು ನ್ಯಾಷನಲ್ ಪಾರ್ಕ್ ಆಗುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರ್ಸು ಹೋಗಿದೆ. ಗೇಮ್ ಸಾಂಕ್ಚುಯರಿಗೆ ತೊಂದರೆ ಮಾಡಬಾರದು ಎಂದು ಇನ್ನೊಂದು ಕಡೆ ಹೇಳುತ್ತಾರೆ. ಗೇಮ್ ಸಾಂಕ್ಚುಯರಿ ಒಳಗೇ ಈ ಕೆರೆ ಬರುತ್ತದೆ. ಅಲ್ಲಿ ಬೆಳೆಯುವ ಬೆಳೆಯನ್ನು ಕಾಟಿ, ಕಡಿವೆ, ಜಿಂಕೆ, ಆನೆ ಮುಂತಾದುವು ಮೂಸಿ ಕೂಡ ನೋಡದೆ ಸುಮ್ಮನೆ ಇರುತ್ತವೆಯೇ ? ಇವರು ಹೇಳುವಂಥ ಗ್ರೀನ್ ರೆವಲ್ಯೂಷನ್ನಿಗೆ ಇದು ನಾಂದಿಯೆ ! ಪ್ರಾಜೆಕ್ಟ್‌ಗಳನ್ನು ಮಾಡಿದರೆ ಊಟಕ್ಕೆ ಬೇಕಾದ ದವಸ ಸಿಕ್ಕುತ್ತದೆ ಎಂದು ಮಾನ್ಯ ಇದಿನಬ್ಬರವರು ಇದೀಗ ಹೇಳಿದರು. ಆನೆ ಮುಂತಾದ ವನ್ಯ ಮೃಗಗಳೆಲ್ಲ ಇಟ್ಟಿರುವ ಬೆಳೆಯನ್ನು ನೋಡಿಕೊಂಡು ಸುಮ್ಮನೆ ದೂರವಾಗಿ ಇರುತ್ತವೆ. ಗ್ರೀನ್ ರೆವಲ್ಯೂಷನ್ ಎಂದು ಸುಮ್ಮನೆ ಇರುತ್ತವೆ. ಇಂಥ ಗೇಮಸಾಂಕ್ಚುಯರಿ ಇರುವ ಕಡೆ ಮಂಗಳ ಪ್ರಾಜೆಕ್ಟ್ ಕಟ್ಟಲು ಹೊರಟಿದ್ದಾರೆ ಇದರಲ್ಲಿ ಇನ್ನೂ ಒಂದು ವೈಶಿಷ್ಟ್ಯವಿದೆ. ಆ ಕೆಲಸವನ್ನು ಒಬ್ಬ ಕಂಟ್ರಾಕ್ಟರಿಗೆ ಕೊಟ್ಟಿದ್ದಾರೆ. ಆತ ನೀರಿಗಾಗಿ ಅನೇಕ ಬಾವಿಗಳನ್ನು ತೆಗೆದಿದ್ದಾನೆ. ಆದರಲ್ಲಿ ಒಂದು ತೊಟ್ಟು ನೀರೂ ಬಂದಿಲ್ಲ, ಅದಕ್ಕೆ ಮೊನ್ನೆ ಚೀಫ್ ಇಂಜಿನಿಯರು ಹೋಗಿದ್ದು ವನ್ಯ ಮೃಗಗಳು ನೀರು ಕುಡಿಯಲು ಎಂದು ಚಿಕ್ಕ ಕೆರೆ ಇದೆ. ಆದರಿಂದ ಪೈಪ್ ಹಾಕಿ ಕೆಲಸಕ್ಕೆ ನೀರು ಕೊಡುತ್ತೇವೆ ಕೆಲಸ ಮಾಡು ಬಂದು ಹೇಳಿದ್ದಾರೆ. ಇದಕ್ಕೆ ೧೧,೮೦೦ ಖರ್ಚು. ಏಕೆ ಇಷ್ಟೊಂದು ಪ್ರೀತಿ ಆ ಕೆರೆಯ ಮೇಲೆ ಬಂತು ? ವ್ಯಾಲಿಯಲ್ಲಿ ಒಂದು ತೊಟ್ಟು ನೀರಿಲ್ಲ. ಇದಕ್ಕೆ ದೊಡ್ಡ ಪ್ರಾಜೆಕ್ಟ್, ಖರ್ಚು ೧೫ ಲಕ್ಷ, ಯಾರಿಗಾದರೂ ಸಹಾಯ ಮಾಡಬೇಕು ಎಂದು ಇದ್ದರೆ ಇಪ್ಪತ್ತು ಲಕ್ಷ ಕೊಡಲಿ. ಮುಖ್ಯ ಮಂತ್ರಿಗಳ ಹತ್ತಿರ ಬೇಕಾದಷ್ಟು ದುಡ್ಡು ಇದೆ. ಅಂತ ಜನ ಹೇಳುತ್ತಾರೆ ಒಂದು ಕೋಟಿ ಎನ್ನುತ್ತಾರೆ ಮೂರು ಕೋಟಿ, ಎನ್ನುತ್ತಾರೆ ಐದು ಕೋಟಿ, ಹತ್ತು ಕೋಟಿ ಎನ್ನುತ್ತಾರೆ. ಪಾಪ ಒಹಳ ಕಷ್ಟಪಟ್ಟು ಸಂಪಾದಿಸಿದ ಹಣ, ಇದರಲ್ಲಿ ಎಷ್ಟು ಲಕ್ಷ ರೂಪಾಯಿ ಕೊಟ್ಟರೂ ಅಡ್ಡಿ ಬರುವುದಿಲ್ಲ. ಕದಾಯ ಕೊಡುವ ಹಳ್ಳಿಗರ ದುಡ್ಡು ಮಾತ್ರ ಕೊಡುವುದಕ್ಕೆ ಮಾತ್ರ ಸಾಧ್ಯವಿಲ್ಲ. ದೊಡ್ಡ ಮೇಟಿ ಸಾಹೇಬರು ಈ ಇಳಿ ವಯಸ್ಸಿನಲ್ಲಿ ಅಧಿಕಾರಕ್ಕೆ ಬರುವುದು ಜನಗಳ ಸಹಾಯಕ್ಕಾಗಿ. ಇಲ್ಲೆ ಅಲ್ಲ. ಇನ್ನೊಂದುಕಡೆಯ ಲೆಕ್ಕ ಕೊಡಬೇಕಾಗುತ್ತದೆ. ಎಂದು ನಂಬಿರುವವರು ಪೈಕಿ ನಾನೂ ಒಬ್ಬಳು, ಇದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು "ಪೊಲಿಟಿಕಲ್ ಪ್ರೊಜೆಕ್ಟ್" ಮಾಡುವುದಕ್ಕೆ ಹೋಗ ಬಾರದು ಎಂದು ಹೇಳುತ್ತೇನೆ. ಯಾಕೆಂದರೆ ಇದನ್ನು ದೇವರು ಕ್ಷಮಿಸುವುದಿಲ್ಲ.

4-00 P.M.

ಇನ್ನು ಮೇಜರ್ ಇರಿಗೇಷನ್ನಿನಲ್ಲಿ ಒಬ್ಬ ಕಂಟ್ರಾಕ್ಟರನಿಗೆ ಸಹಾಯಕ ಮಾಡುವುದಕ್ಕೆ ಹೋದ ಉದಾಹರಣೆ ಹೇಳುತ್ತೇನೆ. ಕಬಿನಿ ಯೋಜನೆಯಲ್ಲಿ ಮಣ್ಣಿನ ಕೆಲಸಕ್ಕಾಗಿ ಎಳೂವರೆ ರೂಪಾಯಿ ರೇಟು ಇದ್ದಿತು. ಟೆಂಡರಿನಲ್ಲಿ ಅದೇ ರೇಟು ಇತ್ತು. ಆದನ್ನು ನಂತರ ಮಾಡಿ ರಿವೈಸ್ ೧೬ ರೂಪಾಯಿಗೆ ಒಂದು ಯುನಿಟ್ ಗೊತ್ತು ಮಾಡಿದ್ದಾರೆ. ಇದು ಎಲ್ಲಿಗೆ ಹೋಗುತ್ತದೆ ? ಶ್ರೀ ವರ್ಮಾ ದೇವೇಗೌಡರು ಹೇಗಾದರೂ ಸರಿ ಪ್ರೊಜೆಕ್ಟ್‌ನ ಆಗಬೇಕು ಎಂದು ಹೇಳಿದರು ನಿಜ ಆದರೆ ಆಟ್ ಹೂಸ್ ಕಾಸ್ಟ್ ? ಇದನ್ನು ಯೋಚನೆ ಮಾಡಬೇಕು ಎಂದು ಹೇಳಲು ಇಷ್ಟ ಪಡುತ್ತೇನೆ. ಡೆಮಾಕ್ರಸಿ ಪ್ರಜಾ ರಾಜ್ಯ ಉಳಿಯುವುದಕ್ಕೆ ಸರಕಾರ ಹಾಗೆ ಮಾಡಿದೆ, ಹೀಗೆ ಮಾಡಿದೆ ಎಂದು ಮುಖ್ಯ ಮಂತ್ರಿಗಳು ಹೇಳುತ್ತಾರೆ. ಸರಕಾರವನ್ನು ಬಡಿಯುವುದಕ್ಕೆ ಯಾವ ಕೋಲು ಆದರೂ ಸರಿ ಎಂದು ಟೀಕೆ ಮಾಡುತ್ತಾರೆ ಅವರು ಹಾಗೆ ಹೇಳುವಾಗ ನನ್ನಂಥ ಸಣ್ಣ ಸಾಧಾರಣ ಎಂ. ಎಲ್. ಎ.ಗೆ ಎಂಥಾ ಪಿನ್ ಆದರೂ ಸರಿ ಎಂಥಾ ಸಣ್ಣ ಮುಳ್ಳು ಚುಚ್ಚುವುದೇ ಸರಿ ಎನ್ನುವ ಹಾಗೆ ಆಗಿದೆ. ಇಂದಿನ ಪ್ರಜಾ ರಾಜ್ಯದಲ್ಲಿ ಸ್ವಲ್ಪ ಹಿಂದಕ್ಕೆ ತಿರುಗಿ ನೋಡಿ,

ನಾನು ಏನು ಮಾಡುತ್ತೇನೆ, ಜನ ನನ್ನ ಬಗ್ಗೆ ಏನು ಮಾತನಾಡುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕು. ಅಂದರೆ ನನ್ನ ವಿಚಾರದಲ್ಲಿ ಏನು ಅನ್ನುತ್ತಾರೆ ಎಂಬುದು ಗೊತ್ತಾಗುತ್ತದೆ. ಇಲ್ಲದಿದ್ದಲ್ಲಿ ಜನ ಬಡಬಡಕೊಂಡು ನಗುತ್ತಾರೆ, ಕೈಕಟ್ಟಿ ನಗುತ್ತಾರೆ ಎಂದು ಗೊತ್ತಾಗುತ್ತದೆ. ಈ ಒಂದು ಕೆಲಸ ಮಾಡಬೇಕು. ಇಷ್ಟು ಹೇಳಿ, ನಾನು ಎರಡು ನಿಮಿಷ ಜಾಸ್ತಿ ಮಾತನಾಡಲು ತೆಗೆದುಕೊಂಡದ್ದಕ್ಕೆ ಕ್ಷಮಿಸಬೇಕು ಎಂದು ಕೇಳಿಕೊಂಡು ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಎಂ. ಶ್ರೀನಿವಾಸ ನಾಯಕ (ಮಂಗಳೂರು) :—ಮಾನ್ಯ ಅಧ್ಯಕ್ಷರೇ, ಇಂದು ಸಭೆಯ ಮುಂದೆ ಚರ್ಚೆಗೆ ಬಂದಿರುವ ಈ ಲೋಕೋಪಯೋಗಿ ಇಲಾಖೆಯ ಬೇಡಿಕೆಗಳನ್ನು ಸಮರ್ಥಿಸಿ ಎರಡು ಮಾತು ಹೇಳಲು ಬಯಸುತ್ತೇನೆ. ವಿಶಾಲ ಕರ್ನಾಟಕವಾಗಿ ಹದಿನಾಲ್ಕು ವರುಷಗಳಾದರೂ ಕೂಡ ಬಂದರು ಅಭಿವೃದ್ಧಿ ವಿಷಯದಲ್ಲಿ ಎಷ್ಟು ಆಸಕ್ತಿ ತೋರಿಸಬೇಕೋ ಅಷ್ಟು ಆಸಕ್ತಿ ಸರಕಾರ ತೋರಿಸಿಲ್ಲ ಎಂದು ಹೇಳಬೇಕಾಗಿದೆ. ಮೈಸೂರು ರಾಜ್ಯದಲ್ಲಿ ೧೯ ಬಂದರುಗಳು ಇವೆ. ಆದರೆ ಇವುಗಳ ಅಭಿವೃದ್ಧಿ ಮಾಡಲು ಸಾಧ್ಯವಾಗಿಲ್ಲ ಎಂಬುದು ವಿಷಾದಕರ. ಬಂದರು ಇಲಾಖೆಯನ್ನು ಶ್ರೀಪ್ರಮಾನ್ ಲಿಂಗಾರೆಡ್ಡಿ ಯವರು ವಹಿಸಿಕೊಂಡ ಮೇಲೆ ಸಾಧ್ಯವಿರುವಷ್ಟು ಪ್ರಯತ್ನ ಮಾಡುತ್ತಿದ್ದಾರೆ. ಇಷ್ಟು ಗಮನ ಸಾಲದು. ಅವರು ತುಂಬಾ ಹೆಣಗಾಡುತ್ತಿದ್ದಾರೆ ಯಾಕೆಂದರೆ ದುಡ್ಡಿನ ಅಭಾವ ಇದೆ. ದುಡ್ಡಿನ ಅಭಾವದ ಮೂಲಕ ೧೯ ಬಂದರುಗಳ ಅಭಿವೃದ್ಧಿ ಮಾಡಲು ಸಾಧ್ಯವಾಗಿಲ್ಲ. ಆದರೂ ಈ ಬಗ್ಗೆ ಪ್ರಯತ್ನ ಮಾಡಬೇಕಾದುದು ಸರಕಾರದ ಆದ್ಯ ಕರ್ತವ್ಯವಾಗಿದೆ. ಹೊಸಪೇಟೆ ಬಳ್ಳಾರಿಯಲ್ಲಿ ದೊರೆಯುವ ಕಬ್ಬಿಣದ ಅದಿರನ್ನು ಕಾರವಾರ ಬಂದರು ಮೂಲಕ ರವಾನಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದರ ಬಗ್ಗೆ ಅಷ್ಟು ಆಸಕ್ತಿ ತೋರಿಸಲಿಲ್ಲ. ಸೂಕ್ತ ಕ್ರಮ ಕೈ ಕೊಂಡಿಲ್ಲ ಎಂದು ಹೇಳಬೇಕಾಗಿದೆ. ಹೊಸಪೇಟೆ ಬಳ್ಳಾರಿ ಪ್ರದೇಶದಲ್ಲಿ ದೊರೆಯುವ ಕಬ್ಬಿಣದ ಅದಿರು ಜಗತ್ತಿನಲ್ಲಿಯೇ ಒಳ್ಳೇ ಅದಿರು ಆಗಿದೆ. ಗೋವಾ ಮತ್ತು ಮದ್ರಾಸ್ ಬಂದರು ಮೂಲಕ ಅಧಿಕ ಪ್ರಮಾಣದಲ್ಲಿ ರಫ್ತು ಆಗುತ್ತಿದೆ. ಈ ಬಗ್ಗೆ ಕೇಂದ್ರ ಸರಕಾರದ ಧೋರಣೆ ಸಮರ್ಪಕವಾಗಿಲ್ಲ, ಇದು ಮನ್ನಣೆ ಮಾಡುವ ವಿಷಯವಲ್ಲ. ಎರಡು ಹಂತದಲ್ಲಿ ಕಾರವಾದ ಬಂದರು ಅಭಿವೃದ್ಧಿ ಪಡಿಸುವ ರಿಪೋರ್ಟ್ ಕೊಟ್ಟಿದ್ದಾರೆ. ಇದಕ್ಕೆ ೧೬ ಕೋಟಿ ವ್ಯಯವಾಗುವ ಅಂದಾಜು ಇದೆ. ಗೋವಾ ಮತ್ತು ಮದ್ರಾಸ್ ಬಂದರುಗಳ ಅಭಿವೃದ್ಧಿಗೆ ೨೯ ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಹೊರಟಿದ್ದಾರೆ ಅಂದರೆ ಹೊಸಪೇಟೆ ಬ್ಬಳ್ಳಾರಿಯಲ್ಲಿ ದೊರೆಯುವ ಕಬ್ಬಿಣದ ಅದಿರು ಮದ್ರಾಸ್ ಮತ್ತು ಗೋವಾ ಬಂದರು ಮೂಲಕ ರಫ್ತು ಆಗಬೇಕು ಎಂದು, ಇದು ಕೇಂದ್ರ ಸರಕಾರದ ತೀರ್ಮಾನ ತೋರಿಸುತ್ತದೆ. ಇದು ಸರಿಯಲ್ಲ. ಮೈಸೂರು ರಾಜ್ಯದಲ್ಲಿಯ ಬಂದರು ಅಭಿವೃದ್ಧಿಗೆ ಮನ್ನಣೆ ಮತ್ತು ಹಣ ಒದಗಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಂಗಳೂರು ಬಂದರು ೪೫ ಅಡಿ ಆಳ ಮಾಡಬೇಕು ಎಂದು ಇದ್ದುದನ್ನು ಈಗ ೩೦ ಅಡಿ ಆಳ ಮಾಡಿದರೆ ಆಗಬಹುದು ಎಂದು ಕೇಂದ್ರ ಸರಕಾರದ ಧೋರಣೆ ಇದೆ. ಇದರಲ್ಲಿ ಏನಾದರೂ ರಾಜಕೀಯ ಇದೆ ಎಂದು ತಿಳಿಯಬೇಕಾಗುತ್ತದೆ ಅದೇ ರೀತಿ ಫಿಶರೀಸ್ ವಿಚಾರದಲ್ಲಿ ಕಾರ್ಪೊರೇಷನ್ ಮಾಡುತ್ತೇವೆ ಎಂದು ಹೇಳಿದರು, ಆದರ ಹಣದ ಅಭಾವದಿಂದ ಕ್ರಮ ತೆಗೆದುಕೊಂಡಿಲ್ಲ. ಕಾರ್ಪೊರೇಷನ್ ಏತಕ್ಕೆ ಮಾಡಬಾರದು ಎಂದು ಏತಕ್ಕೆ, ಗಮನಕ್ಕೆ ತೆಗೆದುಕೊಳ್ಳಲಿಲ್ಲ ? ಅಭಿವೃದ್ಧಿ ಕಾರ್ಯಕ್ಕೆ ೪೦ ಕೋಟಿ ಬೇಕು ಎಂದು ಹೇಳುತ್ತಾರೆ. ಹಣ ಒದಗಿಸದೇ ಇದ್ದರೆ ಮಂಗಳೂರು ವರ್ಷಗಳಲ್ಲಿ ಬಂದರು ಅಭಿವೃದ್ಧಿ ಯಾಗುವುದು ಸಾಧ್ಯವಿಲ್ಲ. ಬೆಂಗಳೂರು ಕಾರ್ಪೋರೇಷನ್ನು ಹತ್ತು ಕೋಟಿ ರೂಪಾಯಿ ಸಾಲ ಎತ್ತಬೇಕು ಎಂದು ಮಾಡಿದ್ದಾರೆ ಅದೇ ರೀತಿ ಬಂದರು ಅಭಿವೃದ್ಧಿಗೆ ಕಾರ್ಪೊರೇಷನ್ನು ಮಾಡಿ ಹತ್ತು ವರ್ಷಗಳಲ್ಲಿ ೪೦ ಕೋಟಿ ಸಾಲ ಎತ್ತುವ ಯೋಜನ ಹಾಕಿಕೊಳ್ಳಬಹುದು. ಅಥವಾ ವರ್ಲ್ಡ್ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳಬಹುದು: ಈ ಧೋರಣೆ ಸರಕಾರ ಇಟ್ಟುಕೊಳ್ಳಬೇಕು. ಕೇಂದ್ರದಿಂದ ಹಣ ಸಿಕ್ಕುವುದಿಲ್ಲ. ಆದುದರಿಂದ ಇದರ ಬಗ್ಗೆ ಕಾರ್ಪೋರೇಷನ್ ಮಾಡಬೇಕು ಮತ್ತು ಸಾಲ ಎತ್ತಬೇಕು ಎಂಬ ಸಲಹೆ ಈ ಸಂದರ್ಭದಲ್ಲಿ ಕೊಡ ಬಯಸುತ್ತೇನೆ.

ಸ್ಟೇಟ್ ಪೋರ್ಟ್ ಆಫೀಸರ್ ಕಛೇರಿಯನ್ನು ಬೆಂಗಳೂರಿನಲ್ಲಿ ಇರುವ ವ್ಯವಸ್ಥೆ ಮಾಡಬೇಕು. ಈ ಕ್ರಮ ಕೈ ಕೊಳ್ಳುವ ಬಗ್ಗೆ ಮತ್ತು ರೀ ಆರ್ಗನೈಜ್ ಮಾಡುವ ಬಗ್ಗೆ ಸಲಹೆ ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಇವರು ಇದ್ದರೆ ಬಹಳ ಅನುಕೂಲವಾಗುತ್ತದೆ. ಆದುದರಿಂದ ಇದನ್ನು ಬೆಂಗಳೂರಿಗೆ ವರ್ಗಾಯಿಸುವ ಬಗ್ಗೆ ಸರಕಾರ ಕೂಡಲೆ ಕ್ರಮ ತೆಗದುಕೊಳ್ಳಬೇಕು.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೊಡ್ಡ ಅಥವಾ ಸಣ್ಣ ಯಾವ ನೀರಾವರಿ ಯೋಜನೆಗಳನ್ನೂ ಇಲ್ಲಿಯವರೆಗೆ ಸರ್ಕಾರದವರು ಕೈಕೊಂಡಹಾಗೆ ಕಾಣುವುದಿಲ್ಲ. ಹಿಂದಕ್ಕೆ ನಮ್ಮ ದಕ್ಷಿಣ ಕನ್ನಡ ಜಿಲೆ ಮದ್ರಾಸ್ ರಾಜ್ಯದಲ್ಲಿದ್ದಾಗ ಆಗ ನಮ್ಮ ಜಿಲ್ಲೆಯಲ್ಲಿ ಹಾಲಾಡಿ ನೀರಾವರಿ ಯೋಜನೆಯನ್ನು ಕೈಗೊಳ್ಳಲು

(ಶ್ರೀ ಎಂ. ಶ್ರೀನಿವಾಸ ನಾಯಕ)

ಅಲ್ಲಿ ಆದಕ್ಕೆ ಅಂದಾಜು ಸಹ ಇತ್ಯಾದಿಗಳೆಲ್ಲಾ ತಯಾರಾಗಿದ್ದವು. ಆಪ್ಪರಲ್ಲಿ ನಮ್ಮ ಜಿಲ್ಲೆ ಇಲ್ಲಿ ಮೈಸೂರು ರಾಜ್ಯಕ್ಕೆ ಸೇರಿಸಲ್ಪಟ್ಟಿತು. ಆಗ ಆದಕ್ಕೆ ಒಂದೂವರೆ ಕೋಟಿ ರೂಪಾಯಿಗಳ ಬಜೆಟ್ಟು ಕೂಡ ಮಂಜೂರಾಗಿತ್ತು. ಆದರೆ ಇಲ್ಲಿಗೆ ನಾವು ಬಂದು ಸೇರಿದ ಮೇಲೆ ಇಲ್ಲಿ ಮೂರು ಪಂಚವಾರ್ಷಿಕ ಯೋಜನೆಗಳು ಮುಗಿದಿದ್ದಾಗ್ಗೂ ನಮ್ಮ ಜಿಲ್ಲೆಯಲ್ಲಿ ಯಾವ ಒಂದು ಕೈಗಾರಿಕೆಯನ್ನೂ ಸರ್ಕಾರ ಕೈಗೊಳ್ಳಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಗೆ ಇದೊಂದು ದೊಡ್ಡ ಘಾತವಾಗಿದೆ. ಆದ್ದರಿಂದ ನಮ್ಮ ಹಾಲಾಡಿ ಪ್ರಾಜೆಕ್ಟನ್ನು ಕೂಡಲೆ ತೀವ್ರವಾಗಿ ಸರ್ಕಾರದವರು ಕಟ್ಟಿ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸರ್ಕಾರದವರು ತೆಗೆದುಕೊಂಡು ಮುಗಿಸಲೇಬೇಕೆಂದು ನಾನು ಒತ್ತಾಯ ಮಾಡಿ ಕೇಳಿಕೊಳ್ಳುತ್ತೇನೆ.

ಇನ್ನು ಹಳ್ಳಿ ರಸ್ತೆಗೆ ಅಲ್ಲಲ್ಲಿ ಕಲ್ವರ್ಟ್ ವಗೈರೆಗಳಿಲ್ಲದೆ ಅನೇಕ ಕಡೆ ರಸ್ತೆಗಳು ಸಂಚಾರಕ್ಕೆ ಯೋಗ್ಯವಾಗಿಲ್ಲ. ಅನೇಕ ಕಡೆ ಹಳ್ಳಿಗಳಿಗೆ ರಸ್ತೆಗಳೇ ಇಲ್ಲ. ಆದ್ದರಿಂದ ಸರ್ಕಾರದವರು ಕೂಡಲೆ ಇವುಗಳನ್ನು ಉತ್ತಮಪಡಿಸಬೇಕು. ಆದರೆ ನಮ್ಮ ಜಿಲ್ಲೆಯಲ್ಲಿ ಕೇಪ್ ಕಾಮರಿನ್ ಇಂದ ಬೊಂಬಾಯಿನವರೆಗೂ ನ್ಯಾಷನಲ್ ಹೈವೇ ಮಾಡಿದ್ದಾರೆ. ಆದರೆ ರಾಜ್ಯದ ಮುಖ್ಯ ನಗರಗಳಲ್ಲಿ ಒಂದಾದ ಮಂಗಳೂರಲ್ಲಿ ಒಳ್ಳೆಯ ರಸ್ತೆಗಳಿಲ್ಲ. ಅಂಥ ದೊಡ್ಡ ನಗರಗಳ ರಸ್ತೆಯನ್ನು ಅಲಕ್ಷ್ಯಮಾಡುವುದು ಸರಿಯಲ್ಲ. ಈಗಾಗಲೇ ರಾಜ್ಯದಲ್ಲಿ ಇಂಬ್ಯಾಲೆನ್ಸ್ ಆಗಿದೆ ಎಂಬ ಕೂಗು ಅಲ್ಲಲ್ಲಿ ಕೇಳಿಬರುತ್ತಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಎಲ್ಲ ವಿಚಾರಗಳಲ್ಲೂ ಬಹಳ ಅನ್ಯಾಯವಾಗಿದೆ. ನಮ್ಮ ಜಿಲ್ಲೆಯಿಂದ ಸರ್ಕಾರಕ್ಕೆ ಬರತಕ್ಕ ಟ್ಯಾಕ್ಸಿನ ಒಂದು ಪಾಲನ್ನು ಅಲ್ಲಿಯ ಜನರ ಅನುಕೂಲಕ್ಕೆ ಖರ್ಚು ಮಾಡಬೇಕಾದ್ದು ಅತ್ಯಗತ್ಯ.

ಅಲ್ಲಿ ನೀರಾವರಿ ಅನುಕೂಲಕ್ಕಾಗಿ ಹೆಚ್ಚಿನ ಪಂಪ್‌ಸೆಟ್ಟುಗಳನ್ನು ಮತ್ತು ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮಂಗಳೂರು ಬಂದರ್ ಕೆಲಸ ಬಹಳ ಹಗುರವಾಗಿ ನಡೆಯುತ್ತಿದೆ. ಅದನ್ನು ತೀವ್ರಮಾಡಬೇಕು. ಅದರ ಆಳ ೪೯ ಅಡಿ ಇರಬೇಕೆಂದು ಕೇಂದ್ರಕ್ಕೆ ಒತ್ತಾಯ ಮಾಡಬೇಕು. ಮಂತ್ರಿ ಶ್ರೀ ಲಿಂಗಾರೆಡ್ಡಿಯವರು ಈ ವಿಚಾರದಲ್ಲಿ ಇನ್ನೂ ಹೆಚ್ಚಿನ ಶ್ರಮವನ್ನು ವಹಿಸಿ ಅದರ ಬಗ್ಗೆ ಒಂದು ಕಾರ್ಪೊರೇಷನ್ ಮಾಡಬೇಕೆಂದು ಒತ್ತಾಯ ಮಾಡಿ ಅದಕ್ಕೆ ಕೂಡಲೆ ಮಂಜೂರಾತಿಯನ್ನು ಪಡೆಯಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

‡ Sri D.B KALMANKAR (ALAND):—Mr Deputy Speaker, Sir, today a statement was furnished to me in answer to my starred question, and from that statement it is evident that there are political considerations by this Government in taking up works in different areas. Since the last General Elections if we see the amount spent on various works in various taluks of Gulbarga District, it will be clear that though there are many works to be undertaken for which the elected representatives from Aland area have been pressing, no attention is paid to those works even though they are very important and necessary.

[*Mr. Chairman Sri D.M. Siddaiah*]:—(In the Chair).

If we see the amount spent on roads for the year 1967-68, in Chincholi taluk alone they have spent Rs. 9,30,180/- and for Chitapur Rs. 3,78,435/-. As against this, for Aland taluk they have spent only Rs 1,25,644. Though there are important roads in Aland taluk, viz, Aland-Vazur-Khandalgar road, Aland-Modankopp rigi road, Kadaganchi-Madanipur road, etc., no amounts are earmarked in the present budget except for Madanipur road. If we take the amount spent on bridges, it is seen that Rs. 5,27,871/- has been spent for 1967-68 in Chitapur taluk, Rs. 1,37,928/- for Chincholi and only Rs. 90,932 for

Aland taluk. Therefore, Aland taluk has not received proper attention. During 1968-69, the amount spent on bridges in Chitapur taluk is Rs. 3,96,260/- and for Aland taluk Rs. 1,52,000/-. Similarly, on buildings during 1967-68, a sum of Rs. 67,693/- was spent in Chincholi taluk and only Rs. 22,000/- for Aland Taluk. During 1968-69, a sum of Rs. 1,19,124/- has been spent in Chitapur taluk and for Aland taluk it is Rs. 8,164/-. However, I wish to raise all the other points by means of an half-an-hour discussion.

We find much discrimination being made as far as constituencies of Opposition members are concerned. Regarding medium irrigation works, for Hattikona project in Yadigir for 1967-68 Rs. 9 lakhs and odd have been spent and for 1968-69 Rs 7 lakhs and odd have been spent. For Chandrapalli project in Chincholi taluk, during 1967-68 Rs. 12.15 lakhs have been spent and during 1968-69 Rs. 44.28 lakhs have been spent. Sir, there is the Saligao tank in Aland taluk.

Sri VEERENDRA PATIL (Chief Minister):—I am very sorry a strange argument is being advanced. Hon. Members are aware that Hattikona project was started by Hyderabad Government and it has reached an advanced stage of completion. The Hon. Member seems to think that the amount should be spent in all taluks equally irrespective of the quantity of work. Seven to eight lakhs of rupees had to be spent to complete Hattikoni project. This Chandrapalli Project was taken up very recently and that is going to cost nearly two crores of rupees. The Hon. Member seems to say that whatever we spend on Hattikoni Project, the same amount should be spent on Chincholi Project. I think this is a very strange argument advanced by the Hon. Member.

Sri D.B. KALMANKAR:—Sir, what I want to say is that whenever I have put starred questions regarding works to be taken up in Alans. Taluk. the Government have repeatedly said there is paucity of fundd In Aland Taluka there are projects which have been investigated and are ready for execution. Since the past two to three years I have been representing to the Government to take up the work of the said project which is to cost about 11 lakhs of rupees and would enable to irrigate about 12 to 15 hundred acres of land. But the Government has not taken it up so far. Therefore I submit that the plea of the Government that there is paucity of funds has no meaning because when they are able to spend crorees of rupees in other areas can they not spend some amount in Aland Taluka and take up the works which are beneficial to the agriculturists?

I never intended to say that if a project is taken up in other areas, they should be take up project of equal magnitude in Aland taluk also The Government has been spending huge amounts on Chitapura, Chincholi etc.. while they have neglected Aland, Jewargi and Sedam taluks, because of the fact, that opposition members were elected

(SRI D. B. KALMANKAR)

from those constituencies. Whenever the Ministers come there, they try to impress upon the electorate that may have not been able to get the project works taken up by Government, because they have elected an opposition member as their representative. Inspite of several representations and reminding the Government on the floor of this House, the Government is deliberately not taking up any works in Aland taluk.

Then Sir, I have been putting several questions regarding Court building for Aland taluk. Huge amounts are being spent for Court buildings at Bangalore and other places, but the long pending demand for a court building, a building for Bar and a room for litigants etc., in Aland taluk, for which there is a plan already prepared and the High Court has also pressed for, have not been taken up by the Government.

Similarly Sir, the Government is showing step-motherly attitude with regard to another medium project called the Kolani project and no amount has been earmarked or included in the budget presented to this House.

Further, in the Budget we find that out of Rs. 3,11,000/- under Buildings division, Rs. 1,25,000 is earmarked for Gulbarga; Rs. 1,50,000 for Afzalpur, and Rs. 2,15,000 for Chitapur. No amount has been earmarked for Aland taluk.

Then a sum of Rs 1,11,000 has been ear-marked for tanks, out of which, Rs. 1 lakh is to be spent on Chincholi taluk and the remaining amount to be spent in Afzalpur taluk. No mention has been made about the amount to be spent for other taluks including Aland.

In regard to Police quarters also, I have been urging upon the Government to atleast complete the works which are half-done in Aland taluk. Out of the total amount of Rs. 3,36,000 allotted for constructing police quarters, not a single pie has been spent in Aland taluk. The whole amount has been spent for constructing police quarters in other talukas like Gulbarga, Chincholi, Afzalpur, Shorapur and Kalburgi etc.

Time and again, I have been submitting to the Goverament that the present dispensary at Aland is insufficient and a new building for the dispensary is very much required. But I find that under public health Demand no amount has been spared for taking up the dispensery building at Aland taluk.

Therefore Sir, I feel that this Government is not having an impartial attitude in taking up the works of public utility. When the Government has not heeded to several representations made by the

members and other people of the taluk, one has to come to the conclusion that this Government is not interested in the welfare of the people. Here is the Government, which is of the Congress, for the Congress and always working in the interest of the Congress, only to better its chances for next elections. The Government has no phased plan to spend money equally in all constituencies. That being the case, I strongly oppose these demands and I feel that every pie spent is a mere waste, and is being spent on political considerations and the Government have no interest in the welfare of the people.

†ಶ್ರೀ ಎಂ. ದೊಡ್ಡನಗೌಡ (ಸಿರಗುಪ್ಪ):—ಮಾನ್ಯ ಅಧ್ಯಕ್ಷರೇ, ಇಂದಿನ ಬೇಡಿಕೆಗಳನ್ನು ಸಮರ್ಥಿಸುತ್ತಾ ಈ ನೀರಾವರಿ ಬಗ್ಗೆ ಕೆಲವು ಅಂಶಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ.

ಸ್ವಾಮಿ, ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಎರಡು ದೊಡ್ಡ ನೀರಾವರಿ ಯೋಜನೆಗಳು ಇವೆ. ಒಂದು ವಿಜಯನಗರದ ಛಾನಲ್ಸ್, ಇನ್ನೊಂದು ತುಂಗಭದ್ರ ಪ್ರಾಜೆಕ್ಟ್. ನಾನು ವಿಜಯನಗರದ ಛಾನಲ್ಸ್ ಬಗ್ಗೆ ಹೇಳಬೇಕಾದರೆ ಈ ಕಟ್ಟೆಗಳು ಅತಿ ಪುರಾತನವಾದವು. ವಿಜಯನಗರದ ಅರಸರ ಕಾಲದಲ್ಲಿ ಆಗಿದ್ದುವು. ಪ್ರಪಂಚದ ಒಂದು ವಿಚಿತ್ರವಾದಂಥ ಕಟ್ಟೆಗಳು. ಇವುಗಳು ಈಗ ಪೂರ್ಣ ಶಿಥಿಲವಾಗಿದ್ದು ಅವುಗಳ ದುರಸ್ತಿ ಅನಿವಾರ್ಯ ಮತ್ತು ಅತ್ಯಗತ್ಯವಾಗಿದೆ. ಆದರೆ ನಾನು ಇದರ ಬಗ್ಗೆ ತಾರೀಖು ೧೪ನೇ ಮಾರ್ಚ್ ೧೯೭೦ ರಂದು ಕೊಶ್ಚನ್ ಅವರ್‌ನಲ್ಲಿ ಈ ಪ್ರಶ್ನೆಯನ್ನು ಹಾಕಿದಾಗ, whether the Government is aware that the Dam bits of Vijayanagar Channel at Kenchanagudda in Siruguppa Taluk are in bad shape resulting in heavy leakage ಎನ್ನುವುದಕ್ಕೆ 'Yes' ಎಂದು ಉತ್ತರ ಕೊಟ್ಟಿದ್ದೀರಿ, ಆದರೆ ಈ ಕಟ್ಟಡಗಳ ಬಗ್ಗೆ ಚೀಫ್ ಇಂಜನೀಯರು ಪರಿಶೀಲಿಸಿ ಅವುಗಳನ್ನು ರಿಪೇರಿ ಮಾಡಲಿಕ್ಕೆ ಶಕ್ಯವಿಲ್ಲ. ಅವುಗಳು ಭಿನ್ನವಾಗಿರುವುದರಿಂದ ಬೇರೆಯೇ ನಿರ್ಮಾಣವಾಗಬೇಕು ಎಂದು ಖಚಿತವಾದ ಅಭಿಪ್ರಾಯಕ್ಕೆ ಬಂದು ಈವರೆಗೂ ಯಾವುದೂ ರಿಪೇರಿ ಮಾಡದೇ ಹಾಗೆಯೇ ಉಳಿದಿವೆ.

ಈ ರೀತಿ ವೇಗ ರಿಪ್ಲೈ ಕೊಡುತ್ತಿರುವುದನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಈ ಬಗ್ಗೆ ಯಾವಾಗ ಇಲ್ಲಿ ನೀರಾವರಿ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ ಎನ್ನುವುದರ ಬಗ್ಗೆ ಈ ಸಭೆಗೆ ತಿಳಿಸಬೇಕೆಂದು ಕೇಳುತ್ತೇನೆ. ತುಂಗಭದ್ರ ಪ್ರಾಜೆಕ್ಟ್ ಬಗ್ಗೆ ಹೇಳಬೇಕಾದರೆ ನಮ್ಮ ಬಳ್ಳಾರಿ ಜಿಲ್ಲೆಯ ಜನರಿಗೆ ಇದರಿಂದ ಬಹಳ ಅನುಕೂಲವಾಗಿದೆ. ಪ್ರಾಜೆಕ್ಟ್‌ನಿಂದ ಸಣ್ಣ ಸಣ್ಣ ಕಾಲುವೆಗಳು ಸುಮಾರು ೮-೧೦ ಮೈಲಿ ದೂರ ಬಂದರೂ ಇದರ ವೆಲಾಸಿಟಿ ಆಫ್ ವಾಟರು ಕಡಿಮೆಯಾಗುತ್ತದೆ. ಪ್ರತಿಯೊಂದು ಕಾಲುವೆಯಲ್ಲೂ ನೀರು ಬರುವಾಗ ಕೆಲವು ಕಡೆ ಇರುವ ಸ್ಲೂಯಿಸ್‌ನಿಂದ ನೀರು ಬರುತ್ತದೆ ಕೆಲವು ಕಡೆ ನೀರೇ ಬರುವುದಿಲ್ಲ. ಇದರಿಂದ ನಿಜವಾಗಿಯೂ ರೈತರಿಗೆ ಬಹು ತೊಂದರೆಯಾಗುತ್ತಿದೆ. ಬಳ್ಳಾರಿ ಜಿಲ್ಲೆಯ ಸದಸ್ಯರು ಅನೇಕ ಸಲ ಸರಕಾರಕ್ಕೆ ಮನವಿ ಮಾಡಿಕೊಂಡು ನಮ್ಮ ಭಾಗದ ಪರಿಸ್ಥಿತಿಯನ್ನು ಸರಿಯಾಗಿ ಪರಿಶೀಲನೆ ಮಾಡಲು ಒಂದು ಸ್ಪೆಷಲ್ ಕಮಿಟಿ ಮಾಡಬೇಕೆಂದು ಹೇಳಿದರೂ ಸರಕಾರ ಇದನ್ನು ಮಾಡಲು ಗಮನ ಕೊಟ್ಟಿಲ್ಲ. ಈಗೇನೋ ಒಂದು ಕನ್‌ಸಲ್ಟೆಟೀವ್ ಕಮಿಟಿ ಹಾಗೂ ಅಡ್ವೈಸರಿ ಬೋರ್ಡು ಎಂದು ಮಾಡಿದ್ದೀರಿ. ಆದರೆ ಇದರಿಂದ ನಮ್ಮ ಭಾಗದ ರೈತರಿಗೆ ಏನು ಅನುಕೂಲವಾಗಲಿಲ್ಲ ಆದುದರಿಂದ ನಮ್ಮ ಭಾಗದ ಸದಸ್ಯರ ಒಂದು ಸ್ಪೆಷಲ್ ಕಮಿಟಿ ಈಗಲಾದರೂ ಏರ್ಪಾಡು ಮಾಡಬೇಕೆಂದು ಇಲ್ಲಿ ಒತ್ತಾಯ ಮಾಡುತ್ತೇನೆ. ತುಂಗಭದ್ರಾ ನಾಲಾವಲ್ಲಿ ಸುಮಾರು ೪೪೦೦ ಎಕರೆಗಳಿಗೆ ಪೆರಿನ್ನಿಯಲ್ ವಾಟರು ಇದೆ. ೧೨,೦೦೦ ಎಕರೆಗಳಿಗೆ ವೆಟ್ ಏರಿಯಾ ಎಂದು ವಾಟರ್ ಸಿಗುತ್ತದೆ ಮತ್ತು ಸುಮಾರು ೪೨,೯೦೦ ಎಕರೆಗೆ ಡ್ರೈ ಕಂವೆಟಿ ಎಂದು ಮಾಡಿರುತ್ತಾರೆ ಇದರಲ್ಲಿ ಸಾವಿರದೈನೂರು ಎಕರೆಯಷ್ಟು ಮಾತ್ರ ಪೆರಿನ್ನಿಯಲ್ ಸೋರ್ಸ್ ಆಫ್ ವಾಟರು ಸಿಗುತ್ತೆ ೧೫೦೦ ಎಕರೆಗೆ ಮಾತ್ರ ವೆಟ್ ಏರಿಯಾ ಎಂದು ವಾಟರು ಸಿಗಬಹುದು ಮತ್ತು ಡ್ರೈ ಕಂ ವೆಟ್ಟಿಗೆ ಸಾವಿರ ಎಕರೆಯಷ್ಟು ಭೂಮಿ ಸಾಗು ಮಾಡಬಹುದಾಗಿದೆ ಇದರ ಪೂರ್ತಿ ಉಪಯೋಗವನ್ನು ಇಲ್ಲಿನ ರೈತರು ಮಾಡಿಕೊಡಬೇಕೆಂದು ಹೇಳಿದರೂ ಇನ್ನೂ ಸರಕಾರ ಇದರ ಕಡೇ ಗಮನ ಕೊಡಲಿಲ್ಲ. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ೧೯೫೬ ರಿಂದಲೂ ನೀರು ಪೂರೈಸಬೇಕೆಂದು ಹೇಳಿದರೂ ಇನ್ನೂ ೧೬ ವರ್ಷಗಳಾದರೂ ಇದರ ಕಡೆಗೆ ಸರಕಾರ ಗಮನ ಕೊಡಲಿಲ್ಲ. ಸರಕಾರ ಈಗಲಾದರೂ ಇದನ್ನು ಪರಿಶೀಲನೆ ಮಾಡಿ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಕೆಲವು ಭಾಗ ಬೆಟ್ಟು ಪ್ರಾಜೆಕ್ಟ್ ಏರಿಯಾದಲ್ಲಿ ಕೆಲವು ಕಡೆ ಮಾಡಿರುವ ಕೆನಾಲಗಳಿಂದ ನೀರು ಹರಿದು

(ಶ್ರೀ ಎಂ. ದೊಡ್ಡನಗೌಡ)

ಆಂದ್ರದ ಏರಿಯಾದ ಕಡೆಗೆ ಹೋಗುತ್ತದೆ. ಇದನ್ನು ದಾರಿಯಲ್ಲಿರುವ ರೈತರು ಕಾಲುವೆಗಳನ್ನು ಮಾಡಲು ಕಟೆ ಮಾಡಿ ನೀರಿನ ವೆಲಾಸಿಯನ್ನು ಕಡಿಮೆ ಮಾಡುತ್ತಾರೆ. ಇದರ ಬಗ್ಗೆ ಸರಕಾರಕ್ಕೆ ನಾವು ಆಗಿಂದಾಗ್ಗೆ ತಿಳಿಸುತ್ತಿದ್ದರೂ ಸರಕಾರದವರು ಇದನ್ನು ಬೋರ್ಡಿನವರೇ ಮಾಡಬೇಕು ಸರಕಾರ ಏನೂ ಮಾಡಲಾಗುವುದಿಲ್ಲ ಎಂದು ಹೇಳುತ್ತಾರೆ. ಇದರಲ್ಲಿ ಬೋರ್ಡಿನವರೇ ಆಗಲೀ ಆಂದ್ರದವರೇ ಆಗಲೀ ನಮ್ಮ ಸರಕಾರವಾಗಲೀ ಮಾಡಬೇಕು ಎಂದು ಹೇಳುತ್ತಾ ಹೋದರೆ ರೈತರಿಗೆ ಕಷ್ಟವಾಗುತ್ತದೆ. ಇದರ ಬಗ್ಗೆ ಸರಕಾರ ಯಾವುದಾದರೂ ದಾರಿ ಮಾಡಿಕೊಂಡು ರೈತರಿಗೆ ಕೆನಾಲೆ ಮೂಲಕ ನೀರನ್ನು ಪಯೋಗಿಸಲು ಸಹಾಯ ಮಾಡಬೇಕು ಮತ್ತು ಸರಕಾರ ಬೇಕಾದರೆ ಆಂದ್ರದವರೊಡನೆ ಮತ್ತು ಬೋರ್ಡಿನವರೊಡನೆ ಚರ್ಚೆ ಮಾಡಿ ರೈತರಿಗೆ ಅನುಕೂಲವಾಗುವಂತೆ ಮಾಡಲು ತಕ್ಕ ಕ್ರಮಗಳನ್ನು ಇಲ್ಲಿ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಬಳ್ಳಾರಿ ಜಿಲ್ಲೆ ಅತಿ ಮುಖ್ಯವಾದುದು ಎಂದು ಇಲ್ಲಿ ರೋಡುಗಳಿಗಾಗಿ ೪೦ ಲಕ್ಷದಷ್ಟು ಹಣವನ್ನು ಮಂಜೂರು ಮಾಡಿದ್ದರು. ಆದರೆ ಇದರ ಕೆಲಸಗಳು ಸಾಕಷ್ಟು ಕಾರ್ಯಗತ ವಾಗಿಲ್ಲ ಮತ್ತು ಸರಿಯಾದ ಪ್ರೋಗ್ರೆಸ್ಸು ಕೂಡ ಆಗಿಲ್ಲ. ಸಿರಿಗುಪ್ಪಾ ಬಹು ಹಿಂದುಳಿದ ತಾಲ್ಲೂಕು ಎಂದು ಹೇಳುತ್ತಿದ್ದರೂ ಈ ಪ್ರದೇಶದ ರೈತರ ಸ್ಥಿತಿ ಇನ್ನೂ ಹಿಂದುಳಿದವರ ಸ್ಥಿತಿಯಂತೆಯೇ ಆಗಿದೆ. ಇನ್ನೂ ಮಂಡಾದರೂ ಪಿ ಡಬ್ಲ್ಯು ಡಿ ರೋಡುಗಳನ್ನು ಇಲ್ಲ ಹೆಚ್ಚು ತೆಗೆದುಕೊಳ್ಳಲು ತಕ್ಕ ಕ್ರಮ ತೆಗೆದು ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರತಿಯೊಂದು ಕಡೆ ಇರುವ ನೀರಾವರಿ ಕಾಲುವೆಯಲ್ಲಿ ಇಲ್ಲಿರುವ ಭೂಮಿಗಳ ಗುಣವನ್ನು ಉಳಿಸಲು ಅನುಕೂಲವಾಗುವಂತೆ ವಾಟರು ಡ್ರೈ ಸೇಜು ಎಂದು ಮಾಡುವುದು ಬಹು ಮುಖ್ಯವಾದುದು. ಪ್ರತಿಯೊಂದು ಸರ್ವೇನಂಬರು ಜಮೀನಿನಲ್ಲೂ ವಾಟರು ಡ್ರೈನೇಜು ಇರುವಂತೆ ಇಲ್ಲಿರುವ ರೈತರಿಗೆ ಮಾಡಿಸಿ ಕೊಟ್ಟರೆ ಭೂಮಿ ಹಾಳಾಗದೆ ಉಳಿಯಲು ಅನುಕೂಲವಾಗುತ್ತದೆ. ವಾಟರು ಡ್ರೇನೇಜು ಮಾಡದೇ ಹಾಗೆ ಬಿಟ್ಟರೆ ರೈತರ ಜಮೀನು ಹಾಳಾಗಲು ಅವಕಾಶವಾಗುತ್ತದೆ. ಇದಕ್ಕಾಗಿ ಸರಕಾರದವರು ಎಲ್ಲ ಕಡೆಗಳಲ್ಲೂ ವಾಟರು ಡ್ರೇನೇಜನ್ನು ಪ್ರೊವೈಡು ಮಾಡಬೇಕೆಂದು ಹೇಳುತ್ತೆನೆ ಮತ್ತು ಆ ರೀತಿ ಸರಕಾರ ಮಾಡುತ್ತದೆ ಎನ್ನುವ ನಂಬಿಕೆಯನ್ನು ವ್ಯಕ್ತ ಮಾಡುತ್ತೇನೆ. ಇನ್ನೂ ಡಿ ಸಿ ಡಬ್ಲ್ಯು ಡೆವಲಪ್‌ಮೆಂಟು ಸ್ಕೀಂ ಎಂದು ಸುಮಾರು ೨೨ ಸಾವಿರ ಎಕರೆ ಮಾಡಬೇಕೆಂದು ಹೇಳಿ ಇದಕ್ಕೆ ಸಾಲವಾಗಿ ಎ ಆರ್ ಸಿ ಸ್ಕೀಂ ಮೂಲಕ ಸರಕಾರ ಸಹಾಯ ಮಾಡುತ್ತಿದೆ. ಇದಕ್ಕೆ ಸರಕಾರ ಸುಮಾರು ಎರಡುವರೆ ಕೋಟಿಯವರೆಗೆ ಕೊಟ್ಟರು ಸಹ ಇದು ಸಾಲುತ್ತಿಲ್ಲ. ಇದಕ್ಕೆ ಇನ್ನೂ ರೈತರು ಐದು ಲಕ್ಷ ಕೊಡಬೇಕೆಂದು ಹೇಳಿದರೂ ಅದನ್ನು ಅವರಿಗೆ ಕೊಡಲು ಶಕ್ತಿ ಇಲ್ಲ. ಇದಕ್ಕಾಗಿ ಇಲ್ಲಿ ವಾಟರು ರೇಟನ್ನು ಮಾಫಿ ಮಾಡಬೇಕೆಂದು ಕೇಳಿದಾಗ ಮುಖ್ಯ ಮಂತ್ರಿಗಳು ಬಳ್ಳಾರಿಗೆ ಬಂದು ಅಲ್ಲೇ ಸುಮಾರು ೮-೧೦ ಲಕ್ಷದಷ್ಟು ಹಣವನ್ನು ಮಾಫಿ ಮಾಡಿಸಿಕೊಟ್ಟರು ಆದರೆ ಇಲ್ಲಿರುವ ಕಾಲುವೆಗೆ ಮಳೆ ಇಲ್ಲದೇ ನೀರೇ ಬಾರದೆ ಜನರಿಗೆ ತೊಂದರೆಯಾಗಿರುವಾಗ ಇಲ್ಲಿನ ರೈತರು ವಾಟರು ರೇಟು ಕೊಡುವುದಕ್ಕಾಗುವುದಿಲ್ಲ. ಇದಕ್ಕಾಗಿ ಸರಕಾರ ಮುಂದೆ ಬಂದು ರೈತರಿಗೆ ವಾಟರು ರೇಟು ಕೊಡುವುದನ್ನು ಮಾಫಿ ಮಾಡಿ ಇದನ್ನು ತಪ್ಪಿಸಬೇಕೆಂದು ಕೇಳುತ್ತೆನೆ. ಇನ್ನು ಮೈನರ್ ಇರಿಗೇಷನ್ ಬಗ್ಗೆ ಹೇಳಬೇಕಾದರೆ ನಮ್ಮ ಕಡೆಯಲ್ಲಿ ಎಷ್ಟೋ ಕಡೆ ಇರುವ ಹಳ್ಳಗಳಲ್ಲಿ ನೀರು ನಿಂತಿರುತ್ತವೆ. ಇದರಿಂದ ಪ್ರತಿಯೊಂದು ಕಡೆಯಲ್ಲೂ ಸುಮಾರು ೮-೧೦ ಕುಸೆಕ್ಸ್ ವಾಟರು ವೇಸ್ಟ್ ಆಗುತ್ತಿರುತ್ತದೆ. ಇದಕ್ಕೆ ಮೈನರು ಇರಿಗೇಷನ್ ಮೂಲಕ ಯಾವುದಾ ದರೂ ಸ್ಕೀಂ ತೆಗೆದುಕೊಳ್ಳಬೇಕೆಂದು ಇಲ್ಲಿನ ಅಸಿಸ್ಟೆಂಟು ಇಂಜಿನೀಯರವರಿಗೆ ಹೇಳಿದರೆ ಇದು ಪ್ರಾಜೆಕ್ಟ್ ಏರಿಯ, ಪ್ರಾಜೆಕ್ಟ್ ಏರಿಯಾದಿಂದ ಕ್ಲಿಯರೆನ್ಸ್ ಬರದೆ ಯಾವ ಸ್ಕೀಂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳುತಾರೆ. ನೀರು ಸಿಕ್ಕಿದ್ದರೆ ಅದನ್ನು ಉಪಯೋಗ ಮಾಡಿ ಕೊಳ್ಳಬೇಕು ಎಂದು ಆಸೆ ಇರುತ್ತದೆ. ಇದಕ್ಕಾಗಿ ಸರಕಾರ ಯಾವ ರೀತಿಯಿಂದಲಾದರೂ ಅನುಕೂಲ ಮಾಡಿಕೊಡಬೇಕು. ಇದು ಸರಕಾರದ ಜವಾಬುದಾರಿ. ಇದನ್ನು ಸರಕಾರ ಪರಿಶೀಲಿಸಬೇಕು ಎಂದು ಬೇಡಿಕೊಳ್ಳುತ್ತೇನೆ. ಇನ್ನು ಲಿಫ್ಟ್ ಇರಿಗೇಷನ್ ನಮ್ಮ ಕಡೆ ಮಾಡಲು ಇತ್ತೀಚೆಗೆ ಸರಕಾರದವರು ಇದನ್ನು ಕೋಆಪರೇಟಿವ್ ಬೇಸಿಸ್ ಮೇಲೆ ಮಾಡಬೇಕೆಂದು ಮಾಡಿರುವುದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಈ ರೀತಿ ಸರಕಾರ ನಿರ್ಣಯ ಮಾಡಿರುವುದು ತುಂಬಾ ದುಃಖಕರವಾದ ಸಂಗತಿ. ಕೋಆಪರೇಟೀವ್ ಬೇಸಿಸ್ ಮೇಲೆ ಎಲ್ಲ ಕಡೆಯಲ್ಲೂ ಮಾಡಲು ರೈತರಿಗೆ ಸಾಧ್ಯವಾಗುವುದಿಲ್ಲ. ಎಲ್ಲಿ ಸಾಧ್ಯವೋ ಅಲ್ಲಿ ಕೋಆಪರೇಟೀವ್ ಬೇಸಿಸ್ ಮೇಲೆ ಮಾಡಬಹುದು. ಇಲ್ಲದೇ ಇದ್ದರೆ ಸರಕಾರವೇ ಯಾವುದಾದರೂ ಒಂದು ಸ್ಕೀಂ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಉಡಾಳ್ ಗ್ರಾಮದಲ್ಲಿ ಸುಮಾರು ಮೂರೂವರೆ ಲಕ್ಷದಷ್ಟು ಖರ್ಚು ಮಾಡಿದರೆಇಲ್ಲಿ ಸುಮಾರು ೧೫೦೦ ರಿಂದ ೧೮೦೦ ಎಕರೆಗಳಷ್ಟು ಭೂಮಿಗೆ ಸಹಾಯ ಮಾಡಲು ಲಿಫ್ಟ್ ಇರಿಗೇಷನ್ ಸೌಕರ್ಯ ಒದಗಿಸಿಕೊಡಬೇಕು. ಇದನ್ನು ಸರಕಾರದ ವತಿಯಿಂದಾಗಲೀ ಇಲ್ಲವೇ ಕೋಆಪರೇಟಿವ್ ಬೇಸಿಸ್ ಆಗಲೀ ಯಾವದಾದರೊಂದು ರೀತಿಯಲ್ಲಿ ಸ್ಕೀಂ ಮಾಡಿ ಸಹಾಯ ಮಾಡಬೇಕೆಂದು ಸರಕಾರವನ್ನು ಒತ್ತಾಯ ಮಾಡುತ್ತೇನೆ. ಅದೇ ಪ್ರಾಜೆಟ್ ಏರಿಯಾದಲ್ಲಿ ಹೈನಾಳ್ ಎಂಬ ಗ್ರಾಮ ಇದೆ. ಇದು

ಪೂರ್ತಿಯಾಗಿ ಸೀಫೇಜ್‌ನಿಂದ ಅಫೆಕ್ಟ್ ಆಗಿದೆ. ಇದನ್ನು ಸರ್ಕಾರದ ಗಮನಕ್ಕೆ ತಂದರೂ ಕೂಡ ಯಾವ ಕ್ರಮವನ್ನು ಸಹ ತೆಗೆದುಕೊಂಡಿಲ್ಲ. ಅಲ್ಲಿರತಕ್ಕಂಥ ಒಂದು ಹಳ್ಳವನ್ನು ಬಂದ್ ಮಾಡಿ ಎಂದರೂ ಕೂಡ ಮಾಡಿಲ್ಲ. ಅಥವಾ ಆ ಗ್ರಾಮವನ್ನೇ ಬೇರೆ ಕಡೆಗೆ ಸ್ಥಳಾಂತರ ಮಾಡಿ ಎಂದು ಕೇಳಿದರೆ ಆ ಬಗ್ಗೆಯೂ ಕೂಡ ಸರ್ಕಾರ ಆಲೋಚನೆ ಮಾಡಿಲ್ಲ. ಆ ಗ್ರಾಮದ ಜನರು ಮಳೆಗಾಲದಲ್ಲಿ ಗಂಡಾಂತರ ಪರಿಸ್ಥಿತಿಯಲ್ಲಿ ಇರುತ್ತಾರೆ. ಮತ್ತು ಭಯಕ್ಕೆ ತುತ್ತಾಗುತ್ತಿದ್ದಾರೆ. ಆದಷ್ಟು ಜಾಗ್ರತೆ ಸರ್ಕಾರದವರು ಈ ಗ್ರಾಮದ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

ಇನ್ನೂ ವಿದ್ಯುಚ್ಛಕ್ತಿಯ ಬಗ್ಗೆ ಹೇಳುವುದಾದರೆ ನಮ್ಮ ಸಿರಗುಪ್ಪೆ ತಾಲ್ಲೂಕ್‌ನಲ್ಲಿ ೧೮–೨೦ ಹಳ್ಳಿಗಳಿಗೆ ಮಾತ್ರ ವಿದ್ಯುಚ್ಛಕ್ತಿ ಒದಗಿಸಿದ್ದಾರೆ. ಚೀಫ್ ಇಂಜಿನಿಯರ್ ಅವರು ಮತ್ತು ವಿದ್ಯುಚ್ಛಕ್ತಿಯ ಇಲಾಖೆಗೆ ಸಂಬಂಧಪಟ್ಟಂತೆ ಇರುವ ಉಪಮಂತ್ರಿಗಳು ಹೆಚ್ಚಿನ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸುತ್ತೇವೆಂದು ಹೇಳಿದ್ದಾರೆ. ಆದರೆ ಈ ವರ್ಷದಲ್ಲಿ ನಮ್ಮ ಭಾಗದಲ್ಲಿ ಒಂದು ಹಳ್ಳಿಗೂ ಕೂಡ ಒದಗಿಸಿಲ್ಲ. ಇದೇ ಪರಿಸ್ಥಿತಿ ಮುಂದುವರಿಗೆ ಆ ಭಾಗದಿಂದ ಆಯ್ಕೆಯಾದಂಥ ಸದಸ್ಯರಿಗೂ ತೊಂದರೆಯಾಗುವುದಲ್ಲದೆ ಅಲ್ಲಿಯ ಜನರಿಗೆ ಸರ್ಕಾರದ ಮೇಲೆ ಅಭಿಮಾನ ಕುಂದುತ್ತದೆ ಎಂದು ಹೇಳುತ್ತೇನೆ. ಈ ವಿಚಾರದಲ್ಲಿ ಸರ್ಕಾರದವರು ಒಂದು ನಿರ್ದಿಷ್ಟವಾದ ಪ್ರೊಗ್ರಾಮ್ ಹಾಕಿಕೊಂಡು ಅವಧಿ ಮುಗಿಯುವುದರೊಳಗೆ ಆ ಪ್ರೊಗ್ರಾಮ್‌ನಂತೆ ಕೆಲಸ ಮಾಡಬೇಕು ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಪಿ. ಬೋರಯ್ಯ (ಬನ್ನೂರು) :—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಇರತಕ್ಕಂಥ ಬೇಡಿಕೆಗಳನ್ನು ವಿರೋಧಮಾಡುತ್ತಾ ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಚಿಸುತ್ತೇನೆ. ಕಾವೇರಿ ನದಿಯ ಕೆಲಸಭಾಗದ ನಾಲೆಗಳು ಪುರಾತನಕಾಲದವಾಗಿರುವುದರಿಂದ ಹಳೆಯದಾಗಿ ಪದೇ ಪದೇ ಒಡೆದು ಹೋಗುತ್ತಿವೆ ಇದರಿಂದ ಆ ಭಾಗದ ರೈತರಿಗೆ ತೊಂದರೆಯಾಗುತ್ತಿದೆ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದರೂ ಕೂಡ ಈ ಬಗ್ಗೆ ಹೆಚ್ಚಿನ ಗಮನ ಕೊಡುತ್ತಿಲ್ಲ. ಈ ವಿಚಾರದಲ್ಲಿ ಒಂದು ಕಾಂಪ್ರಹೆನ್ಸಿವ್ ಎಸ್ಟಿಮೇಟ್ ಮಾಡಿ ಒಂದು ಖಾಯಂ ವ್ಯವಸ್ಥೆ ಮಾಡಬೇಕೆಂದು ಅನೇಕ ಸಲ ಸರ್ಕಾರಕ್ಕೆ ಕಾಗದ ಬರೆದು ಕೇಳಿದ್ದೇನೆ ಮತ್ತು ಈ ಸಭೆಯಲ್ಲಿ ಕೂಡ ಅನೇಕ ಸಲ ಹೇಳಿದ್ದೇನೆ, ಆದರೂ ಕಾರ್ಯಗತವಾಗಿಲ್ಲ. ಈ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಚಿಕ್ಕದೇವರಾಜ ಸಾಗರನಾಲ ಮತ್ತು ರಾಮಸ್ವಾಮಿ ನಾಲದ ಏರಿಗಳು ಒಡೆದುಹೋದ್ದರಿಂದ ಅವುಗಳ ದುರಸ್ತಿ ಮಾಡಿ ನೀರು ಬಿಡುವುದಕ್ಕೆ ಒಂದು ತಿಂಗಳು ನಿಧಾನವಾದ್ದರಿಂದ ಬಲಿತ ಪೈರಿನ ವ್ಯವಸಾಯದಿಂದ ಕುಂಬ ನಷ್ಟವಾಯಿತು. ಇದರಿಂದ ಸುಮಾರು ೫೦ ಲಕ್ಷ ರೂಪಾಯಿಗಳವರೆಗೆ ನಷ್ಟವಾಯಿತು. ನನ್ನ ಜಮೀನಿನಲ್ಲಿಯೂ ಕೂಡ ಎಕರೆಗೆ ೪೦೦ ರೂಪಾಯಿಗಳ ಪ್ರಕಾರ ಲುಕ್ಸಾನಾಯಿತು. ಈ ಎರಡು ನಾಲೆಗಳಿಂದ ನೀರು ಬಿಡುವುದು ಒಂದು ತಿಂಗಳು ನಿದಾನವಾದ್ದರಿಂದ ಸುಮಾರು ೧೫-೧೬ ಸಾವಿರ ಎಕರೆಗೆ ನೀರು ಸಾಲದೆ ರೈತರಿಗೆ ನಷ್ಟವಾಯಿತು. ಸಾಮಾನ್ಯ ರೈತರಿಗೆ ಈ ರೀತಿ ನಷ್ಟವಾದರೆ ಅವರು ಜೀವನವನ್ನು ಸರಿದೂಗಿಸುವುದು ಬಹಳ ಕಷ್ಟವಾಗುತ್ತದೆ. ಈ ವಿಚಾರದ ಬಗ್ಗೆ ಸರ್ಕಾರದವರು ಗಮನಕೊಟ್ಟು ಅವರಿಗೆ ತಕ್ಕ ಪರಿಹಾರವನ್ನು ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಹಸಿರು ಗೊಬ್ಬರದ ಪೈರನ್ನು ಬೆಳೆಯುವುದಕ್ಕಾಗಿ ರಾಮಸ್ವಾಮಿ ನಾಲದಲ್ಲಿ ಬೇಸಿಗೆ ನೀರನ್ನು ಬಿಟ್ಟಿಲ್ಲ ಆದೇ ರಾಜಪರಮೇಶ್ವರಿ ನಾಲದಲ್ಲಿ ನೀರನ್ನು ಬಿಟ್ಟಿದ್ದಾರೆ. ಇದಕ್ಕೆ ಕಾರಣ ಗೊತ್ತಿಲ್ಲ. ರಾಜಪರಮೇಶ್ವರಿ ನಾಲದ ಬೈಲಿನಲ್ಲಿ ಮಂತ್ರಿಗಳ ಮತ್ತು ಶಾಸಕರ ಜಮೀನು ಇರುವುದರಿಂದ ನೀರನ್ನು ಬಿಟ್ಟು ರಾಮಸ್ವಾಮಿ ನಾಲದ ಕಡೆ ನಮ್ಮ ಜಮೀನು ಇರುವುದರಿಂದ ನೀರನ್ನು ಬಿಟ್ಟಿಲ್ಲವೆಂದು ಕಾಣುತ್ತದೆ. ಈ ರೀತಿ ವ್ಯತ್ಯಾಸ ಮಾಡಿದರೆ ದೇಶಕ್ಕೆ ಕ್ಷೇಮವಾಗುವುದಿಲ್ಲವಾದ್ದರಿಂದ ಸರ್ಕಾರದವರು ಈ ಕಡೆ ತೀವ್ರವಾದ ಗಮನ ಕೊಟ್ಟು ರಾಮಸ್ವಾಮಿ ನಾಲೆಯಲ್ಲಿಯೂ ಕೂಡ ನೀರು ಬಿಡುವಂತೆ ಏರ್ಪಾಟು ಮಾಡಬೇಕು.

ಚೇರ್‌ಮನ್‌ರವರ ಆ ನಾಲೆಯಲ್ಲಿಯೂ ನೀರನ್ನು ಬಿಡುತ್ತಾರೆ.

ಶ್ರೀ ಟಿ. ಪಿ. ಬೋರಯ್ಯ :—ವಿಶ್ವೇಶ್ವರಯನಾಲ ನೀರನ್ನು ಸರಿಯಾಗಿ ಹಂಚಿಕೆ ಮಾಡಿ ಕೊಡದಿರುವುದರಿಂದ ಕೊನೆಯ ಆಚ್ಚುಕಟ್ಟುದಾರರಿಗೆ ತೊಂದರೆಯಾಗುತ್ತಿದೆ ಇದನ್ನು ಸರ್ಕಾರದ ಗಮನಕ್ಕೆ ತಂದರೂ ಕೂಡ ಪ್ರಯೋಜನವಾಗಿಲ್ಲ ಇದೇ ರೀತಿ ನನ್ನ ಕ್ಷೇತ್ರದಲ್ಲಿರುವ ಕೆಳಮಟ್ಟದ ನಾಲೆಯಲ್ಲಿ ಸಾಕಷ್ಟು ನೀರೆ ಇರುವುದಿಲ್ಲ ಆಧಿಕಾರಿಗಳನ್ನು ಕೇಳಿದರೆ ಇರತಕ್ಕಂಥ ನೀರನ್ನು ಸರಿಯಾಗಿ ಎಲ್ಲರಿಗೂ ಹಂಚಿಕೆಮಾಡುವುದು ಆದರೆ ರಾಜಕೀಯ ಜನರು ಪ್ರಭಾವದಿಂದ ಸರಿಯಾಗಿ ಹಂಚಿಕೆ ಮಾಡುವುದು ಕಷ್ಟವಾಗಿದೆ ಎಂದು ಪದೇ ಪದೇ ಹೇಳುತ್ತಿದ್ದಾರೆ. ಇಂತಹ ವಿಚಾರದಲ್ಲಿ ಆಡಳಿತ ಪಕ್ಷದವರು ಕೈಹಾಕದೆ ಎಲ್ಲರಿಗೂ ನೀರು ಸಮರ್ಪ

ಕವಾಗಿ ಸಿಗುವಂತೆ ಏರ್ಪಾಡು ಮಾಡಬೇಕೆಂದು ಈ ಸಮಯದಲ್ಲಿ ಹೇಳಲು ಬಯಸುತ್ತೇನೆ. ಇದೇ ನಾಲೆಯ ಮೇಲ್ಗಂಡಿಯಲ್ಲಿ ಲಿಫ್ಟ್ ಇರಿಗೇಷನ್ ಪಂಪ್‌ಸೆಟ್ಟುಗಳನ್ನು ಮತ್ತು ಡೀಸೆಲ್ ಪಂಪ್‌ಸೆಟ್ಟುಗಳನ್ನು ಕೆಲವರು ಹಾಕಿಕೊಂಡು ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಉಪಯೋಗ ಮಾಡುತ್ತಿರುವುದರಿಂದ ಕೊನೆಯ ಆಚ್ಚುಕಟ್ಟುದಾರರಿಗೆ ನೀರು ಸಿಗುವುದಕ್ಕೆ ಬಹಳ ತೊಂದರೆಯಾಗಿದೆ. ಮೇಲ್ಗಂಡಿಯಲ್ಲಿರುವವರು ಹೆಚ್ಚಿನ ನೀರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳು ಅವರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ಇದನ್ನು ಸರ್ಕಾರದವರು ಪರಿಶೀಲನೆ ಮಾಡಿ ಮೇಲ್ಭಾಗದವರು ಹೆಚ್ಚಿನ ನೀರನ್ನು ಬಳಸುವುದನ್ನು ತಡೆಗಟ್ಟಿ ಕೊನೆಯ ಹಂತದ ರೈತರಿಗೂ ಕೂಡ ನೀರು ಬಿಡುವುದಕ್ಕೆ ವ್ಯವಸ್ಥೆ ಮಾಡಬೇಕು. ವಿಶ್ವೇಶ್ವರಯ್ಯನವರಿಂದ ತುರುಗನೂರು ಬ್ಯಾಂಚಿನ ಇಲೆವೆನ್ತ್ ಡಿಸ್ಟ್ರಿಬ್ಯೂಟರಿ ನಾಲಾ ಒಂದನ್ನು ತೆಗೆಯಬೇಕು ಎಂದು ೧೫ ವರ್ಷಗಳಿಂದ ಕೇಳುತ್ತಿದ್ದೇವೆ. ಆ ವಿಚಾರದಲ್ಲಿ ನಾನು ಅನೇಕ ಕಾಗದಗಳನ್ನು ಸಹ ಬರೆದಿದ್ದೇನೆ. ಆದರೆ ಆ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಈಗ ಇರತಕ್ಕಂಥ ನಾಲೆಗಳಿಗೆ ಬಿಡುವುದಕ್ಕೆ ನೀರು ಸಾಕಷ್ಟು ಇಲ್ಲದಿರುವುದರಿಂದ ಹೊಸ ನಾಲೆಯನ್ನು ತೆಗೆಯುವುದಕ್ಕೆ ಕಷ್ಟವಾಗುತ್ತದೆಂದು ಹೇಳುತ್ತಾರೆ. ಇಲಾಖೆಯವರು ಏನಾದರೂ ಈ ನಾಲೆಯನ್ನು ತೆಗೆದು ನೀರನ್ನು ಬಿಟ್ಟುಕೊಳ್ಳುತ್ತೇವೆಂದು ಆ ಭಾಗದ ಜನರು ಮನಸ್ಸು ಮಾಡಿದ್ದಾರೆ. ಕೈಗಾರಿಕಾ ಮಂತ್ರಿಗಳು ಮತ್ತು ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಆ ಏರಿಯಾದಲ್ಲಿ ಸಂಚಾರ ಮಾಡುವಾಗ ಅಲ್ಲಿಯ ಜನರು ಈ ಬಗ್ಗೆ ಮನವಿ ಮಾಡಿಕೊಂಡಾಗ ಮಂತ್ರಿಗಳು ಪರಿಶೀಲನೆ ಮಾಡುತ್ತೇವೆಂದು ಹೇಳಿದರೆ ಹೊರತು ಆ ಬಗೆ ಯಾವ ಭರವಸೆಯನ್ನು ಸಹ ಕೊಡಲಿಲ್ಲ. ಸರ್ಕಾರದವರು ಭರವಸೆ ಕೊಟ್ಟು ಆ ನಾಲೆಯನ್ನು ತೆಗೆಯ ಬೇಕೆಂದು ಕೇಳಿಕೊಳ್ಳುತ್ತೇನೆ.

ಲೋಕೋಪಯೋಗಿ ಇಲಾಖೆಯವರು ತಮ್ಮ ವಶಕ್ಕೆ ರಿಪೇರಿ ಮಾಡಿಸಲು ಮೈಸೂರು ಜಿಲ್ಲೆಯಲ್ಲಿ ಕೆಲವು ಸ್ಥಳೀಯ ಸಂಸ್ಥೆಗಳಿಗೆ ಸೇರಿದಂಥ ರಸ್ತೆಗಳನ್ನು ತೆಗೆದುಕೊಂಡು ಅವುಗಳ ಬಗ್ಗೆ ಕಾಂಪ್ರಹೆನ್ಸಿವ್ ಎಸ್ಟಿಮೇಟ್ ಮಾಡಿಸಿ ರಿಪೇರಿ ಮಾಡಿಸಿದ್ದಾರೆ. ಮತ್ತೆ ಕೆಲವು ರೋಡ್‌ಗಳಿಗೆ ಮಣ್ಣನ್ನು ಸಹ ಹಾಕಿಸುವ ಪ್ರಯತ್ನವನ್ನೂ ಸಹ ಮಾಡುತ್ತಿಲ್ಲ. ಈ ರೀತಿ ವ್ಯತ್ಯಾಸ ಮಾಡದೆ ಎಲ್ಲಾ ರೋಡ್‌ಗಳನ್ನು ರಿಪೇರಿ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ಹೇಳುವುದಾದರೆ ಮೈಸೂರು ರಾಜ್ಯದಲ್ಲಿ ವಿದ್ಯುಚ್ಛಕ್ತಿ ಮಂಡಲಿಯು ಇರುವ ಇವತ್ತು ಅನೇಕ ಹಳ್ಳಿಗಳಿಗೆ ದೀಪವನ್ನು ಕೊಟ್ಟಿದ್ದಾರೆ ಮತ್ತು ಐ. ಪಿ. ಸೆಟ್ಟುಗಳಿಗೆ ಕೂಡ ವಿದ್ಯುಚಕ್ತಿ ಕೊಡುತ್ತಿದ್ದಾರೆ. ಆದೇ ರೀತಿ ಟ್ರಾನ್ಸ್‌ಫಾರ್ಮರ್ಸ್‌ನ್ನು ಹೆಚ್ಚು ಮಾಡುತ್ತಿಲ್ಲ. ಇದರಿಂದ ದೀಪದ ಪ್ರಕಾಸ ಕಡಿಮೆಯಾಗುತ್ತಿರುವುದಲ್ಲದೆ ಪಂಪ್‌ಸೆಟ್ಟುಗಳ ಮೋಟಾರುಗಳು ಸಹ ಬರ್ನ್‌ಆಗಿ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ವರ್ಷದಲ್ಲಿ ಎರಡು ಮೂರು ಸಲ ಮೋಟಾರುಗಳು ಬರ್ನ್‌ಆಗಿ ರಿಪೇರಿಗಾಗಿ ರೈತರು ಹಣ ಖರ್ಚು ಮಾಡಬೇಕಾಗಿದೆ. ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದರೂ ಯಾವ ಕ್ರಮವನ್ನೂ ಸಹ ತೆಗೆದುಕೊಂಡಿಲ್ಲ. ಇಲಾಖೆಯವರನ್ನು ಕೇಳಿದರೆ ಟ್ರಾನ್ಸ್‌ಫಾರ್ಮರ್‌ಗಳಲ್ಲಿ ಶಕ್ತಿ ಕಡಿಮೆ ಇರುವುದರಿಂದ ಈ ರೀತಿಯಾಗುತ್ತದೆ. ಹೆಚ್ಚಿನ ಶಕ್ತಿಯುಳ್ಳ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಿದರೆ ಈ ಕಷ್ಟ ಪರಿಹಾರವಾಗುತ್ತದೆಂದು ಹೇಳುತ್ತಾರೆ. ಆದ್ದರಿಂದ ಈ ಕಡೆಗೆ ಸರ್ಕಾರದವರು ಹೆಚ್ಚಿನ ಗಮನ ಕೊಟ್ಟು ಇದನ್ನು ಸರಿಪಡಿಸಬೇಕು ಟ್ರಾನ್ಸ್‌ಫಾರ್ಮರ್‌ಗಳ ಶಕ್ತಿ ಹೆಚ್ಚು ಕಡಿಮೆಯಾಗುವುದರಿಂದ ಬೀದಿ ದೀಪಗಳು ಬರ್ನ್ ಆಗುತ್ತಿವೆ. ಇದರಿಂದ ಪುರಾಯಿತಿಯವರಿಗೆ ಬಲ್ಬುಗಳ ಬಿಲ್ಲಿನ ಭಾರವನ್ನು ಹೊರುವುದು ಕಷ್ಟವಾಗಿದೆ. ಬಲ್ಬುಗಳು ಸರಿಯಾಗಿ ಉರಿಯುವಂತೆ ಏರ್ಪಾಡು ಮಾಡಬೇಕು. ಹೊಸದಾಗಿ ಪಂಪ್‌ಸೆಟ್ಟುಗಳನ್ನು ಹಾಕಿಸಿಕೊಂಡಿರುವವರಿಗೆ ಪವರ್ ಕೊಡುವುದಕ್ಕೆ ಮೆಟೀರಿಯಲ್ಸ್ ಇಲ್ಲ ಎಂದು ಹೇಳುತ್ತಾರೆ ಇದನ್ನು ಸಹ ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ನನಗೆ ಮಾತನಾಡಲು ಕಾಲಾವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಲೀಲಾವತಿರೈ (ಬಂಟ್ವಾಳ) — ಮಾನ್ಯ ಅಧ್ಯಕ್ಷರೇ, ಇವೊತ್ತು ಈ ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗಳ ಬಗ್ಗೆ ನಾನು ಕೆಲವೊಂದು ಸಲಹೆಗಳನ್ನು ಕೊಡಬೇಕೆಂದು ನಿಂತಿದ್ದೇನೆ. ಮೊದಲನೆಯದಾಗಿ ರಸ್ತೆಗಳ ಬಗ್ಗೆ ಕೆಲವೊಂದು ಮಾತುಗಳನ್ನು ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಕೆಲವು ವರ್ಷಗಳ ಹಿಂದೆ ಸರ್ಕಾರದವರು ರೂರಲ್ ಕಮ್ಯುನಿಕೇಷನ್ ರಸ್ತೆಗಳನ್ನು ಎಲ್ಲೆಲ್ಲಿ ತೆಗೆದುಕೊಂಡಿದ್ದಾರೆ ಎಂಬುದು ಸರ್ಕಾರದವರಿಗೆ ಹಾಗೂ ಈ ಮನೆಯ ಸದಸ್ಯರಿಗೆ ಗೊತ್ತಿದೆ. ಒಂದೊಂದು ತಾಲ್ಲೂಕಿನಲ್ಲಿ ಕಡ್ಡಾಯವಾಗಿ ಇಷ್ಟು ಮೈಲಿ ರಸ್ತೆಯನ್ನು ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿ ಎಷ್ಟೋ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ರಸ್ತೆಗಳನ್ನು ಎಲ್ಲಾ ತಾಲ್ಲೂಕುಗಳಲ್ಲಿಯೂ ಮಾಡಿಸಿದ್ದಾರೆ. ಆದರೆ ಇವೊತ್ತಿನ ದಿವಸ ನಮ್ಮ ಜಿಲ್ಲೆಯಲ್ಲಿ ಅನೇಕ ರಸ್ತೆಗಳು ಉಪಯೋಗಕ್ಕೆ ಬಾರದ ಸ್ಥಿತಿಯಲ್ಲಿವೆ. ಈಗ

ಇವನ್ನೆಲ್ಲಾ ಎಂದರೆ ರೂರಲ್ ಕಮ್ಯುನಿಕೇಷನ್ ರೋಡುಗಳನ್ನು ತಾಲ್ಲೂಕುಬೋರ್ಡುಗಳಿಗೆ ವಹಿಸಿ ಅವರು ರಸ್ತೆಗಳ ಕೆಲಸಕ್ಕೆ , ವಹಿಸಿದ ವೆಚ್ಚದ ಪೈಕಿ ಅರ್ಧಾಂಶವನ್ನು ಎಂದರೆ ಮೈಲಿಯೊಂದಕ್ಕೆ ೧೫೦ ರೂಪಾಯಿಗಳನ್ನು ಸರ್ಕಾರದವರು ಕೊಟ್ಟು ಆ ರಸ್ತೆಗಳ ಕೆಲಸವನ್ನು ತಾಲ್ಲೂಕು ಬೋರ್ಡುಗಳಿಗೆ ಒಪ್ಪಿಸುವ ಯೋಚನೆ ಸರ್ಕಾರಕ್ಕೆ ಇದೆ. ಅದನ್ನು ತಾಲ್ಲೂಕು ಬೋರ್ಡುಗಳಿಗೆ ಒಪ್ಪಿಸಬೇಕೆಂದು ಸರ್ಕಾರದವರು ಖಂಡಿತ ಮಾಡಿಕೊಂಡಿದ್ದಾರೆ. ಆ ರೀತಿ ಸರ್ಕಾರದವರು ರೂರಲ್ ಕಮ್ಯುನಿಕೇಷನ್ ರೋಡುಗಳನ್ನು ತಾಲ್ಲೂಕು ಬೋರ್ಡಿನವರಿಗೆ ವಹಿಸಿ ಅವರಿಗೆ ಒಂದು ಮೈಲಿ ರಸ್ತೆಗೆ ೧೫೦ ರೂಪಾಯಿಗಳನ್ನು ಕೊಟ್ಟರೆ ೩೦೦ ರೂಪಾಯಿಗಳಿಂದ ರಸ್ತೆಗಳನ್ನು ಮೈಂಟೇನ್ ಮಾಡುವುದಕ್ಕಾಗಲೀ, ರಿಪೇರಿ ಮಾಡುವುದಕ್ಕಾಗಲೀ ಸಾಧ್ಯವಾಗುವುದಿಲ್ಲ. ಇವೊತ್ತು ಹಳ್ಳಿಗಾಡುಗಳಲ್ಲಿರತಕ್ಕಂತ ರಸ್ತೆಗಳು ರೈತರ ಉಪಯೋಗಕ್ಕೆ ಬಾರದಂತಹ ರಸ್ತೆಗಳಾಗಿವೆ. ಕೆಲವು ಹಿಂದುಳಿದ ಪ್ರದೇಶಗಳಲ್ಲಿ ಮಳೆ ಜಾಸ್ತಿ ಆಗುತ್ತಾ ಇರುವುದರಿಂದ ರಸ್ತೆಗಳೆಲ್ಲಾ ಕಡಿದು ಹೋಗಿ ಅವು ರೈತರ ಉಪಯೋಗಕ್ಕೆ ಬರದಂತಾಗಿವೆ. ಆದ್ದರಿಂದ ಸರ್ಕಾರದವರು ಒಂದು ವರ್ಷಕ್ಕೆ ೨೫ಮೈಲಿ ಗ್ರಾಮಾಂತರ ರಸ್ತೆಗಳ ನಿರ್ಮಾಣವನ್ನು ಕೈಗೊಂಡು ಪ್ರತಿ ತಾಲ್ಲೂಕಿನಲ್ಲಿಯೂ ಪಕ್ಕ ರಸ್ತೆಯನ್ನು ಮಾಡಿಕೊಟ್ಟು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ ಇದರಿಂದ ರೈತರು ತಾವು ಬೆಳೆದಂತಹ ದವಸ ಧಾನ್ಯಗಳನ್ನು ಹಳ್ಳಿಗಳಿಂದ ಪೇಟೆಗೆ ತರುವುದಕ್ಕೂ ಅನುಕೂಲವಾಗುತ್ತದೆ ಆದ್ದರಿಂದ ಸರ್ಕಾರದವರು ಇವನ್ನು ಗಮನದಲ್ಲಿಟ್ಟುಕೊಂಡು ಪ್ರತಿ ವರ್ಷ ಪ್ರತಿ ತಾಲ್ಲೂಕಿನಲ್ಲಿಯೂ ೨೫ ಮೈಲಿ ರಸ್ತೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಈ ರಸ್ತೆಗಳ ಕೆಲಸವನ್ನು ತಾಲ್ಲೂಕು ಬೋರ್ಡಿನವರಿಗೆ ವಹಿಸಬೇಕೆಂದು ಸರ್ಕಾರದವರು ಏನು ಆದೇಶವನ್ನು ಕೊಟ್ಟಿದ್ದಾರೆ ಇದು ಸರಿಯಲ್ಲ. ಈ ರಸ್ತೆಗಳ ಕೆಲಸವನ್ನು ಮಾಡುವುದಕ್ಕೆ ತಾಲ್ಲೂಕು ಬೋರ್ಡಿನಲ್ಲಿ ಹಣ ಇಲ್ಲ. ಆದ್ದರಿಂದ ಸರ್ಕಾರದವರೇ ಆ ರಸ್ತೆಗಳನ್ನು ತೆಗೆದುಕೊಂಡು ಒಂದು ವರ್ಷಕ್ಕೆ ಪ್ರತಿ ತಾಲ್ಲೂಕಿನಲ್ಲಿ ೨೫ ಮೈಲಿ ರಸ್ತೆ ಕೆಲಸವನ್ನು ತೆಗೆದುಕೊಂಡು ಪ್ರತಿವರ್ಷವೂ ಪಕ್ಕಾ ರಸ್ತೆಯನ್ನು ಮಾಡಿಕೊಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ನೀರಾವರಿ ಪ್ರದೇಶದಲ್ಲಿ ಹೋಗತಕ್ಕಂಥ ರಸ್ತೆಗಳು, ಹಾಗೂ ಮುಖ್ಯ ರಸ್ತೆಗಳು ಇವುಗಳ ಕೆಲಸವನ್ನು ಮಾಡಿಕೊಡಬೇಕು ನನ್ನ ತಾಲ್ಲೂಕಿನಲ್ಲಿ ಶ್ರೀಮಾನ್ ಇದಿನಬ್ಬ ಅವರು ಹೇಳಿದ ಮಾಣಿ ಉಲ್ಲಾಳ್ ರೋಡು ಕೆಲಸ ಮಾಡುವುದಕ್ಕೆ ೫೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಆ ಕೆಲಸ ಅರ್ಧಕ್ಕೆ ನಿಂತಿದೆ. ಇವಕ್ಕೆ ಕೇಂದ್ರ ಸರ್ಕಾರದವರು ೫೦ ಪರ್ಸೆಂಟ್ ಹಣವನ್ನು ಕೊಡಬೇಕು, ಆದನ್ನು ಅವರು ಕೊಟ್ಟಿಲ್ಲ. ರಿವೈಜ್ಡ್ ಎಸ್ಟಿಮೇಟಿನಲ್ಲಿ ೧೦-೨೦ ಲಕ್ಷ ರೂಪಾಯಿ ಈ ರಸ್ತೆಗೆ ಜಾಸ್ತಿ ಹಣ ಖರ್ಚಾಗುತ್ತದೆ. ಆದರಲ್ಲಿಯೂ ಕೇಂದ್ರ ಸರ್ಕಾರದಿಂದ ೫೦ ಪರ್ಸೆಂಟ್ ಹಣವನ್ನು ಕೊಡಬೇಕಾದ್ದನ್ನು ಕೊಟ್ಟಿಲ್ಲ. ಕೇಂದ್ರ ಸರ್ಕಾರದಿಂದ ಈ ರಸ್ತೆಗೆ ಬರಬೇಕಾದಂತಹ ೫೦ ಪರ್ಸೆಂಟ್ ಹಣ ಬರಲಿಲ್ಲ ಎಂದು ಆ ರಸ್ತೆಯ ಕೆಲಸವನ್ನು ನಿಲ್ಲಿಸಬೇಕೆಂದು ಸರ್ಕಾರದವರು ಆದೇಶವನ್ನು ಕೊಟ್ಟಿದ್ದಾರೆ. ಅದು ಸರಿಯಲ್ಲ. ಒಂದು ವೇಳೆ ಆ ರಸ್ತೆಗೆ ಕೇಂದ್ರ ಸರ್ಕಾರದವರು ಹಣವನ್ನು ಕೊಡದಿದ್ದರೂ ರಾಜ್ಯ ಸರ್ಕಾರದವರೇ ಇದಕ್ಕೆ ಹಣವನ್ನು ಕೊಟ್ಟು ಆ ರಸ್ತೆಯ ಕೆಲಸವನ್ನು ಪೂರ್ತಿ ಮಾಡಿಕೊಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆಯೇ ಉಲ್ಲಾಳ-ಪಾಣಿ ಮಂಗಳೂರು ರಸ್ತೆ ಬಹಳ ಮುಖ್ಯವಾದದ್ದು, ಈ ಒಂದು ರಸ್ತೆಯಲ್ಲಿ ಹೆವಿ ಟ್ರಾಫಿಕ್ ಇದೆ. ಇದು ಫರ್ಟಿಲೈಜರ್ ಫ್ಯಾಕ್ಟರಿಗೆ ಹೋಗತಕ್ಕಂಥ ರಸ್ತೆ. ಈ ರಸ್ತೆಯ ಕೆಲಸವನ್ನು ಮಾಡಿಸಬೇಕು. ಮಂಗಳೂರು ಹೈರೋಡ್ ಮಂಗಳೂರು-ಪಪಲಿಸಿಕರ್ ರೋಡು, ಈ ರಸ್ತೆ ಐರನ್ ವೋರ್ ಹೋಗುವ ರಸ್ತೆ ಇದರಲ್ಲಿ ಹೆವಿ ಟ್ರಾಫಿಕ್ ಇದೆ. ಈ ರಸ್ತೆಯ ಕೆಲಸವನ್ನು ತೆಗೆದುಕೊಂಡು ಮಾಡಿಸಬೇಕು. ಬಂಟವಾಳದಿಂದ ಮಂಗಳೂರಿಗೆ ಹೋಗತಕ್ಕಂಥ ರಸ್ತೆಯನ್ನು ಹಂತ ಹಂತವಾಗಿ ತೆಗೆದುಕೊಂಡು ಈ ರಸ್ತೆಯ ಕೆಲಸವನ್ನು ಪೂರೈಸಬೇಕು ಪಾಣಿ ಮಂಗಳೂರಿನಿಂದ ಉಳ್ಳಾಲಿಗೆ ಹೋಗತಕ್ಕ ರಸ್ತೆಯಲ್ಲಿ ಒಂದು ಬ್ರಿಡ್ಜು ಆಗಬೇಕು ಅದನು ಸರ್ಕಾರದವರು ಮಾಡಿಸಿಕೊಡಬೇಕು. ಈ ರಸ್ತೆ ನಾಡುರಸ್ತಾಗಿ ಉಪಯೋಗಕ್ಕೆ ಬಾರದಂತಾಗಿದೆ. ಈ ರಸ್ತೆಯನ್ನು ರಿಪೇರಿ ಮಾಡಿಸಿಕೊಡುವ ಬಗ್ಗೆ ಸರ್ಕಾರದವರು ತೀವ್ರ ಗಮನವನ್ನು ಕೊಡಬೇಕು. ನಮ್ಮ ಜಿಲ್ಲೆಯಲ್ಲಿ ಅನೇಕ ರಸ್ತೆಗಳು ಉಪಯೋಗಕ್ಕೆ ಬಾರದಂತಾಗಿವೆ. ಅವುಗಳನ್ನು ಹಂತ ಹಂತವಾಗಿ ತೆಗೆದುಕೊಂಡು ಆ ಕೆಲಸಗಳನ್ನು ಮಾಡಿ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ ನೀರಾವರಿ ವಿಷಯದಲ್ಲಿ ಹೇಳುವುದಾದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇಜರ್ ಇರಿಗೇಷನ್ ಯೋಜನೆಗಳನ್ನು ತೆಗೆದುಕೊಳ್ಳುವ ಪರಿಸ್ಥಿತಿ ಇಲ್ಲ. ಪೂರ್ತಿ ಇಲ್ಲ ಎಂದು, ಹೇಳುವುದಕ್ಕೆ ಆಗುವುದಿಲ್ಲ. ಮೇಜರ್ ಇರಿಗೇಷನ್ನಿಗೆ ಸಂಬಂಧಪಟ್ಟ ಹಾಗೆ ಒಂದೆರಡು ಯೋಜನೆಗಳು ಇವೆ. ಇವುಗಳ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ನೇತ್ರಾವತಿ ನದಿಗೆ ಸಮುದ್ರದ ಒಳಗಡೆಯಿಂದ ಉಪ್ಪು ನೀರು ಬರುತ್ತದೆ ಇದು ಸುಮಾರು ೧೦-೧೫ ಮೈಲಿ ಬರುತ್ತದೆ. ಈ ರೀತಿ ನೇತ್ರಾವತಿ ನದಿಯಲ್ಲಿ ಉಪ್ಪು ನೀರು ಮಿಕ್ಸ್ ಆಗಿ ಬರುವುದರಿಂದ ರೈತರಿಗೆ ತೊಂದರೆಯಾಗಿದೆ. ಈ ಉಪ್ಪು ನೀರು ಬೆಳೆಮಾಡುವುದಕ್ಕೆ

(ಶ್ರೀಮತಿ ಕೆ. ಲೀಲಾವತಿ ರೈ)

ಆಗುವುದಿಲ್ಲ. ಈ ನೇತ್ರಾವತಿ ನದಿಗೆ ಒಂದು ಕಡೆ ಅಣೆಕಟ್ಟು ಕಟ್ಟುವ ಯೋಜನೆ ಇದೆ. ಇದಕ್ಕೆ ಸಂಬಂಧಪಟ್ಟ ಪ್ಲಾನು ಮತ್ತು ಎಸ್ಟಿಮೇಟ್ ಆಗಿದೆ ಎಂದು ತಿಳಿದು ಬಂದಿದೆ. ಇದು ಎಷ್ಟರಮಟ್ಟಿಗೆ ಇದೆಯೆಂಬುದನ್ನು ಪರಿಶೀಲನೆ ಮಾಡಬೇಕು. ಮಂಗಳೂರಿಗೆ ಕುಡಿಯುವ ನೀರಿನ ಯೋಜನೆಯನ್ನು ಮಾಡುವುದರಲ್ಲಿ ಉಪ್ಪು ನೀರು ಬರುವುದಕ್ಕೆ ಸಾಧ್ಯವಿದೆ ಅದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡ ಬೇಕು. ನೇತ್ರಾವತಿ ಮೇಜರ್ ಇರಿಗೇಷನ್‌ನಿಂದ ಸಾವಿರಾರು ಎಕರೆ ನೀರಾವರಿಯಾಗುವಂತಾದ್ದು ಇದೆ. ಈ ನದಿಯ ಬದಿಯಲ್ಲಿ ಎಂದರೆ ನದಿಯ ದಂಡೆಯಲ್ಲಿ ವ್ಯವಸಾಯಕ್ಕೆ ನೀರು ತೆಗೆದುಕೊಳ್ಳುವಾಗ ಉಪ್ಪು ನೀರು ಬರುತ್ತದೆ. ಇದರಿಂದ ಬೆಳೆಯನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲ. ಆದಕಾರಣ ಇದಕ್ಕೆ ಸರ್ಕಾರದವರು ತೀವ್ರವಾಗಿ ಗಮನಕೊಟ್ಟು ನದಿಯಲ್ಲಿ ಉಪ್ಪು ನೀರು ಬಾರದಹಾಗೆ ಎಷ್ಟು ಕೆಳಗಡೆ ಸಾಧ್ಯವೋ ಅಷ್ಟು ಕೆಳಗಡೆ ಸಾಲ್ಟ್‌ವಾಟರ್ ಎಕ್ ಲೂಷನ್ ಡ್ಯಾಮ್ ಅಕ್ರಾಸ್ ದಿ ನೇತ್ರಾವತಿ ರಿವರ್ ಹಾಕಬೇಕು. ಸಾಲ್ಟ್-ವಾಟರ್ ಬಾರದ ಹಾಗೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ರೈತರ ಪರವಾಗಿ ಅತಿ ದೈನ್ಯದಿಂದ ಕೇಳಿ ಕೊಳ್ಳುತ್ತೇನೆ. ಈಗ ನೇತ್ರಾವತಿಯಲ್ಲಿಂದು ಬದಿಯಲ್ಲಿ ಮಾತ್ರ ನೀರು ಹರಿಯುತ್ತಿದೆ. ಆದ್ದರಿಂದ ಬಂಟವಾಳ್‌ಗೆ ೫ ಮೈಲಿ ದೂರದಲ್ಲಿ ನೇತ್ರಾವತಿ ನದಿಗೆ ಒಂದು ಡ್ಯಾಮ್ ಹಾಕಿ ಇನ್ನೊಂದು ಕಡೆಯ ಬದಿಯಲ್ಲಿಯೂ ನೀರು ಬರುವಹಾಗೆ ಮಾಡಿದರೆ ಅವರಿಂದ ರೈತರಿಗೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ನೇತ್ರಾವತಿ ನದಿಯ ಎರಡು ಬದಿಯಲ್ಲಿಯೂ ನೀರು ಹರಿಯುವ ಹಾಗೆ ಮಾಡಬೇಕು. ಆ ರೀತಿ ಮಾಡುವುದಾದರೆ ಎರಡು ಬದಿಯಲ್ಲಿರತಕ್ಕ ರೈತರಿಗೆ ಅನುಕೂಲವಾಗುತ್ತದೆ. ೫ ಎಚ್.ಪಿ., ೬ ಎಚ್. ಪಿ. ಮತ್ತು ೧೦ ಎ.ಚ್., ಪಂಪುಸೆಟ್ಟುಗಳನ್ನು ಹಾಕಿ ನೀರು ಎತ್ತುವುದಕ್ಕೆ ಅನುಕೂಲ ಮಾಡಿಕೊಟ್ಟರೆ ರೈತರು ಎರಡನೇ ಬೆಳೆ ಮತ್ತು ಮೂರನೇ ಬೆಳೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಂಡರೆ ರೈತರಿಗೆ ಅನುಕೂಲವಾಗುತ್ತದೆ ಎಂಬುದನ್ನು ಎನ್‌ಕ್ವೈರಿ ಮಾಡಿ ಅಥವಾ ಪ್ರಾಜೆಕ್ಟ್‌ಗಳನ್ನು ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ವಿದ್ಯುಚ್ಛಕ್ತಿ ವಿಚಾರದಲ್ಲಿ ಒಹಳ ನೊಂದ ಮನಸ್ಸಿನಿಂದ ಮಾನ್ಯ ಸದಸ್ಯರು ಹೇಳಿದ್ದಾರೆ. ಹಾಗೆಯೇ ವಿರೋಧ ಪಕ್ಷದ ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ವಿದ್ಯುಚ್ಛಕ್ತಿ ಸರಬರಾಜಿನ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಹಳ್ಳಿಗಳಿಗೆ ಹೋಗುವಂಥಾ ಎಲೆಕ್ಟ್ರಿಸಿಟಿ ಏನಿದೆ, ಇದರಲ್ಲಿ ಬಹಳ ಉತ್ತೇಜನ ದಿಂದ ಕೆಲಸ ಮಾಡಿದ್ದೇವೆ ಎನ್ನುವಂಥಾ ಮಾತು ಹೇಳಿದ್ದಾರೆ. ಇದರಲ್ಲಿ ಎಷ್ಟು ಕೆಲಸ ಆಗಬೇಕಾಗಿತ್ತೋ ಅಷ್ಟು ಕೆಲಸ ಆಗಿಲ್ಲ, ಸ್ವಲ್ಪ ಮಾಡಿದ್ದಾರೆ ಇನ್ನೂ ಆಗಬೇಕಾದ್ದು ಬೇಕಾದಷ್ಟು ಇದೆ ಈ ವಿದ್ಯುಚ್ಛಕ್ತಿ ದರವನ್ನು ಕಡಿಮೆ ಮಾಡಬೇಕೆಂದು ಈಗ ಎರಡು ತಿಂಗಳ ಹಿಂದೆ ಸರ್ಕಾರವನ್ನು ಕೇಳಿಕೊಂಡಿದ್ದರಿಂದ ಪಂಪುಸೆಟ್ ದರವನ್ನು ೪೫ ರೂಪಾಯಿಗಳಿಂದ ೩೬ರೂಪಾಯಿಗಳಿಗೆ ತಂದಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ರಿಸೋರ್ಸಸ್ ಕಮಿಟಿಯನ್ನು ಮಾಡಿದ್ದಾರೆ. ಆ ಕಮಿಟಿಯವರು ಈಗಾಗಲೇ ಕೆಲವು ಸಲಹೆ ಗಳನ್ನು ಕೊಟ್ಟಿದ್ದಾರೆ. ಆ ಸಮಿತಿಯಲ್ಲಿ ನಾವು ೭-೮ ಮಂದಿ ಸದಸ್ಯರು ಬಾಗವಹಿಸಿದ್ದೆವೇ. ನಾವೂ ಗಳನ್ನು ಕೊಟ್ಟಿದ್ದೇವೆ. ಆಹಾರ ಧಾನ್ಯವನ್ನು ಬೆಳೆಯತಕ್ಕಂಥ ೯೦ಪರ್ಸೆಂಟ್ ರೈತರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ವಿಷಯದಲ್ಲಿ ಬೇಕಾದಂತಹ ಅನುಕೂಲತೆಗಳನ್ನು ಮಾಡಿ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ ಮತ್ತು ರೈತರಿಗೆ ಸ್ವಲ್ಪ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಸುವುದಕ್ಕೆ ಸರ್ಕಾರ ದವರು ಪ್ರಯತ್ನ ಮಾಡಬೇಕು, ಇದರ ಬಗ್ಗೆ ಮೊನ್ನೆ ಮಂಗಳೂರು ಪೋರ್ಟಿನಲ್ಲಿ ಮಿಾಟಿಂಗ್ ನಡೆದಾಗ ಕೆಲವು ಸದಸ್ಯರು ಬಹಳ ಸಿಟ್ಟಿನಿಂದ ಮಾತನಾಡಿದರು. ಎಲೆಕ್ಟ್ರಿಸಿಟಿ ಬೋರ್ಡಿನವರು, ಸಾಮಾನ್ಯ ಜನರ ಮತ್ತು ರೈತರ ಅಭಿವೃದ್ಧಿಯ ಬಗ್ಗೆ ಹೊಂದಿಕೊಂಡು ಅವರಿಗೆ ಸಹಾಯ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಪ್ರತಿಯೊಬ್ಬ ಆಫೀಸರಿಗೂ ಕೇಳಿಕೊಳ್ಳುತ್ತೇನೆ. ಹೆಚ್ಚು ಮಂದಿ ಆಫೀಸರ್ಸ್ ಜನರಿಗೆ ಅನುಕೂಲವಾದ ರೀತಿಯಲ್ಲಿ ಹೊಂದಿಕೊಂಡು ಕೆಲಸ ಮಾಡುತ್ತಿದ್ದಾರೆ. ಆದರೆ ಇನ್ನಷ್ಟು ಮಂದಿ ಆಫೀಸರ್ಸ್ ನಾನ್ ಆಫೀಶಿಯಲ್ಸ್ ಜೊತೆ ಒಟ್ಟುಗೂಡಿ ಜನತೆಯ ಹಿತದೃಷ್ಟಿ ಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಾ ಹೋದರೆ, ನಮ್ಮ ದೇಶ ಹೆಚ್ಚು ಏಳಿಗೆಯಾಗಬಹುದು ಮತ್ತು ನಮ್ಮ ರಾಷ್ಟ್ರದ ಐಕ್ಯತೆಯನ್ನು ಮಾಡಲು ಸಾಧ್ಯವೆಂದು ಹೇಳುತ್ತೇನೆ.

೫. ೦೦ ಪಿ. ಎಂ.

ಇನ್ನು ರೂರಲ್ ವಾಟರ್‌ಸ್‌ಪ್ಲೈ. ನಮ್ಮ ಆರ್ಥಿಕ ಮಂತ್ರಿಯವರು ಇಲ್ಲೇ ಇದ್ದಾರೆ. ಅವರು ಎಲ್ಲಾ ಕಡೆಯಿಂದ ದುಡ್ಡು ತಂದರೆ ಆರ್ಡರ್ ಕೊಡುತ್ತೇವೆಂದು ಹೇಳುತ್ತಾರೆ. ಇವತ್ತು ಪಂಚಾಯಿತಿಯವರಲ್ಲೂ ಅನುಕೂಲ ಇಲ್ಲ. ಈಗ ಲ್ಯಾಂಡ್ ರೆವಿನೂ ನಲ್ಲಿ ಕೊಡುತೆ ೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಅದನ್ನು

ನಾನು ಸ್ವಾಗತಿಸುತ್ತೇನೆ. ಆದ್ದರಿಂದ ಇಂಥ ಕೆಲಸಗಳಿಗೆ ಸರ್ಕಾರದವರು ಹೆಚ್ಚು ಪ್ರೋತ್ಸಾಹ ಕೊಟ್ಟುಹೆಚ್ಚು ಹೆಚ್ಚು ಅಭಿವೃದ್ಧಿ ಕೆಲಸಗಳನ್ನು ಆದಷ್ಟು ಜಾಗ್ರತೆ ಮಾಡಬೇಕೆಂದು ಹೇಳಿ ಮೊತನಾಡಲು ಅವಕಾಶ ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

[MR. DEPUTY SPEAKER IN THE CHAIR]

ಶ್ರೀ ಎಂ. ಎಂ. ಜಾಲಿಗಟ್ಟಿ(ಭಟ್ಕಳ)ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಆಡುತ್ತೇನೆ. ಬಂದರು ವಿಚಾರ,ಇದು ಪಕ್ಷೇತರ ವಿಚಾರವಾಗಿದೆ. ಆಚೆಯವರು ಈಚೆಯವರು ಎಂಬ ಭಿನ್ನಾಭಿಪ್ರಾಯವಿಲ್ಲ. ಪೊದಲು ದಕ್ಷಿಣ ಕನ್ನಡಜಿಲ್ಲೆ,ಉತ್ತರ ಕನ್ನಡ ಜಿಲ್ಲೆ ಎಂಬುದು ಒಂದೆ ಆಗಿತ್ತು ಆದರೆ ಬ್ರಿಟಿಷರ ಕುತಂತ್ರದಿಂದ ಎರಡು ಜಿಲ್ಲೆಗಳಾದವು. ದಕ್ಷಿಣ ಕನ್ನಡಜಿಲ್ಲೆ ಮದ್ರಾಸಿಗೆ ಹೋಯಿತು, ಉತ್ತರಕನ್ನಡಜಿಲ್ಲೆ ಬೊಂಬಾಯಿಗೆ ಹೋಯಿತು. ಆದರೂ ಸಹ ನಾವು ಈಗ ಒಂದಾಗಿದ್ದೇವೆ. ನಮ್ಮ ಸಮಸ್ಯೆಗಳೂ ಒಂದಾಗಿದೆ. ಆದ್ದರಿಂದ ಮಾನ್ಯ ಇದಿನಬ್ಬನವರು ಮತ್ತು ಶ್ರೀನಿವಾಸ ನಾಯಕರವರು ಬಂದರಿನ ಅಭಿವೃದ್ಧಿ ಬಗ್ಗೆ ಏನು ಹೇಳಿದ್ದಾರೆ, ಅವರ ಜೊತೆ ನಾನೂ ಒಗೊಟ್ಟು ಕೆಲವು ವಿಷಯಗಳನ್ನು ಹೇಳುತ್ತೇನೆ ಏಕೆಂದರೆ ಅವರಿಗೆ ಎಲ್ಲಾ ವಿಷಯಗಳನ್ನು ಹೇಳುವುದಕ್ಕೆ ಪ್ರತಿಬಂಧಕ ಇದೆಯೋ ಏನೊ ನಮ್ಮ ಕರ್ನಾಟಕ ದಲ್ಲಿ ಏನಾಗಿದೆ ಅಂದರೆ, ಇವತ್ತು ಡೈನಾಮಿಕ್ ಪರ್‌ಸನಾಲಿಟಿ ಇಲ್ಲವೋ ಎಂಬ ಸಂಶಯ ಬರುತ್ತದೆ. ಏಕೆಂದರೆ, ನಮ್ಮ ರಾಜ್ಯದವರೇ ಆದ ಡಾ.ವಿ ಕೆ.ಆರ್ ವಿ. ರಾವ್‌ರವರು ಬಂದರಿನ ಮಂತ್ರಿಯವರಾಗಿದ್ದರು ಅವರ ಹತ್ತಿರ ಕಾರವಾರ ಬಂದರನ್ನು ಅಭಿವೃದ್ಧಿ ಮಾಡಬೇಕೆಂದು ಹಿಂದೆ ಸ್ಟಾಟಿಸ್ಟಿಕ್ಸ್ ಕೊಟ್ಟು ಹೇಳಿದ್ದೇವೆ. ಆದರೆ ಅವರು ನಾವು ಮರ್ಮಗೋವಾವನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತಾರೆ. ಇವರು ಇವತ್ತು ಕರ್ನಾಟಕದಿಂದ ಹೋಗಿ, ಕರ್ನಾಟದ ಹಿತಾಸಕ್ತಿಗಳನ್ನು ನೋಡುತ್ತಿಲ್ಲವೋ ಎಂದು ಸಂಶಯಪಡಬೇಕಾಗಿದೆ ಇವರಿಂದ ನನಗೆ ಹಗಲು ರಾತ್ರಿ ಇದೇ ಚಿಂತೆ ಬರುತ್ತಿದೆ. ಈ ರೀತಿಯಾಗಿ ನಮ್ಮವರೇ ಆಗಿ, ನಮ್ಮಿಂದಲೇ ಆರಿಸಿ ಹೋಗಿ ಇವತ್ತು ನಮ್ಮ ನಾಡಿನ ಏಳ್ದಾಗ ಬೇರೆ ಸಮಗ್ರವಾದ ರೀತಿಯಲ್ಲಿ ಆಲೋಚಿಸಿ ಇಂಡಿಯಾವನ್ನು ಪ್ರತಿನಿಧಿಸುವುದಕ್ಕೆ ವಿಚಾರ ಮಾಡುತ್ತಿದ್ದಾರೆ. ಅಂಥವರು ಇವತ್ತು ಬಹು ಮಂದಿ ನಮ್ಮಲ್ಲಿ ಇದ್ದಾರೆ ನಮ್ಮ ಜಗಜೀವನ್‌ರಾಮ ಬಿಹಾರಿನಲ್ಲಿ ಬ್ರಾಡ್ ಗೇಜ್ ಮಾಡಿದ್ದಾರೆ. ಆದರೆ ನಮ್ಮಲ್ಲಿ ಹುಬ್ಬಳ್ಳಿ-ಕಾರವಾರ ರೈಲ್ವೆ ಮಾಡುವುದಕ್ಕೆ ಮಾನ್ಯ ಪೂಣಾಚ್ಚನವರು ಏನಾ ಮೇಷ ಮಾಡಿದರು ಇದರಿಂದಲ್ಲಾ ನಮ್ಮಲ್ಲಿ ಡೈನಾಮಿಕ್ ಪರ್‌ಸನಾಲಿಟಿಗಳು ಇಲ್ಲವೇ ಎಂಬ ಸಂಶಯ ಪಡಬೇಕಾಗಿದೆ ಇವರಿಗೆ ನಮ್ಮಲ್ಲಿ ಡೈನಾಮಿಕ್ ಲೀಡರ್‌ಶಿಪ್ ಇರಲಿಲ್ಲವೇ ? ಇದ್ದರೂ ಏನು ಮಾಡಿದರು? ಇಲ್ಲಿ ಒಂದು ಗಾದೆ ನೆನಪಾಗುತ್ತದೆ. ಸಮ್ ಆರ್ ಬಾರ್ನ್ ಗೆ ೀಟ್, ಸಮ್ ಆರ್ ಮೆಡ್ ಗ್ರೇಟ್, ಓನ್ ಸಮ್ ಗ್ರೇಟ್‌ನ್ಸ್ ಹಿಸ್ ತ್ರಸ್ಟ್ ಹೀಗೆ ಹಿಂದೆ ನಮ್ಮ ನಿಜಲಿಂಗಪ್ಪನವರು ಕಾಂಗ್ರೆಸ್ ಪ್ರೆಸಿಡೆಂಟರಾಗಿದ್ದರೂ, ರಾಜ್ಯದ ಮುಖ್ಯಮಂತ್ರಿಯಾಗಿದ್ದರೂ, ನಮ್ಮ ನಾಡಿನ ಬಂದರಿನ ಅಭಿವೃದ್ಧಿ ಬಗ್ಗೆ ಏನು ಮಾಡಿದರು? ಅದರ ಬಗ್ಗೆ ಅವರು ಯಾವ ನಿಗಾವನ್ನು ತೆಗೆದುಕೊಳ್ಳಲಿಲ್ಲ. ಅವರು ಹೇಳುತ್ತಾರೆ, ಪ್ರಧಾನಮಂತ್ರಿಯವರನ್ನು ನಾನೇ ಮಾಡಿದ್ದೇನೆ, ಎಂದು ಪ್ರಧಾನ ಮಂತ್ರಿಯವರನ್ನು ಅವರೇ ಮಾಡಿದ್ದಾರೆ, ನಮಗೆ ಅವಶ್ಯವಾದ ಕಾರವಾರ ಬಂದರು, ಮಂಗಳೂರು ಬಂದರಿನ ಬಗೆ ಏಕೆ ಪ್ರಯತ್ನ ಮಾಡಿಲ್ಲ? ಮಾನ್ಯ ನಿಜಲಿಂಗಪ್ಪನವರ ಹೆಸರು ಹೇಳಿದ ತಕ್ಷಣ ನಮ್ಮ ಮುಖ್ಯಮಂತ್ರಿಯವರಿಗೆ ತಕ್ಷಣ ಸಿಟ್ಟು ಬರುತ್ತದೆ. ನಮಗೆ ಇವತ್ತು ವ್ಯಕ್ತಿಗಿಂತ ರಾಜ್ಯ ದೊಡ್ಡದು. ಚ್ಯಾರಿಟಿ ಬಿಗಿನ್ಸ್ ಅಟ್ ಹೋಂ, ಅಂದ ಹಾಗೆ ನಮ್ಮ ಕರ್ನಾಟಕದ ಹಿತಾಸಕ್ತಿಗಳನ್ನು ಕಾಪಾಡುವುದಕ್ಕೆ ಏನು ಮಾಡಿದ್ದಾರೆ? ಇವತ್ತು ನಮ್ಮ ಬಂದರು ಅಭಿವೃದ್ಧಿಯಾಗದಿದ್ದರೆ, ನಮ್ಮ ವ್ಯಾಪಾರ ಅಭಿವೃದ್ಧಿಯಾಗುವುದಿಲ್ಲ. ಆದೇ ರೀತಿ ನಮ್ಮ ರೈಲ್ವೇಯೂ ಉತ್ತಮವಾಗಬೇಕು. ಇವೆರಡೂ ಇಲ್ಲದಿದ್ದರೆ ನಮ್ಮ ರಾಜ್ಯ ಉದ್ಧಾರವಾಗುವುದಿಲ್ಲ, ನಾವೂ ಉತ್ತಮಗೊಳ್ಳುವುದಿಲ್ಲ ಅವಕಾಶ ಇದ್ದಾಗ ಬಂದರಿನ ಬಗ್ಗೆ ರೆಲ್ವೆಬಗ್ಗೆ ನಾವು ನಮ್ಮ ಲೀಡರ್ಸ್, ಎಂದು ಏನು ಹೇಳುತ್ತೇವೆ, ಅವರು ಏಕೆ ಇದಕ್ಕೆ ಲಕ್ಷಕೊಟ್ಟಿಲ್ಲ ? ಅವರಿಗೆ ಶಕ್ತಿ ಇಲ್ಲವೆ,ಅಭಿಮಾನ ಇಲ್ಲವೇ?ಎಂಬುದನ್ನು ವಿಚಾರ ಮಾಡಬೇಕಾಗಿದೆ.ಕಾರವಾರಿನ ಬಂದರಿನ ಬಗ್ಗೆ ಇಲಾಖೆಯಲ್ಲಿದ್ದ ತಂಡ ಒಂದು ಪುಸ್ತಕವನ್ನು ಕೊಟ್ಟಿದ್ದಾರೆ ಅದರಲ್ಲಿ ಸ್ಟೇಟ್ ಅಡ್‌ವೈಸರಿ ಬೋರ್ಡಿನಲ್ಲಿ ಪ್ರಸಾದ ರಿಸೊಲ್ಯೂಶನನ್ನು ಸುಂದರವಾಗಿ ಕೊಟ್ಟಿದ್ದಾರೆ, ಆದರೆ ಇದರ ಬಗ್ಗೆ ಎಷ್ಟು ಆಸಕ್ತಿ ವಹಿಸಿದ್ದಾರೆ? ಮರ್ಮಗೋವದ ಬಂದರಿನ್ನು ಡೆವಲಪ್ ಮಾಡುವ ಎಂದು ಹೇಳುತ್ತಿದ್ದಾರೆ. ಕಾರವಾರದಲ್ಲಿ ರಾಜಕೀಯ ಇದೆಯೋ ಎನ್ನುವ ಸಂಶಯ ಇದರ ಬಗ್ಗೆ ಜಮೀನಿನವರು ಏನು ಒಂದು ಉತ್ತಮವಾದ ರಿಪೋರ್ಟು ಕೊಟ್ಟಿದ್ದಾರೆ, ಅದನ್ನು ಏಕೆ ಪಾಲಿಸಿಲ್ಲ? ಅದು ಉತ್ತಮವಾದ ಬಂದರಾಗುತ್ತದೆ, ಅದಲ್ಲದೆಖರ್ಚು ಕೂಡ ಕಡಿಮೆಯಾಗುತ್ತದೆ ಎಂದು ಹೇಳಿದ್ದಾರೆ ಅದಲ್ಲದೆ ಹುಬ್ಬಳ್ಳಿ ಕಾರವಾರ ಬ್ರಾಡ್‌ಗೇಜ್ ರೈಲ್ವೇ ಮಾಡಿದರೆ, ಹೊಸಪೇಟೆಯ ೧೭ ಲಕ್ಷ ಟನ್ ಪೊಗಿನ್ಸಯಲಿಟೀಸ್ ಅದುರು ಏನಿವೆ, ಅದನ್ನು ತೆಗೆದುಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕಾಗಿ ಕಾರವಾರ ಬಂದರು, ಕಾರವಾರ ಹುಬ್ಬಳ್ಳಿ ರೈಲ್ವೆಯನ್ನು ಮಾಡುವುದಕ್ಕೆ ಜಪಾನಿನವರು ರಿಪೋರ್ಟ್

(ಶ್ರೀ ಎಂ. ಎಂ. ಜಾಲಿಸಟ್ಟಿ)

ಕೊಟ್ಟಿದ್ದಾರೆ. ಅದನ್ನು ಕಾರ್ಯಗತ ಮಾಡುವಂತೆ ನಮ್ಮ ಸರ್ಕಾರದವರು ಪ್ರಯತ್ನ ಮಾಡುತ್ತಾರೆಂದು, ಭಾವಿಸುತ್ತೇನೆ. ಪ್ರಯತ್ನ ಮಾಡದಿದ್ದರೆ, ಇವರಿಗೆ ಎನರ್ಜಿ ಇಲ್ಲ, ಡೈನಾಮಿಕ್ ಲೀಡರ್‌ಶಿಪ್ ಇಲ್ಲಿ ಇಲ್ಲ ಎಂದು ಹೇಳಬೇಕಾಗುತ್ತದೆ, ಆದ್ದರಿಂದ ಏನು ಮಾಡುತ್ತೀರೆಂದು ನೋಡಬೇಕಾಗುತ್ತದೆ. ನಮ್ಮ ಈ ತರುಣ ಮಂತ್ರಿಮಂಡಲದವರು, ಈ ದೆಸೆಯಲ್ಲಿ ಹೆಚ್ಚಿನಪ್ರಯತ್ನವನ್ನು ಮಾಡುತ್ತಾರೆಂದು ನಾನು ನಂಬುತ್ತೇನೆ.

೪ ಲಕ್ಷ ಟನ್ನುಗಳಷ್ಟು ಅಕ್ಕಿರು ಕಾರವಾರದಿಂದ ಹೋಗುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ನಮ್ಮ ರಾಜ್ಯದ ಹೊರಗಿನ ಬಂದರುಗಳಿಂದ ಅದು ರಫ್ತಾಗುತ್ತದೆ. ಮಿನರಲ್ ಕಾರ್ಪೊರೇಷನ್ ಮತ್ತು ಇತರ ಸಂಸ್ಥೆಗಳು ನಮ್ಮ ದೇಶದ ಹೊರಗಿನ ಬಂದರುಗಳ ಮುಖಾಂತರ ಬೇಕಾದಷ್ಟು ಅದಿರನ್ನು ರಫ್ತು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆ ರೀತಿ ಮಾಡಿದಾಗ ನಮ್ಮ ರಾಜ್ಯ ಸರ್ಕಾರದವರು ಪ್ರೊಟೆಸ್ಟ್ ಏಕೆ ಮಾಡುವುದಿಲ್ಲ ? ಒಂದು ವೇಳೆ ಪ್ರೊಟೆಸ್ಟ್ ಮಾಡಿದರೆ ಕಾರ್ಪೊರೇಷನ್ನಿನಿಂದ ಅಥವಾ ಸೆಂಟರ್‌ನಿಂದ ಇವರಿಗೆ ಯೋಗ್ಯ ಪುರಸ್ಕಾರ ಸಿಗುವುದಿಲ್ಲವೇ ಹೇಗೆ ? ಆದ್ದರಿಂದ ರಾಜ್ಯ ಸರ್ಕಾರದವರು ಇದನ್ನು ವಿಚಾರ ಮಾಡಬೇಕು. ನ್ಯಾಷನಲ್ ಮಿನರಲ್ ಡೆವಲಪ್ ಮೆಂಟ್ ಕೌನ್ಸಿಲ್ಲಿನವರು ನಮ್ಮ ರಾಜ್ಯದ ಅದಿರು ಉತ್ಪನ್ನ ನೂರಾರು ಮಿಲಿಯನ್ ಟನ್ನಿ ನಷ್ಟು ಇದ್ದರೂ ಅದನ್ನು ಸಾಗಿಸಲು ನಮ್ಮ ರೈಲ್ವೆ ಮತ್ತು ಬಂದರುಗಳನ್ನು ಉಪಯೋಗಿಸದೆ ನಮ್ಮ ರಾಜ್ಯದ ಹಿತಕ್ಕೆ ವಿರೋಧವಾಗಿ ವರ್ತಿಸುತ್ತಿದ್ದಾರೆ. ಆದ್ದರಿಂದ ನಮ್ಮ ರಾಜ್ಯ ಸರ್ಕಾರದವರು ಅದಕ್ಕೆ ಅವಕಾಶ ಕೊಡದೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.

ಇನ್ನು ನಮ್ಮ ಜಿಲ್ಲೆ ಮಲೆನಾಡು ಏರಿಯಾದಲ್ಲಿದೆ ಅಲ್ಲಿ ೨೦೦ ಇಂಚು ಮಳೆ ಬೀಳುತ್ತದೆ. ನಮ್ಮಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಲ್ಲ. ಮಾಧ್ಯಮಿಕ ನೀರಾವರಿ ಯೋಜನೆಗಳನ್ನು ಮಾಡಿದರೆ ಮಾಡಬಹುದು. ಆದರೆ ಸರ್ಕಾರದವರು ಮಾಡುವುದಿಲ್ಲ ಇಲ್ಲಿ ಹೆಚ್ಚಿಗೆ ಮಳೆ ಬೀಳುವುದರಿಂದ ರಸ್ತೆಗಳು ಮತ್ತು ಸೇತುವೆಗಳು ಹಾಳಾಗಿ ಹೋಗುತ್ತವೆ ಸೇತುವೆಗಳ ಮೇಲೆ ಮಳೆಗಾಲದಲ್ಲಿ ಹೋಗುವುದಕ್ಕೇ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ನಮ್ಮಕಡೆ ಇರತಕ್ಕಂಥ ರಸ್ತೆಗಳಿಗೆ ಹೆಚ್ಚಿಗೆ ನಿಗಾಕೊಟ್ಟು ಅವುಗಳ ಅಭಿವೃದ್ಧಿಗಾಗಿ ಹೆಚ್ಚಿಗೆ ಹಣ ಸಹಾಯವನ್ನು ಮಾಡಬೇಕು. ಪೆಚ್ಚು ಮೊಬಲಗನ್ನು ರಸ್ತೆಗಳಿಗೆ ಮತ್ತು ಸೇತುವೆಗಳಿಗೆ ಒದಗಿಸಬೇಕೆಂದು ಹೇಳುತ್ತೇನೆ. ಬೇರೆ ಬಾಬುಗಳ ಬಗ್ಗೆ ಹೆಚ್ಚಿಗೆ ಖರ್ಚು ಮಾಡುವುದನ್ನು ಬಿಟ್ಟು ಸ್ಪೆಷಲ್ ಕನ್‌ಸಿಡರೇಷನನ್ನು ಈ ಬಾಬಿಗೆ ಸರ್ಕಾರದವರು ತೋರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮಲ್ಲಿ ಮೇಜರ್ ಇರ್ರಿಗೇಷನ್ ಇಲ್ಲದಿದ್ದರೂ ಲಿಫ್ಟ್ ಇರ್ರಿಗೇಷನ್ ಮಾಡಿದರೆ ಸುಮಾರು ೫ ಸಾವಿರ ಎಕರೆಗಳ ಸಾಗು ಆಗುತ್ತದೆ. ಶರಾವತಿ ವ್ಯಾಲಿ ಟೀಲ್ ಎಂಡ್ ವಾಟರ್ ೧೫ ಮೈಲಿಗಳವರೆಗೆ ನಮ್ಮಲ್ಲಿ ಹರಿದು ಸಮುದ್ರಕ್ಕೆ ಸೇರುತ್ತದೆ. ಅಲ್ಲಿ ಲಿಫ್ಟ್ ಇರ್ರಿಗೇಷನ್ ಮಾಡುತ್ತಾರೆ. ಇದರ ಬಗ್ಗೆ ಸರ್ಕಾರದವರು ೧೯೬೬ನೇ ಇಸವಿಯಲ್ಲಿ ಒಂದು ವರದಿ ತಯಾರು ಮಾಡಿದ್ದಾರೆ. ೬೬-೬೭ನೇ ಸಾಲಿನಲ್ಲಿ ಆರ್ಥಿಕ ಸಚಿವರು ಲಿಫ್ಟ್ ಇರ್ರಿಗೇಷನ್ ಸ್ಕೀಂಗಳು ನಮ್ಮಲ್ಲಿ ಮಂಜೂರಾಗಿವೆಯೆಂದು ಹೇಳಿದರು. ಅದನ್ನು ಎಲ್ಲಿ ಮಾಡುತ್ತಾರೋ ಗೊತ್ತಿಲ್ಲ. ಅದರ ಬಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ಆರ್ಥಿಕ ಸಚಿವರಿಗೆ ಈಗಾಗಲೇ ಬರೆದಿದ್ದೇವೆ. ಅದನ್ನು ಸರ್ಕಾರದವರು ಬೇಗ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ೫ ಸಾವಿರ ಎಕರೆಗಳಿಗೆ ಸಂಬಂಧವಾಗಿ ಒಂದು ಕಾರ್ಲೆಂಡ್ ಸ್ಕೀಂ ೧೯೫೧ ರಲ್ಲಿ ಆಗಿದ್ದರೂ ಅದರ ಬಗ್ಗೆ ಇದುವರೆಗೆ ಏನೂ ಕೆಲಸಗಳೂ ಆಗಿಲ್ಲ. ಅನೇಕ ಕಡೆಗಳಲ್ಲಿ ಈ ಸ್ಕೀಂ ಆಗಬೇಕಾಗಿದೆ. ಕೆಲವು ಕಡೆಗಳಲ್ಲಿ ಉಪ್ಪು ನೀರಿನ ದೆಸೆಯಿಂದ ಜಮೀನು ಹಾಳಾಗಿ ಹೋಗಿದೆ. ಸಾವಿರಾರು ಎಕರೆಗಳಷ್ಟು ಇತ್ತೀಚೆ ಮೈಸೂರು ರಾಜ್ಯದಲ್ಲಿ ಬತ್ತದ ಬೆಳೆಯಾಗತಕ್ಕ ಪ್ರದೇಶ ಹೆಚ್ಚಾಗಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಇದೆ. ಸಕಾಲಕ್ಕೆ ಸರಿಯಾಗಿ ಮಳೆ ಬಾರದೆ ಸುಮ್ಮನೆ ಬೆಳೆ ಹಾಳಾಗಿ ಹೋಗಿದೆ. ಇದಕ್ಕೆ ಕೇಂದ್ರ ಸರ್ಕಾರದ ಸಹಾಯವಿಲ್ಲ. ಕಾರ್ಲೆಂಡ್ ಸ್ಕೀಂ ಪ್ರಕಾರ ಮೊದಲಿನ ಹಾಗೆ ಬೆಳೆಯಾಗುವಂಥ ಪರಿಸ್ಥಿತಿ ಇಲ್ಲ. ಹೀಗಾಗಿ ಅಲ್ಲಿನ ಜನ ತ್ರಿಶಂಕುಸ್ವರ್ಗದಲ್ಲಿದ್ದಾರೆ. ಮುಂದೆ ಹೆಚ್ಚು ಸಮಯ ಸಿಕ್ಕಿದರೆ ಆಗ ಇತರ ವಿಷಯಗಳನ್ನು ಹೇಳುತ್ತೇನೆ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಕೆ. ಸಂಗನ ಗೌಡ (ಲಿಂಗಸುಗೂರು) :—ಮಾನ್ಯ ಉಪಾಧ್ಯಕ್ಷರೇ, ನೀರಾವರಿ, ಜಲಾನಯನ, ವಿದ್ಯುಚ್ಛಕ್ತಿ ಮತ್ತು ಲೋಕೋಪಯೋಗಿ ಶಾಖೆಗಳ ಬೇಡಿಕೆಗಳ ಬಗ್ಗೆ ಅನೇಕ ಸ್ನೇಹಿತರು ತಂತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರು. ಈ ಪ್ರಸಂಗದಲ್ಲಿ ಗುಲ್ಬರ್ಗಾ ಭಾಗದ ಕೆಲವು ಸ್ನೇಹಿತರು ಪ್ರಸ್ತಾಪಮಾಡಿ ಕೆಲವು ತಾಲ್ಲೂಕುಗಳಲ್ಲಿ ಮತ್ತು ಕೆಲವು ಜಿಲ್ಲೆಗಳಲ್ಲಿ ವಿದ್ಯುತ್ ಸರಬರಾಜು ಬಗ್ಗೆ ಮತ್ತು

ನೀರಾವರಿ ಬಗ್ಗೆ ಸರ್ಕಾರದವರು ಹೆಚ್ಚು ಕೆಲಸಗಳನ್ನು ತೆಗೆದುಕೊಂಡು ಮತ್ತು ಇನ್ನು ಕೆಲವು ತಾಲ್ಲೂಕುಗಳಲ್ಲಿ ಆ ರೀತಿ ಏನೂ ಕ್ರಮ ತೆಗೆದುಕೊಂಡಿಲ್ಲವೆಂಬುದಾಗಿ ಆರೋಪಣೆಗಳನ್ನು ಎತ್ತಿದರು. ಆದರೆ ಒಟ್ಟು ಈ ರಾಜ್ಯದಲ್ಲಿ ನೀರಾವರಿ ಪ್ರಮಾಣ ಎಷ್ಟಿದೆ, ವಿದ್ಯುತ್ ಸರಬರಾಜು ಮತ್ತು ವಿದ್ಯುತ್ ಬಳಕೆ ಎಷ್ಟಿದೆ, ಮತ್ತು ರಸ್ತೆ, ರೋಡ್ ಮೈಲೇಜ್ ಎಷ್ಟು ಇದೆ, ಗುಲ್ಬರ್ಗಾದಲ್ಲಿ ಮೊದಲು ಎಷ್ಟಿತ್ತು, ಈಗ ಎಷ್ಟಿದೆಯೆಂಬುದನ್ನು ಅಭ್ಯಾಸ ಮಾಡಿ ನೋಡಿದ್ದರೆ, ಅದರ ಸರಿಯಾದಂಥ ಅಂಕಿ ಅಂಶಗಳನ್ನು ತಿಳಿದಿದ್ದರೆ, ಈ ರೀತಿಯಾಗಿ ಆರೋಪ ಯಾರೂ ಮಾಡುತ್ತಿರಲಿಲ್ಲವೆಂದು ನಾನ್ನುಹೇಳುತ್ತೇನೆ. ಇವತ್ತಿನ-ದಿವಸ ನಾವು ವಿಚಾರಮಾಡಿ ನೋಡುವುದಾದರೆ, ಸರ್ಕಾರದವರು ಒದಗಿಸಿರುವ ಅಂಕಿ ಅಂಶಗಳ ಆಧಾರದ ಮೇಲೆ ಹೇಳಬೇಕಾದರೆ. ನೀರಾವರಿ ಪ್ರಮಾಣ ಶೇಕಡ ೧೦ ರಷ್ಟು ನಮ್ಮಲ್ಲಿದೆ. ಶೇಕಡ ೮.೫ ರಷ್ಟು ಗುಲ್ಬರ್ಗಾ ಜಿಲ್ಲೆಯಲ್ಲಿದೆ. ಇನ್ನು ರಸ್ತೆಗಳ ನಿರ್ಮಾಣದ ಬಗ್ಗೆ ವಿಚಾರ ಮಾಡಬೇಕಾಗಿದ್ದರೆ; ಒಂದೊಂದು ಡಿವಿಜನ್ನಿನಲ್ಲಿ ಒಂದೊಂದು ವಿಧವಾದ ರೋಡ್ ಮೈಲೇಜ್ ಪರ್ಸೆಂಟೇಜ್ ಇದೆ. ಇವತ್ತು ಬೆಂಗಳೂರು ಡಿವಿಷನ್ನನ್ನು ತೆಗೆದುಕೊಂಡರೆ ಅಲ್ಲಿ ಶೇಕಡ ೨೫ ಅಥವಾ ೨೬ ರಷ್ಟು ರೋಡ್ ಮೈಲೇಜ್ ಇದೆ. ಮೈಸೂರು ವಿಭಾಗದಲ್ಲಿ ಶೇಕಡ ೪೦ ರಷ್ಟು, ಬೆಳಗಾಂನಲ್ಲಿ ಶೇಕಡ ೨೬ ರಷ್ಟು, ಮತ್ತು ಗುಲ್ಬರ್ಗಾದಲ್ಲಿ ಶೇಕಡ ೧೦ ಕ್ಕಿಂತ ಕಡಿಮೆ ಇದೆ.

ಇನ್ನು ನೀರಾವರಿ, ಹಾಗೂ ವಿದ್ಯುತ್ ಸರಬರಾಜು ಮತ್ತು ವಿದ್ಯುತ್ ಬಳಕೆ ವಿಷಯವಾಗಿ ಹೇಳಬೇಕಾದರೆ ರಾಜ್ಯದಲ್ಲಿ ಬೇರೆ ಕಡೆಗಳಲ್ಲಿ ೫೭ ಯೂನಿಟ್ ಪರ್ ಹೆಡ್ ಇದ್ದರೆ ಗುಲ್ಬರ್ಗಾದಲ್ಲಿ ೩೧ ಯೂನಿಟ್ ಆಗಿದೆ. ಇದನ್ನು ಗಣನೆಗೆ ತೆಗೆದುಕೊಂಡರೆ ಗುಲ್ಬರ್ಗಾವು ರಾಜ್ಯದ ಹಿಂದುಳಿದ ವಿಭಾಗವೆಂದು ಸ್ಪಷ್ಟವಾಗಿ ಕಾಣುತ್ತದೆ. ಸರ್ಕಾರದವರು ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಗುಲ್ಬರ್ಗಾ ವಿಭಾಗವನ್ನು ಉಳಿದ ವಿಭಾಗಗಳ ಮಟ್ಟಕ್ಕೆ ತರಬೇಕಾದರೆ ಸ್ವಲ್ಪ ಹೆಚ್ಚಿಗೆ ಹಣವನ್ನು ಒದಗಿಸುವುದು ಸ್ವಾಭಾವಿಕ. ನಾವು ಅನೇಕ ಸಾರಿ ಪ್ರಶ್ನೆ ರೂಪದಲ್ಲಿ ಒತ್ತಾಯ ಪಡಿಸುತ್ತಿದ್ದೇವೆ. ಇನ್ನು ನೀರಾವರಿ ಕಾರ್ಯಗಳ ಬಗ್ಗೆ ಅನೇಕ ಮೇಳೆ ಪ್ರಸ್ತಾಪ ಮಾಡಿದ್ದೇವೆ ಆದರೂ ಸೂಮಾರು ೧೨—೧೩ ವರ್ಷಗಳಿಂದಲೂ ಗುಲ್ಬರ್ಗಾ ವಿಭಾಗದಲ್ಲಿ ಯಾವ ಒಂದು ದೊಡ್ಡ ಪ್ರಮಾಣದಲ್ಲಿ ನೀರಾವರಿಯನ್ನು ತೆಗೆದುಕೊಂಡಿದ್ದೀರಾ ಎಂದು ಕೇಳಿದರೆ ಅದಕ್ಕೆ ಉತ್ತರ ಶೂನ್ಯ ಬರುತ್ತದೆ. ಆದರೆ ಮೊನ್ನೆತಾನೇ ಬಹಳವಾಗಿ ಇದರ ಬಗ್ಗೆ ಒತ್ತಾಯ-ಮಾಡಿದ ಮೇಲೆ, ಇವತ್ತು ಗುಲ್ಬರ್ಗಾ ವಿಭಾಗದಲ್ಲಿ ನೀರಾವರಿ ಪ್ರಮಾಣವನ್ನು ತೆಗೆದುಕೊಂಡರೆ, ಗುಲ್ಬರ್ಗಾ ವಿಭಾಗದಲ್ಲಿ ಶೇಕಡ ೧.೩ರಷ್ಟು ಮತ್ತು ಬಿದರ್‌ನಲ್ಲಿ ೩.೫ರಷ್ಟು ಇದೆ.

ಇದು ಎದ್ದು ಕಾಣತಕ್ಕ ವಿಷಯ. ನಾವು ಎಷ್ಟು ಒತ್ತಾಯ ಮಾಡಿದರೂ ಈ ಪ್ರದೇಶದ ನೀರಾವರಿ ಅಭಿವೃದ್ಧಿ ಮಾಡುವುದನ್ನು ಅಲಕ್ಷ್ಯ ಮಾಡಿದ್ದಾರೆ. ಮೊನ್ನೆ ತಾನೆ ಕಾಂಚಿಯ ಪ್ರಾಜೆಕ್ಟನ್ನು ತೆಗೆದುಕೊಂಡು ಪೂರ್ವಭಾವಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು. ಇದನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ಣಮಾಡುವ ಭರವಸೆ ಕೊಡುತ್ತಿದ್ದಾರೆ. ಈ ಪ್ರಾಜೆಕ್ಟನ್ನು ತೆಗೆದುಕೊಂಡಿರುವುದು ಸಂತೋಷ ಇನ್ನು ಅನೇಕ ಮಧ್ಯಮ ತರಗತಿಯ, ಸಣ್ಣ ತರಗತಿಯ ಯೋಜನೆಗಳನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪೂರೈಸುವ ಭರವಸೆ ಕೊಡುತ್ತಾ ಇದ್ದಾರೆ ಇದಕ್ಕಾಗಿ ಸರಕಾರದವರಿಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಇನ್ನು ಕೃಷ್ಣ ನದಿಯ ಮೇಲ್ಭಾಂಡೆ ಯೋಜನೆ ವಿಷಯ ಮಾತನಾಡ-ಬೇಕಾದರೆ ಇದು ೨೦೦ ಕೋಟಿ ರೂಪಾಯಿ ಪ್ರಾಜೆಕ್ಟಿನ ಕೆಲಸ. ಒಂದೊಂದು ವರ್ಷಕ್ಕೆ ೨ ಕೋಟಿ ಮೂರು ಕೋಟಿ ಒದಗಿಸಿದರೆ ೫೦ ವರ್ಷಗಳಾದರೂ ಈ ಯೋಜನೆ ಪೂರ್ಣವಾಗುವುದಿಲ್ಲ. ಅಂಕಿ ಸಂಖ್ಯೆ ಗಳನ್ನು ನೋಡಿದರೆ ಇದುವರೆಗೆ ಮೂರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದಂತಾಗಿದೆ. ಈ ವರ್ಷ ಒಂದು ಕೋಟಿ ರೂಪಾಯಿ ಒದಗಿಸಿದ್ದಾರೆ. ಇದು ಬಹಳಷ್ಟು ಕಡಿಮೆ ಇದರಲ್ಲಿ ಅರ್ಧ ಹಣ ಸಿಬ್ಬಂದಿ ವೆಚ್ಚಕ್ಕಾಗಿ ಮತ್ತು ಅಧಿಕಾರಿಗಳ ತಿರುಗಾಟಕ್ಕಾಗಿ ಖರ್ಚಾಗಬಹುದು. ಆದುದರಿಂದ ಈಗ ಒದಗಿಸಿರುವ ಹಣ ಬಹಳ ಕಡಿಮೆ. ಈ ಕೆಲಸ ಬಹಳ ನಿಧಾನವಾಗಿ ಮಂದಗತಿಯಿಂದ ನಡೆಯುತ್ತಿದೆ. ಕೃಷ್ಣ ನದಿ ಮೇಲ್ಭಾಂಡೆ ಯೋಜನೆ ಬಗ್ಗೆ ರಾಯಚೂರು ಮತ್ತು ಬಿಜಾಪುರ ಭಾಗದ ಜನರ ದೃಷ್ಟಿಯಿಂದ ಬಹಳ ಮಹತ್ವದ ಯೋಜನೆ, ರಾಜ್ಯದ ದೃಷ್ಟಿಯಿಂದಲೂ ಅದು ಬೃಹತ್ ಯೋಜನೆ ಎಂದು ಹೇಳಬಹುದು. ಸರಕಾರ ಇದರ ಕಡೆ ಅಲಕ್ಷ್ಯ ಮಾಡುವ ನೀತಿಯನ್ನು ನೋಡಿದರೆ ಅವರಿಗೆ ಈ ಯೋಜನೆಯನ್ನು ಪೂರ್ಣ ಮಾಡುವುದಕ್ಕೆ ಆಸ್ಥೆ ಇಷ್ಟ ಇದೆಯೋ ಇಲ್ಲವೊ ಎಂದು ಅನುಮಾನವಾಗಿದೆ. ಈ ಕೆಲಸವನ್ನು ಮೈಸೂರು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿಗೆ ಕೊಟ್ಟಿದ್ದಾರೆ. ಅಲ್ಲಿಂದೊಂದು ತಿಂಗಳಿಂದ ಕೆಲಸ ಪೂರ್ತಿ ಆಗಿ ನಿಂತುಹೋಗಿದೆ. ಯಾವ ಕಾರಣದಿಂದ ಅದು ನಿಂತು ಹೋಗಿದೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ಇದು ಸರಕಾರ ವಿಚಾರ ಮಾಡತಕ್ಕ ವಿಷಯ. ಆದರೆ ಯಾವ ಒಂದು ಹಿರಿಯ ಘನ ಉದ್ದೇಶ ಇಟ್ಟುಕೊಂಡು ಮೈಸೂರು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿಗೆ ಸರ್ಕಾರದವರು ಅಸ್ತಿತ್ವಕ್ಕೆ ತಂದರೊ ಆ ಉದ್ದೇಶ ಪೂರ್ಣ ಆಗಿದೆಯೋ ಇಲ್ಲವೇ ಎನ್ನುವ ಪ್ರಶ್ನೆಯನ್ನು ಸ್ಪೋಟನೆ ಮಾಡಬೇಕು. ಈ

(ಶ್ರೀ ಕೆ. ಸಂಗನಗೌಡ)

ಮೈಸೂರು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ನಿರ್ಮಾಣ ಮಾಡುವ ಉದ್ದೇಶ ಸರ್ಕಾರ ನಿರ್ಮಾಣದ ಕಾರ್ಯದಲ್ಲಿ ಹೆಚ್ಚು ಮಿತವ್ಯಯವನ್ನು ಸಾಧಿಸಬೇಕು ಮತ್ತು ಉತ್ತಮವಾದ ಕೆಲಸ ಮಾಡಬೇಕು ಎನ್ನುವುದು ಅದರೆ ಇವರು ಈ ವರ್ಷದ ವರೆಗೆ ತೆಗೆದುಕೊಂಡ ಕೆಲಸದ ಪ್ರಮಾಣ ೭ ಕೋಟಿ ರೂಪಾಯಿಗಳಿದ್ದು ಮತ್ತು ಗಳಿಸಿದ ಲಾಭ ೫೬ ಸಾವಿರ ರೂಪಾಯಿ. ಇದು ಬಹಳ ವಿಷಾದನೀಯ ಮತ್ತು ಶೋಚನೀಯವಾದ ಸಂಗತಿ ಎಂದು ಈ ಪ್ರಸಂಗದಲ್ಲಿ ಹೇಳಬೇಕಾಗುತ್ತದೆ. ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಅನೇಕ ಕೆಲಸಗಳನ್ನು ಸಬ್‌ಲೆಟ್ ಮಾಡಿ ತೆಗೆದುಕೊಂಡು ನಾಲ್ಕಾರು ಲಕ್ಷ ರೂಪಾಯಿ ಕೆಲಸದ ಬಗ್ಗೆ ತಂಟೆ ಬಂದು ತಿಂಗಳ ಮೆಲ್ಪಟ್ಟು ಆ ಕೆಲಸ ನಿಂತು ಹೋಗಿದೆ. ಇದು ಬಹಳ ದುಃಖದ ಸಂಗತಿಯಾಗಿದೆ. ಕೃಷ್ಣ ಮೇಲ್ದಂಡೆ ಯೋಜನೆ ಬಗ್ಗೆ ಸರ್ಕಾರ ಆಸ್ತೆ ವಹಿಸದೆ ಹೋದರೆ ಆ ಭಾಗದ ಜನತೆ ಸರಕಾರಕ್ಕೆ ಬಹಳಷ್ಟು ಶಪಿಸುವ ಪ್ರಸಂಗ ಬರಬಹುದೆಂದು ಹೇಳಬಯಸುತ್ತೇನೆ. ಈ ಕೃಷ್ಣ ಮೆಲ್ದಂಡೆ ಯೋಜನೆಯಿಂದ ೧೯-೨೦ ಲಕ್ಷ ಎಕರೆಗೆ ನೀರು ಸಿಕ್ಕಿದರೂ ಸಹ ಕೆವಲ ಎಡದಂಡೆ ಯೋಜನೆ ವಿಷಯ ಯೋಚನೆ ಮಾಡುತ್ತಿದ್ದಾರೆ. ಬಲದಂಡೆ ಯೋಜನೆಯ ವಿಷಯವಾಗಿ ಚಕಾರ ಶಬ್ದವನ್ನೂ ಮಾಡುತ್ತಿಲ್ಲ. ಸೆಕೆಂಡ್‌ಸ್ಟೇಜ್ ಎಂದು ಏನು ಹೇಳುತ್ತಿದ್ದಾರೆ ಆ ಕೆಲಸವನ್ನು ಸರಕಾರದವರು ಹೆಚ್ಚು ವಿವಂಚನೆಯಿಂದ ಮಾಡುತ್ತಿದ್ದಾರೆಯೇ ಎಂದು ರಾಯಚೂರು ಭಾಗದ ಜನರು ಬಹಳಷ್ಟು ವಿಚಾರಮಗ್ನರಾಗಿದ್ದಾರೆ. ಸರ್ಕಾರದವರು ಈ ವಿಷಯದಲ್ಲಿ ತಾಳಿದ ನಿಲುವಿನ ಬಗ್ಗೆ ಅವರಿಗೆ ಸಂಶಯ ಬರುವಹಾಗೆ ಕಾಣುತ್ತದೆ. ೫ ಲಕ್ಷ ಎಕರೆ ಇರುವುದರಿಂದ ಹೆಚ್ಚಿಗೆ ಬಲದಂಡೆ ಯೋಜನೆಯಿಂದ ರಾಯಚೂರು ಭಾಗಕ್ಕೆ ನೀರು ಸಿಕ್ಕುತ್ತದೆ. ಕೇವಲ ರಾಯಚೂರು ಭಾಗಕ್ಕೆ ಅಷ್ಟೇ ಅಲ್ಲ, ಬಿಜಾಪುರಕ್ಕೂ ಈ ಕಾಲುವೆಯಿಂದ ನೀರು ಸಿಕ್ಕುತ್ತದೆ. ಆದರೆ ಸರ್ಕಾರದವರು ಇದರ ಬಗ್ಗೆ ಅಷ್ಟು ಆಸಕ್ತಿವಹಿಸುತ್ತಾ ಇಲ್ಲ. ನೆಪ ಮಾತ್ರಕ್ಕೆ ಈ ಕೆಲಸವನ್ನು ಮಾಡುತ್ತಾ ಇದ್ದಾರೆಂದು ಹೇಳುತ್ತೇನೆ. ಮೊನ್ನೆ ತಾನೆ ಮುಖ್ಯ ಮಂತ್ರಿಗಳು ಕಾವೇರಿ ಜಲಾನಯನದ ಬಗ್ಗೆ ಪ್ರಸ್ತಾಪಮಾಡಿ, ಹೇಮವತಿ, ಹಾರಂಗಿ ಮತ್ತು ಕಬಿನಿ ಈ ಯೋಜನೆಗಳ ಬಗ್ಗೆ ಅತ್ಯುತ್ತಮವಾದ ನೀತಿಯನ್ನು ತೋರಿಸಿಕೊಟ್ಟು, ಅದನ್ನು ತೀವ್ರವಾಗಿ ಮುಗಿಸಬೇಕು ಎನ್ನುವ ಸಂಕಲ್ಪ ಮಾಡಿರುವುದು ಮೆಚ್ಚತಕ್ಕ ವಿಷಯ. ಈ ದಿವಸ ನಾನು ಮುಖ್ಯ ಮಂತ್ರಿಗಳನ್ನು ರಾಜ್ಯಸರಕಾರದವರನ್ನು ಕೇಳುತ್ತೇನೆ, ಈ ಕೃಷ್ಣ ಮೇಲ್ದಂಡೆ ಯೋಜನೆಯನ್ನು ತೆಗೆದು ಕೊಂಡು ಅತ್ಯಲ್ಪ ಅವಧಿಯಲ್ಲಿ, ತೀವ್ರ ಗತಿಯಿಂದ ಕೆಲಸಮಾಡಿ ಪೂರ್ಣ ಮಾಡುತ್ತಾರೆಯೇ ಎಂದು. ಏಕ ಕಾಲದಲ್ಲಿ ಎಡದಂಡೆ ಮತ್ತು ಬಲದಂಡೆಯೋಜನೆಯನ್ನು ತೆಗೆದುಕೊಳ್ಳುತ್ತೇವೆ ಎಂದು ವೀರ ಪ್ರತಿಜ್ಞೆ ಮಾಡತಕ್ಕ ಪ್ರಸಂಗ ಇದೆ. ಅದಕ್ಕೆ ಮುಖ್ಯ ಮಂತ್ರಿಗಳು ಓ ಕೊಡುತಾರೆಯೇ ಎಂದು ಕಳಕಳಿಯಿಂದ ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಸ್ವಾಮಿ ಇನ್ನು ಲಿಫ್ಟ್ ಇರಿಗೇಷನ್ ಬಗ್ಗೆ ಒಂದೆರಡು ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಸರ್ಕಾರದವರು ಇದನ್ನು ಕೋ-ಆಪರೇಟೀವ್ ಸೆಕ್ಟರ್‌ಗೆ ವಹಿಸಿಕೊಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದಾರೆ ಎಂದು ಕೇಳಿದ್ದೇನೆ. ಇದು ಸೂಕ್ತವಿಲ್ಲ ಎಂದು ನನ್ನ ಅಭಿಪ್ರಾಯ. ಈಗ ಸರ್ಕಾರ ನಿರ್ಣಯ ಮಾಡಿದ ಪ್ರಕಾರ ಶೇರ್ ಬಂಡವಾಳ ಹತ್ತನೇ ಒಂದು ಭಾಗ ರೈತರಿಂದ ಕೊಡಿಸತಕ್ಕ ಯೋಜನೆ ಇದೆ. ಅದರೆ ಅದಕ್ಕೆ ಜನ ಓ ಕೊಡುವುದಿಲ್ಲ ಮತ್ತು ಅವರ ಸಪಕಾರ ಸಿಕ್ಕಲಿಕ್ಕೆ ಸಾಧ್ಯವಿಲ್ಲ ಕನಿಷ್ಟ-ಪಕ್ಷ ೫೫ ಪರ್ಸೆಂಟ್ ಸೊಸೈಟಿ ರಿಜಿಸ್ಟರ್ ಮಾಡುವುದಕ್ಕೆ ಮುಂಚೆ ಕೂಡಿಸತಕ್ಕ ಕಂಡೀಷನ್ಸ್ ಏನಿದೆ ಅದು ಒಪ್ಪತಕ್ಕದಲ್ಲ, ರೈತರಿಂದ ಆಗತಕ್ಕದ್ದು ಅಲ್ಲ. ಆದುದರಿಂದ ಸರಕಾರ ಈ ದೆಸೆಯಲ್ಲಿ ಪುನಃ ವಿಚಾರ ಮಾಡಿ ಪರಿಶೀಲನೆ ಮಾಡಬೇಕೆಂದು ಕೇಳುತ್ತೇನೆ. ಇನ್ನು ೧೦-೧೫ ವರ್ಷಗಳಿಂದ ರಾಜ್ಯದ ನಾನಾ ಭಾಗಗಳಲ್ಲಿ ಸಾಕಷ್ಟು ಹಣ ಖರ್ಚುಮಾಡಿ ರಸ್ತೆ ನಿರ್ಮಾಣ ಕಾರ್ಯ ತೆಗದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಷಯ ಸರಕಾರದ ಗಮನಕ್ಕೆ ತರಬಯಸುತ್ತೇನೆ. ಅನೇಕ ಕಡೆ ಪಿ.ಡಿ. ವರ್ಕ್ಸ್, ಮುಖಾಂತರ ಮಾಡಿದ ರಸ್ತೆಗಳು ಅಪೂರ್ಣವಾಗಿ ಉಳಿದಿವೆ ಅಲ್ಲಿ ಕೋಟಿಗಟ್ಟಲೆ ಹಣ ಖರ್ಚುಮಾಡಿ ರಸ್ತೆ ನಿರ್ಮಾಣ ಮಾಡಿದ್ದಾರೆ. ಅವುಗಳನ್ನು ಯಾರೂ ಮೇಯಿನ್ ಟೇನ್ ಮಾಡುತ್ತಾ ಇಲ್ಲ. ಅವುಗಳನ್ನು ಸರಿಯಾಗಿ ಮೆಯಿನ್‌ಟೇನ್ ಮಾಡದೆ ಇದ್ದರೆ ಅದಕ್ಕಾಗಿ ಖರ್ಚುಮಾಡಿದ ಹಣ ವೇಸ್ಟ್ ಆಗುತ್ತದೆ ಎಂದು ಹೇಳಬಯಸುತ್ತೇನೆ. ಮೊನ್ನೆ ತಾನೆ ತಾಲ್ಲೂಕು ಬೋರ್ಡಿನವರಿಗೆ ಇಂತಹ ರಸ್ತೆಗಳನ್ನು ವಹಿಸಿ ೧೫೦ ರೂಪಾಯಿ ಪರ್ ಮೈಲಿ ಮೇನಟ್‌ನೆನ್ಸ್ ಗ್ರ್ಯಾಂಟ್ ಕೊಡಬೇಕೆಂದು ಸರಕಾರದವರು ನಿರ್ಣಯ ಮಾಡಿದ್ದಾರೆ. ಅದು ಆಗತಕ್ಕದ್ದು ಅಲ್ಲ. ಆಲ್ ಇಂಡಿಯಾ ರೋಡ್ ಪ್ಲಾನ್ ಪ್ರಕಾರ ಒಂದು ರೋಡ್ ಮೇನಟೆನೆನ್ಸ್‌ಗೆ ಒಂದು ನ್ಯಾಷನಲ್ ಸ್ಟ್ಯಾಂಡರ್ಡ್ಸ್ ನಿಗದಿ ಮಾಡಿದ್ದಾರೆ. ಇದರಿಂದ ರೂರಲ್ ಕಮ್ಯೂನಿಕೇಷನ್ ರಸ್ತೆಗಳಿಗೆ ಕನಿಷ್ಟಪಕ್ಷ ೫ನೂರು ರೂಪಾಯಿಗಳಾದರೂ ಕೊಡಬೇಕು. ಹಾಗೆ ಕೊಡದಿದ್ದರೆ ಈ ಕೆಲಸವನ್ನು ತಾಲ್ಲೂಕು ಬೋರ್ಡಿನವರು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ ಕೆಲಸ ತಕ್ಷಣ ಮಾಡದೆ ಹೋದರೆ ಇನ್ನು ಕೆಲವು ಸಮಯದಲ್ಲಿ ಯಾವ ರಸ್ತೆಗಳೂ ಉಳಿಯುವುದಿಲ್ಲ ಎಂದು ಪೇಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಬಗ್ಗೆ ಒಂದು ವಿಷಯ ಹೇಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಏನಂ ಒಂದು ನಿಯಮ ಅನುಸರಿಸುತ್ತಿದ್ದಾರೆ, ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದು ಲಕ್ಷಕ್ಕಿಂತ ಹೆಚ್ಚು ಕೆಲಸವನ್ನು ತೆಗೆದುಕೊಳ್ಳುವುದಿಲ್ಲ ಎಂದು ಏನು ಹೇಳುತ್ತಿದ್ದಾರೋ ಅದು ಒಪ್ಪತಕ್ಕ ವಿಷಯವಲ್ಲ. ರಾಜ್ಯವನ್ನು ವಿಂಗಡಿಸಿ ನೋಡಿದರೆ ಒಂದು ಭಾಗ ಹಿಂದುಳಿದುದ್ದು, ಕೆಲವು ಭಾಗ ಮುಂದುವರಿದಿದೆ. ಹಾಗೆ ಹಿಂದುಳಿದ ತಾಲ್ಲೂಕನ್ನು ಮುಂದುವರಿದ ತಾಲ್ಲೂಕುಗಳ ಮಟ್ಟಕ್ಕೆ ತರಬೇಕಾದರೆ ವಿಶೇಷವಾದ ಯೋಜನೆಗಳನ್ನು ರೂಪಿಸಿ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ ಆ ಭಾಗಗಳನ್ನು ಮುಂದೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಆದಲ್ಲದೆ ನಾವು ಒಂದೇ ತರಹ ಯೋಜನೆ ಮಾಡಿ ಒಂದು ತಾಲ್ಲೂಕಿಗೆ ಒಂದು ಲಕ್ಷ ರೂಪಾಯಿಯನ್ನು ಖರ್ಚು ಮಾಡುತ್ತೇವೆ, ಅದಕ್ಕಿಂತ ಹೆಚ್ಚು ಖರ್ಚುಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ ಮುಂದುವರಿದ ಭಾಗಗಳು ಮುಂದುವರಿಯುತ್ತಾ ಇರುತ್ತವೆ. ಹಿಂದುಳಿದ ಭಾಗಗಳುಹಿಂದೆ ಹಿಂದೆ ಬೀಳುತ್ತಾ ಇರುತ್ತದೆ. ಆ ರೀತಿ ಆಗುವುದು ಒಳ್ಳೆಯದಲ್ಲ. ಈ ಸಂದರ್ಭದಲ್ಲಿ ಇನ್ನೊಂದು ವಿಷಯ ಹೇಳುತ್ತೇನೆ. ಬಜೆಟಿನಲ್ಲಿ ಒಂದು ಕೆಲಸಕ್ಕಾಗಿ ಹಣವನ್ನು ತೆಗೆದಿಟ್ಟಮೇಲೆ ಆ ಕೆಲಸವನ್ನು ಪೂರ್ಣ ಮಾಡದೆ ಇನ್ನೊಂದು ಕೆಲಸವನ್ನು ತೆಗೆದುಕೊಳ್ಳುವುದು ಸರಿಯಲ್ಲ. ನಮ್ಮ ತಾಲ್ಲೂಕಿನಲ್ಲಿ ಹಿಂದೆ ಒಂದು ಯೋಜನೆಯನ್ನು ೧೯೬೯-೭೦ರ ಪ್ಲಾನಿನಲ್ಲಿ ಸೇರಿಸಿದ್ದರೂ ಅದರ ಒಂದು ಮೈಲಿ ಕೆಲಸವೂ ಆಗಿಲ್ಲ. ಹೀಗಿರುವಾಗ ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಖರ್ಚುಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರೆ ಹಿಂದುಳಿದ ತಾಲ್ಲೂಕು ಹಿಂದುಳಿಯಬೇಕಾಗುತ್ತದೆ. ಆದುದರಿಂದ ಅಂತಹ ಕಡೆ ಹೆಚ್ಚು ಹೆಚ್ಚು ಹಣವನ್ನು ಒದಗಿಸಿ ಬಜೆಟಿನಲ್ಲಿ ಸೇರಿಸಿದ ಕೆಲಸವನ್ನು ಪೂರ್ಣ ಮಾಡುವುದು ಸರ್ಕಾರದವರ ಜವಾಬ್ದಾರಿ ಇರುತ್ತದೆ. ಈ ದೃಷ್ಟಿಯಿಂದ ಯಾವ ಯಾವ ತಾಲ್ಲೂಕುಗಳು ಹಿಂದೆ ಇವೆಯೋ ಅವುಗಳನ್ನು ಮೇಲ್ಮಟ್ಟಕ್ಕೆ ತರಬೇಕಾದರೆ ಮತ್ತು ಇತರ ಭಾಗಗಳು ಮುಂದಕ್ಕೆ ಬರಬೇಕಾದರೆ ಅವುಗಳಿಗೆ ಹೆಚ್ಚು ಹಣವನ್ನು ಒದಗಿಸಿ ನೀರಾವರಿ ಕೆಲಸವಾಗಲಿ, ರಸ್ತೆ ನಿರ್ಮಾಣವಾಗಲಿ ವಿದ್ಯುಚ್ಛಕ್ತಿ ಸರಬರಾಜಾಗಲಿ, ಅಂತಹ ಕೆಲಸಗಳನ್ನು ಕೈಗೊಂಡು ಹಿಂದುಳಿದ ಭಾಗಗಳನ್ನು ಮೇಲ್ಮಟ್ಟಕ್ಕೆ ತರಬೇಕೆಂದು ಸರ್ಕಾರವನ್ನು ಕಳಕಳಿಯಿಂದ ಪ್ರಾರ್ಥಿಸಿಕೊಂಡು ನನಗೆ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅವಕಾಶಕೊಟ್ಟ ಉಪಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

ಶ್ರೀ ಕೆ ಎನ್ ವೀರಪ್ಪಗೌಡ (ಶ್ರೀಂಗೆರಿ): — ಮಾನ್ಯ ಅಧ್ಯಕ್ಷರೇ, ಈ ದಿವಸ ಪಿ ಡಬ್ಲ್ಯುಡಿ ಇಲಾಖೆಗೆ ಸಂಬಂಧಪಟ್ಟ ರತಕ್ಕ ಡಿಮ್ಯಾಂಡನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇರಿಗೇಷನ್ ಇತ್ಯಾದಿಗಳ ಬಗ್ಗೆ ಕೆಲವು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸಂಗನಗೌಡರು ಮಾತನಾಡತಕ್ಕ ಸಂದರ್ಭದಲ್ಲಿ ಹಿಂದುಳಿದ ಪ್ರದೇಶಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಒತ್ತಿ ಹೇಳಿದರು. ಬಹುಶಃ ಅದನ್ನು ಎಲ್ಲರೂ ಕೂಡ ಅರಿತುಕೊಳ್ಳಬೇಕಾದು, ನಿಜ. ಒಮ್ಮೆ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಪಿ ಡಬ್ಲ್ಯುಡಿ ಮಿನಿಸ್ಟರಾಗಿದ್ದಾಗ ವಿಯೂರ್ ಘಟ್ ರೋಡನ್ನು ಮಾಡುವುದಕ್ಕೆ ಕರೆದುಕೊಂಡು ಹೋಗಿದ್ದೆವು. ಅಲ್ಲಿಗೆ ಹೋಗಿ ಬರುವಾಗ ಏನ್ರಿ ವೀರಪ್ಪಗೌಡರೇ ನಮ್ಮ ಊರೇ ಹಿಂದುಳಿದುದ್ದು ಅಂತ ಮಾಡಿದ್ದೆ ನಿಮ್ಮದು ನಮಗಿಂತ ಹಿಂದುಳಿದಿದೆಯೆಲ್ಲ ಮಳೆಗಾಲದಲ್ಲಿ ಹೇಗೆ ಇಲ್ಲಿ ಹೋಗಿ ಬರುತ್ತೀರಿ ಅಂತ ಅಂದರು. ಇದು ಅವರ ಜಾಪಕದಲ್ಲಿ ಉಳಿದಿದೆಯೋ ಇಲ್ಲವೊ ಗೊತ್ತಿಲ್ಲ ಕೆಲವು ಸಂದರ್ಭದಲ್ಲಿ ಬಹುಶಃ ಇದನ್ನು ಬದಲಾಯಿಸಿಕೊಳ್ಳಬೇಕಾಗಬಹುದು ನಮ್ಮ ಹಣಕಾಸಿನ ಸಚಿವರು ಮಾಡಿದ ಭಾಷಣದ ೯ನೇ ಪುಟದಲ್ಲಿ — ''ಬೆಂಬಲದ ಭದ್ರತೆ'' ಎಂಬ ಶಬ್ದವನ್ನು ಉಪಯೋಗ ಮಾಡಿದ್ದಾರೆ. ಆ ರೀತಿ ಕೆಲಸವಾಗುತ್ತಿದೆಯೊ ಹೊರತು ಹಿಂದುಳಿದ ಪ್ರದೇಶಗಳಲ್ಲಿ ಯಾವ ಕಡೆ ಹೆಚ್ಚಿನ ಅಭಿವೃದ್ಧಿಯಾಗುತ್ತದೆಯೋ ಏನೋ ಗೊತ್ತಿಲ್ಲ. ಈ ಕಡೆ ಹಳೇ ಮೈಸೂರು ಅಂತ ಅನ್ನುವುದು ಇವೆ, ಆ ಕಡೆ ಕರ್ನಾಟಕದ ಭಾಗಗಳು ಇವೆ, ಎಲ್ಲೆಲ್ಲು ಎಷ್ಟರ ಮಟ್ಟಿಗೆ ಕೆಲಸಕಾರ್ಯಗಳಾಗಿವೆ ಎಂಬುದರ ಬಗ್ಗೆ ಅಂಕಿಅಂಶಗಳನ್ನು ಇಟ್ಟಿದ್ದಾರೆ. ತಾವು ಬಜೆಟನ್ನು ಬೇಕಾದರೂ ನೋಡಿ. ಪುಟ ೪೬೦ ರಿಂದ ೪೭೬ ರವರೆಗೆ ಇರತಕ್ಕ ಅಂಕಿ ಅಂಶಗಳನ್ನು ಲೆಕ್ಕ ಹಾಕಿ ನೋಡಿದರೆ ಹೊಸ ಪ್ರದೇಶ ಅಂತ ಏನು ಹೇಳುತ್ತೇವೆ ಅದಕ್ಕೆ ೯೮ ಲಕ್ಷದ ೬೨ ಸಾವಿರದ ನೂರು ರೂಪಾಯಿಗಳನ್ನು ಹೋದ ಸಾಲಿನಲ್ಲಿ ಒದಗಿಸಿದ್ದಾರೆ. ಹಳೇ ಮೈಸೂರು ಪ್ರದೇಶಕ್ಕೆ ೮೦ ಲಕ್ಷದ ೧೮ ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ಈ ಸಾಲಿನಲ್ಲಿ ೮೦ ಲಕ್ಷ ಚಿಲ್ಲರೆ ರೂಪಾಯಿಗಳಿಗೆ ಬದಲಾಗಿ ನಮಗೆ ಕೊಟ್ಟಿರುವುದು ೨೫ ಲಕ್ಷ ರೂಪಾಯಿಗಳು ಮಾತ್ರ ಎಂಬುದು ಯಾರು ನೋಡಿದರೂ ಗೊತ್ತಾಗುತ್ತದೆ. ಹೀಗಿರುವಾಗ ನಮ್ಮ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಹೇಗೆ ಆಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿ ಬರುತ್ತದೆ. ನಾವು ಏನಾದರೂ ಹೇಳಿದರೆ ಸುಮ್ಮನೆ ಮಾತನಾಡುತ್ತೀರಿ, ಭಾಷಣ ಮಾಡುತ್ತೀರಿ ಅಂತ ಹೇಳುತ್ತಾರೆ. ಶ್ರೀಮಾನ್

(ಶ್ರೀ ಕೆ. ಎನ್. ವೀರಪ್ಪಗೌಡ)

ರಾಮಕೃಷ್ಣ ಹೆಗಡೆಯವರು ಚಿಕ್ಕಮಗಳೂರು ಜಿಲ್ಲೆಗೆ ಈ ಸಾರಿ ಹೆಚ್ಚು ಹಣ ಖರ್ಚುಮಾಡುವಂತಹ ಕೆಲಸಕಾರ್ಯಗಳನ್ನು ಸೇರಿಸಿದ್ದೇವೆ ಅಂತ ಹೇಳುತ್ತಾರೆ, ಹೊಸ ಎಸ್ಟಿಮೇಟ್ ಮಾಡಿರುವುದು ಯಾವುದೊಂದನ್ನೂ ಸೇರಿಸಿದಂತೆ ಕಾಣಲಿಲ್ಲ. ೧೦—೧೫ ವರ್ಷಗಳಿಂದ ಇರತಕ್ಕ ಎಸ್ಟಿಮೇಟುಗಳನ್ನೇ ಸೇರಿಸಿಕೊಂಡು ಅವುಗಳನ್ನು ಬಜ್ಜೆಟ್‌ನಲ್ಲಿ ಒಂದೊಂದು ಐಟಂ ಆಗಿ ಸೇರಿಸಿದ್ದಾರೆ, ಇನ್ನು ರಸ್ತೆಗಳನ್ನು ತೆಗೆದುಕೊಂಡರೆ ನರಸಿಂಹರಾಜಪುರ-ಬಾಳೆಹೊನ್ನೂರು ರಸ್ತೆಗೆ ೯ ಲಕ್ಷ ರೂಪಾಯಿ ಮೇಲೆ ಕೊಟ್ಟು ಎಷ್ಟು ವರ್ಷವಾಯಿತು ? ತಾಲ್ಲೂಕು ಆಫೀಸು ಕಟ್ಟಡ ಕಟ್ಟಲು ಎಸ್ಟಿಮೇಟ್ ಎಲ್ಲಾ ಆಗಿದೆ ಎರಡೂವರೆ ಲಕ್ಷರೂಪಾಯಿ ಎಸ್ಟಿಮೇಟ್ ಮಾಡಿದ್ದಾರೆ ಇವತ್ತಿಗೂ ಕೂಡ ಆಗಿಲ್ಲ ಬೇರೆ ಹೊಸದಾಗಿ ಆದ ತಾಲ್ಲೂಕುಗಳಿಗೆ ಕಟ್ಟಡ ಆಯಿತು. ನಮ್ಮದು ಮಾತ್ರ ಸೇರುವಂತಿಲ್ಲ. ಎಂದರೆ ಇದು ಎಲ್ಲಿಗೆ ಹೋಗುತ್ತಾ ಇದೆ ಅಂತ ಅನ್ನುವುದು ಅರ್ಥವಾಗುವುದಿಲ್ಲ. ಬಜ್ಜೆಟ್‌ನಲ್ಲಿ ಸೇರಿಸಿದ್ದೇವೆ ಅಂತ ಹೇಳುತ್ತೀರಿ. ಹೊರತು ಕಾರ್ಯತಃ ಏನೂ ಆಗುತ್ತಿಲ್ಲ ವರ್ಷಕ್ಕೆ ಒಂದು, ಎರಡು, ಮೂರು ಹೊಸ ಎಸ್ಟಿಮೇಟಿನ ಕೆಲಸಗಳ ದರೂ ಬಜ್ಜೆಟಿನಲ್ಲಿ ಸೇರಿಸುವುದರ ಕಡೆಗೆ ಗಮನ ಕೊಡಬೇಕೆಂದು ತಮ್ಮ ಮೂಲಕ ಮಾನ್ ಮಂತ್ರಿಗಳನ್ನು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಶ್ರೀ ಲಕ್ಕಪ್ಪನವರು ಮಂತ್ರಿಗಳಾಗಿ ಬಂದು ಹೋದ ಮೇಲೆ ಮೊಯರ್ ಫಾಟ್ ವಿಷಯದಲ್ಲಿ ಫರ್ಸ್ಟ್ ಸ್ಟೇಜ್ ಸೆಕ್ಟೆಂಡ್ ಸ್ಟೇಜ್ ಅಂತ ತೆಗೆದುಕೊಳ್ಳುತ್ತೇವೆ ಅಂತ ಒಪ್ಪಿಕೊಂಡು ಈಗಾಗಲೇ ೪— ೫ ಮೈಲಿ ಇಂಪ್ರೂವ್ ಮಾಡಿದ್ದಾರೆ, ಟಾರ್. ಮಾಡಿಸಲು ಒಪ್ಪಿದ್ದಾರೆ ಇಂತಹದನ್ನು ಒಪ್ಪಿಕೊಳ್ಳಬೇಕಾದ ಸಂತೋಷ ವ್ಯಕ್ತಿ ಪಡಿಸಬೇಕಾದ್ದು ನ್ಯಾಯವಾಗಿದೆ. ಈ ರೀತಿ ಅನೇಕ ಕೆಲಸ ಕಾರ್ಯಗಳು ಆಗಬೇಕಾಗಿದೆ. ಆಗದೇ ಇರುವುದು ನೋಡಿ ನಮಗಂತೂ ಬಹಳ ವ್ಯಥೆಯಾಗುತ್ತದೆ. ಇನ್ನು ಇರಿಗೇಷನ್ ವಿಷಯ. ನಮ್ಮ ಕಡೆ ಇರಿಗೇಷನ್‌ಗೆ ಹೆಚ್ಚು ಹಣ ಖರ್ಚುಮಾಡದಿದ್ದರೂ ಚಿಂತೆ ಇಲ್ಲ ಮಳೆಯಿಂದ ಬೆಳೆಯುತ್ತೇವೆ. ಮಳೆಗಾಲದಲ್ಲಿ ಒಂದು ಹಳ್ಳಿಯಿಂದ ಮಾರ್ಕೆಟ್ ಪ್ರದೇಶಕ್ಕೆ ಬರುವುದಕ್ಕೆ ಒಂದು ರಸ್ತೆ ಮಾಡಿಕೊಟ್ಟರೆ ಅದೇ ವ್ಯವಸಾಯಕ್ಕೆ ಸಹಾಯಮಾಡಿದಂತೆ ಸಾಕು ಎಂದು ಹೇಳುತ್ತೇನೆ. ಮಲೆನಾಡನ್ನು ಸ್ಪೆಷಲ್ ಆಗಿ ಕನ್‌ಸಿಡರ್ ಮಾಡುವಂತಹ ಸ್ಕೀಂ ಯಾವುದೂ ಇಲ್ಲ ಅಂತ ಹೇಳಿದರೆ ಅದರ ಅಭಿವೃದ್ಧಿ ಹೇಗೆ ಆಗಬೇಕು ಅಂತ ಅನ್ನುವುದನ್ನು ತಾವು ಅರಿತುಕೊಳ್ಳಬೇಕು. ಇನ್ನು ಸರ್ಕಲ್‌ಗಳನ್ನು ತೆಗೆದುಕೊಳ್ಳಿ ಎರಡು ಡಿಪ್ಟ್ರಿಕ್ಟ್‌ಗೆ ಒಂದು ಸರ್ಕಲ್ ಅಂತ ಮಾಡಿದ್ದೀರಿ ಹಳೇ ಮೈಸೂರು ತೆಗೆದುಕೊಂಡರೆ ೪ ಡಿಪ್ಟ್ರಿಕ್ಟ್‌ಗೆ ಒಂದು ಸರ್ಕಲ್ ಅಂತ ಇದೆ. ಇವುಗಳ ಮೂಲಕ ಗಾಂಟ್ ಕೊಡುವಾಗ ಯಾವ ರೀತಿ ಆಗುತ್ತಿದೆ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. ಪಾಷ್ಯುಲೇಷನ್ ತೆಗೆದುಕೊಂಡರೆ ಹೆಚ್ಚು ಕಮ್ಮಿ ನಮ್ಮ ಹಳೇ ಮೈಸೂರಿನಲ್ಲಿ ಒಂದು ಕೋಟಿ ೫೫ ಲಕ್ಷ ಜನಸಂಖ್ಯೆ ಇದೆ. ಕೆಲವು ಸಲ ನಮ್ಮ ಆ ಕಡೆಗಿನ ಸ್ನೇಹಿತರು ಹೇಳುತ್ತಾರೆ. ಅಯ್ಯಯ್ಯೋ ಮೈಸೂರಿನ ಪರಿಸ್ಥಿತಿಗೆ ನಾವು ಬರಬೇಕಾದರೆ ಇನ್ನೂ ಎಷ್ಟೋ ವರ್ಷ ಬೇಕರಿ ಅಂತ. ಅಂದರೆ ನಾವು ಬಹಳ ಮುಂದುವರಿದಿರುವಾ ಹಾಗೂ, ನಾವು ಇನ್ನೂ ಏನೂ ಕೇಳಲೇ ಬೇಕಾಗಿಲ್ಲ ಸುಮ್ಮನೆ ಇರಬೇಕು ಅನ್ನುವ ಹಾಗೂ ಅರ್ಥ ಬರುವಂತೆ ಮಾತನಾಡುತ್ತಾರೆ. ವಿವರ ನಾವೂ ಕೊಡುತ್ತೇವೆ. ಅವರೂ ಕೊಡುತ್ತಾರೆ, ನಮ್ಮ ಹಾಗೆ ಅವರ ಭಾಗವೂ ಇಂಪ್ರೂವ್ ಆಗಬೇಕು ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಹಣ ಅನ್ಯಾಯವಾಗಿ ಖರ್ಚು ಆಗತ್ತಿರುವುದನ್ನು ನಿಲ್ಲಿಸಬೇಕು ಅದೇ ರೀತಿ ನಮ್ಮಲ್ಲೂ ಕೆಲವು ಇವೆ. ಚಿಕ್ಕಮಗಳೂರಿನ ದಾಸರ ಹಳ್ಳಿ ಕೆರೆ ತೆಗೆದುಕೊಳ್ಳಿ ೩ ಲಕ್ಷ ರೂಪಾಯಿನಲ್ಲಿ ಪ್ರಾರಂಭವಾದದ್ದು ೧೫ ಲಕ್ಷ ರೂಪಾಯಿನಲ್ಲಿ ಫೈನಲ್ ಆಗಿ ಆಗಬಹುದು ಕೇಳಿದ ಕೂಡಲೇ ಚಿಕ್ಕಮಗಳೂರಿನಲ್ಲಿ ಇಷ್ಟೊಂದು ದುಡ್ಡನ್ನು ಖರ್ಚು ಮಾಡಿದ್ದೇವೆ ಎಂದು ಹೇಳಬಹುದು. ಇವತ್ತು ೧೫ ಲಕ್ಷ ರೂಪಾಯಿ ಖರ್ಚು ಮಾಡಬೇಕಾದರೆ ಅದು ಸಾರ್ವಜನಿಕರ ಹಣ ಅಂತ ಅನ್ನುವುದನ್ನು ತಿಳಿದುಕೊಂಡು ಒಂದು ಎನ್‌ಕ್ವೈರಿ ಕಮಟಿ ಮಾಡಿಅದಕ್ಕೆ ನೀರು ಬರುತ್ತದೆಯೇ, ಅದರ ಕಂಟ್ರಾಕರು ಯಾರು ಎಂಬುವನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ೧೫ ಲಕ್ಷ ರೂಪಾಯಿ ಅನ್ಯಾಯವಾಗಿ ವೇಸ್ಟ್ ಆಗುತ್ತಾ ಇದೆ. ಈಗ ಇನ್ನೊಂದು ಕಂಟ್ರಾಕ್ಟ್ ಸಿಗಲಿ ಎಂಬ ಆಸೆಗೆ ಹೊನ್ನಮ್ಮನ ಹಳ್ಳಕ್ಕೆ ಅಣೆಕಟ್ಟು ಹಾಕಿ ಈ ಕೆರೆಗೆ ನೀರು ತರುವುದು ಪ್ರಾರಂಭವಾಗಿದೆ. ಇದಕ್ಕೆ ೧೧/೨ ಕೋಟಿ ರೂಪಾಯಿಗಳು ಬೇಕು ಇದರಿಂದ ಪ್ರಯೋಜನ ವಾಗುತ್ತದೆಯೇ. ಈ ಕೆರೆಯನ್ನು ಯಾವ ಇಂಜಿನಿಯರು ರೆಕಮೆಂಡ್ ಮಾಡಿದರು, ೩ ಲಕ್ಷ ರೂಪಾಯಿ ಇದ್ದ ರಿವೈಸ್ಡ್ ಎಸ್ಟಿಮೇಟ್ ೧೫ ಲಕ್ಷ ರೂಪಾಯಿ ಆಗಬೇಕಾದರೆ ಕಾರಣ ಏನು ಎಂಬುದನ್ನು ವಿಚಾರ ಮಾಡಬೇಕು ಇಂತಹ ವಿಷಯಗಳಲ್ಲಿ ಸರ್ಕಾರದವರು ಕ್ರಮ ತೆಗೆದುಕೊಳ್ಳುವುದಕ್ಕೆ ಏಕೆ ಹಿಂದುಮುಂದು ನೋಡುತ್ತಾರೆಯೋ ಗೊತ್ತಿಲ್ಲ. ಆರ್. ಸಿ ರೋಡ್ ವಿಷಯದಲ್ಲೂ ಕೂಡ ಇದೇ ರೀತಿ ಆಗಿದೆ. ತಾಲ್ಲೂಕು ಬೋರ್ಡಿನವರಿಗೆ ಈ ಬಗ್ಗೆ ನೂರು ರೂಪಾಯಿ ಆದರೂ ಕೊಡಿ ಇನ್ನೂರು ರೂಪಾಯಿ ಆದರೂ ಕೊಡಿ. ೩೦೦ ರೂಪಾಯಿ ಕೆಲಸ ಪಾಡಿ ೧೫೦ ರೂಪಾಯಿಗೆ ಎಕ್ಸಿಕ್ಯೂಟಿವ್ ಇಂಜಿನಿಯರ ಕೌಂಟರ್ ಸಿಗ್ನೇಚರ್ ಮಾಡಿಸಬೇಕು ಎಂದರೆ ಚುನಾಯಿತರಾಗಿ ಬಂದಿರತಕ್ಕ ಒಂದು ತಾಲ್ಲೂಕು ಬೋರ್ಡಿನ ಸದಸ್ಯರ ಮೇಲೆ ಇಷ್ಟು ಅನುಮಾನ ಪಟ್ಟರೆ ಇನ್ನು ಯಾರ ಮೇಲೆ ಎಷ್ಟು

ಅನುಮಾನ ಪಡುತ್ತೀರೋ ಗೊತ್ತಿಲ್ಲ. ಅದುದರಿಂದ ಇಷ್ಟು ರಸ್ತೆ ಇದೆ, ಇಷ್ಟು ಹಣ ಕೊಡುತ್ತೇವೆ ಖರ್ಚುಮಾಡಿ ಎಂದು ಹೇಳಿ ಅದರಂತೆ ಕೆಲಸಮಾಡಲು ಅವಕಾಶ ಮಾಡಿದಮೇಲೆ ಸರಿಯಾಗಿ ಮೈಂಟೆನೆನ್ಸ್ ಆಗಿದೆಯೇ ಇಲ್ಲವೇ ನೋಡಿಕೊಳ್ಳಬೇಕು.

ಇನ್ನು ನೀರಿನ ತೆರಿಗೆ. ಮಲೆನಾಡಿನಲ್ಲಿ ಹಿಂದೆ ಸರ್ವೆ ಸೆಟ್ಲ್‌ಮೆಂಟ್ ಆದಾಗ ಸರಕಾರದವರು ನೀರು ಸರದಿ ಎಂದು ಕೆಲವಕ್ಕೆ ಬರೆದಿದ್ದಾರೆ. ಅಲ್ಲಿ ಮಳೆ ಬಂದಾಗ ಮಾತ್ರ ನೀರು ಹರಿಯುವುದು. ಅಂಥ ಕಡೆಗೆ ನಾಲ್ಕುಐದು ವರ್ಷದ ಬಾಕಿ ಸೇರಿಸಿ ವಸೂಲು ಮಾಡುತ್ತಿದ್ದಾರೆ. ಹೀಗಿದೆ ಇದು ಸರಿಯಲ್ಲ ಎಂದು ಹೇಳಿದರೆ ಬೇಕಾದರೆ ಅಪೀಲು ಮಾಡಿ ಎಂದು ಹೇಳುವರು. ಅಪೀಲು ಮಾಡಲು ರೈತರಿಗೆ ಸಾಧ್ಯವೇ ? ಅವರು ನಿರ್ವಾಹವಿಲ್ಲದೆ ಈಗಾಗಲೆ ಸಾಲಸೋಲ ಮಾಡಿಕೊಂಡಿರುವಾಗ ಕಾನೂನಿನಲ್ಲಿ ಅವಕಾಶವಿದೆ ಅಪೀಲು ಮಾಡಲಿ ಎಂದು ಹೇಳಿದರೆ ಹೇಗೆ ? ಇದು ಸರಿಯಲ್ಲ. ರೆ ತರ ಮಟ್ಟ ವಲ್ಲರಿಗೂ ಗೊತ್ತಿದೆ ಅದುದರಿಂದ ಅಪೀಲುಮಾಡಬೇಕೆಂಬ ವಿಚಾರಬಿಟ್ಟು ನಿಮ್ಮ ತಹಸೀಲ್ದಾರರಿಗೆ ಮತ್ತು ಅಸಿಸ್ಟೆಂಟ್ ಎಂಜಿನಿಯರಿಗೆ ಸೂಚನೆ ಕೊಟ್ಟು ಇರುವ ತೊಂದರೆಯನ್ನು ತಪ್ಪಿಸಬೇಕು.

ಸೇತುವೆಗಳ ವಿಚಾರದಲ್ಲಿ ಒಂದು ಪ್ರಾರ್ಥನೆ ಮಾಡಬೇಕಾಗಿದೆ. ಟೆಕ್ನಿಕಲ್ಲಾಗಿ ಒಬ್ಬ ಅಧಿಕಾರಿ ಅಂದಾಜು ಮಾಡಿ ಶಿಫಾರಸು ಮಾಡಿದಮೇಲೆ ಅದಕ್ಕೆ ತಲೆಬಾಗುವುದು ಒಳ್ಳೆಯದು. ಹಾಗಿಲ್ಲದೆ ಪುನ: ಬೇರೊಬ್ಬರಿಂದ ವರದಿ ತರಿಸಿದರೆ ಎರಡು ವರದಿ ಬಂದು ಒಬ್ಬರಮೇಲೆ ಅನುಮಾನ ಬಂದಹಾಗೆ ಆಗುವುದಕ್ಕೆ ಕ್ರಮ ತೆಗೆದುಕೊಳ್ಳಬೇಕಾಗುವುದು. ಎಂಜಿನಿಯರುಗಳಲ್ಲಿ ಒಬ್ಬರು ವರದಿ ಕೊಟ್ಟರೆ ನಂತರ ಬೇರೆಬೇರೆ ವರದಿಗಳನ್ನು ತರಿಸುವುದು ಸರಿಯಲ್ಲ. ಹಾಗೆ ಮಾಡಿದರೆ ಅದು ರಾಜಕೀಯ ವರದಿ ಎಂದು ಹೇಳಬೇಕಾಗುವುದು. ಒಬ್ಬರ ಮೇಲೆ ಕ್ರಮ ತೆಗೆದುಕೊಳ್ಳಲು ಅವಕಾಶವಿಲ್ಲದಿರುವಂತೆ ರಾಜಕೀಯಕ್ಕೆ ಅವಕಾಶ ವಿಲ್ಲದಂತೆ ಜಾಗ್ರತೆ ಮಂಜೂರುಮಾಡಿ ಕೆಲಸ ಪ್ರಾರಂಭಿಸಿದರೆ ಅನುಕೂಲವಾಗುವುದು. ಹಾಗೆ ಮಾಡದಿದ್ದರೆ ತರಲೆ ಬರುವುದು, ಒಂದೇ ಮಾರ್ಗವಾಗಿ ಸರ್ಕಾರವೇ ಅವಕಾಶ ಕೊಟ್ಟಂತೆ ಆಗುತ್ತೆ. ಇಂಥಾದ್ದಕ್ಕೆ ಅವಕಾಶ ಕೊಡಲಾರರೆಂದು ಭಾವಿಸುತ್ತೇನೆ.

† ಶ್ರೀ ಸೋಲೂರು ಸಿದ್ದಪ್ಪ (ಕುದೂರು) : ಸನ್ಮಾನ್ಯ ಸಭಾಧ್ಯಕ್ಷರೇ, ಇಂದು ನಮ್ಮ ಮುಂದಿರುವ ಎರಡು ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಗಮನಕ್ಕೆ ತರಬಯಸುತ್ತೇನೆ. ಲೋಕೋಪಯೋಗಿ ಇಲಾಖೆಯವರು ದೊಡ್ಡದೊಡ್ಡ ಜಲಾಶಯಗಳು ಮತ್ತು ಸಣ್ಣ ಸಣ್ಣ ಜಲಾಶಯಗಳ ಬಗ್ಗೆ ಬಂದು ವ್ಯವಸ್ಥೆ ಮಾಡಿದ್ದಾರೆ, ಅದಕ್ಕೆ ಪಟ್ಟಿ ಮಾಡಿದ್ದಾರೆ. ಆದರೆ ಮನುಷ್ಯನಿಗೆ ಅತ್ಯಾವಶ್ಯಕವಾಗಿ ಬೇಕಾದ ನೀರಾವರಿ ಕಾರ್ಯ ಮಾಡುವಾಗ ಒಹಳ ಕಾಲದಿಂದಲೂ ದುಸ್ಥಿತಿಯಲ್ಲಿರುವ ಕೆರೆಗಳನ್ನು ಪಟ್ಟಿ ಮಾಡಿ ಅವುಗಳ ಕೆಲಸ ಪೂರ್ಣಮಾಡಿ ಅನಂತರ ದೊಡ್ಡದೊಡ್ಡ ಜಲಾಶಯಗಳ ಕೆಲಸ ತೆಗೆದುಕೊಳ್ಳುವುದು ಒಡನಾಡಿ ದೃಷ್ಟಿಯಿಂದ ಉತ್ತಮವಾದ ಕೆಲಸ, ಇದರ ಬಗ್ಗೆ ಒದಗಿಸಬೇಕಾದ ಹಣ ಇನ್ನೂ ಸ್ವಲ್ಪ ಜಾಸ್ತಿ ಯಾಗಬೇಕಾಗಿತ್ತು. ನೀರಾವರಿ ವಿಚಾರದಲ್ಲಿ ಸುಮಾರು ಮೂರು ವರ್ಷಗಳಿಂದ ನೀರಾವರಿ ಕಾಮಗಾರಿಗಳಿಗೆ ಯಥೇಚ್ಛವಾಗಿ ಹಣ ಖರ್ಚುಮಾಡಿ ಆಹಾರದ ಅಭಾವವನ್ನು ಹೋಗಲಾಡಿಸಲು ಪ್ರಯತ್ನ ಮಾಡಿದ್ದಾರೆ. ಇದು ತುಂಬಾ ಸಂತೋಷದ ವಿಚಾರ. ಸಣ್ಣ ಸಣ್ಣ ಕೆರೆಗಳು ಮತ್ತು ಪಿಕಪ್‌ಗಳು ಮುಂತಾದುಗಳ ಬಗ್ಗೆ ಹೆಚ್ಚು ಆದ್ಯತೆ ಕೊಡಬೇಕಾದ್ದು ಅವಶ್ಯಕ. ದೊಡ್ಡದೊಡ್ಡ ಜಲಾಶಯಗಳ ಕೆಲಸ ಸಾವಧಾನವಾಗಿ ಆಗತಕ್ಕದ್ದಾ, ಅದು ಬೇಡವೆಂದು ಹೇಳುವುದಿಲ್ಲ, ಅವಶ್ಯಕವಿರುವ ಕೆಲವು ಕೆಲಸಗಳ ಬಗ್ಗೆ ಬಹಳ ದಿವಸಗಳಿಂದ ಪಟ್ಟಿ ಮಾಡಿದ್ದರೂ ಕೂಡ ಅವನ್ನು ತೆಗೆದುಕೊಳ್ಳದೆ ಬೇರೆಬೇರೆ ಕಾರ್ಯಗಳನ್ನು ಮಾಡುವುದು ಸರಿಯಲ್ಲ. ಇದನ್ನು ಸರಕಾರದವರು ಗಮನಿಸಿ ಎಂಟುಹತ್ತು ವರ್ಷಗಳಿಂದ ಮಳೆಯಿಂದ ಒಡೆದುಹೋಗಿರುವ ಜಲಾಶಯಗಳನ್ನು ಮೊದಲು ಸರಿಪಡಿಸಬೇಕು. ಇದಕ್ಕಾಗಿ ಮಾಗಡಿ ತಾಲ್ಲೂಕಿನಲ್ಲಿ ಒಡೆದಿರುವ ಅನೇಕ ಜಲಾಶಯಗಳ ಬಗ್ಗೆ ಅಂಕಿ ಅಂಶ ನಾನು ಒದಗಿಸಿದ್ದರೂ ಆ ಬಗ್ಗೆ ಗಮನಕೊಟ್ಟಿಲ್ಲ. ಅಲ್ಲಿ ಸುಮಾರು ಏಳೆಂಟು ಕೆಲಸಗಳಾಗಬೇಕಾಗಿವೆ. ಈ ಪುನೆಯ ಒಬ್ಬ ಸದಸ್ಯ ತನ್ನ ಕ್ಷೇತ್ರದಲ್ಲಿ ಆಗಬೇಕಾಗಿರುವ ಕೆಲಸದ ಬಗ್ಗೆ ಸಲಹೆ ಮಾಡಿದರೂ ಕೂಡ ಅದನ್ನು ಕೈಕೊಳ್ಳದಿರುವುದರಿಂದ ತೊಂದರೆಯಾಗಿದೆ. ಸದಸ್ಯರ ಘನತೆ ಗೌರವಗಳು ಉಳಿಯಬೇಕಾದರೆ ಸರಕಾರದವರು ಅವರು ಹೇಳುವ ಕೆಲಸಗಳನ್ನು ಮಾಡಿ ಕೊಡಬೇಕು, ಇಲ್ಲದಿದ್ದರೆ ಅವರು ಚುನಾಯಿತರಾಗಿ ಬಂದಿರುವ ಕ್ಷೇತ್ರಗಳಲ್ಲಿ ಅವರಿಗೆ ಬೆಲೆ ಇರುವುದಿಲ್ಲ. ಅದುದರಿಂದ ಸದಸ್ಯರು ಹೇಳುವುದು ನ್ಯಾಯವಾಗಿದ್ದರೆ ಅವನ್ನು ತಕ್ಷಣ ಮಾಡಲು ಕ್ರಮ ಕೈಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ನೀರಾವರಿ ಬಗ್ಗೆ ವ್ಯವಸಾಯಗಾರರಿಗೆ ಶುಲ್ಕ ತೀರ ಜಾಸ್ತಿಯಾಗಿದೆ, ಕಾವೇರಿ ಜಲಾಶಯ ಮುಂತಾದ ಜಲಾಶಯಗಳ ಬಳಿ ಹಾಕಿರುವುದಕ್ಕೂ ಗ್ರಾಮಾಂತರಗಳಲ್ಲಿ ಹಾಕಿರುವುದಕ್ಕೂ ಹೋಲಿಕೆ ಮಾಡಿದರೆ

(ಶ್ರೀ ಸೋಲೂರು ಸಿದ್ದಪ್ಪ)

ತುಂಬ ಅಂತರವಿದೆ. ಸರಕಾರದವರು ಈ ಅಂತರವನ್ನು ಗಮನಿಸಿ ಸಾಧ್ಯವಾದಮಟ್ಟಿಗೆ ಸಣ್ಣ ಸಣ್ಣ ಕೆರೆ, ಪಿಕಪ್, ಮುಂತಾದುವು ಗ್ರಾಮಾಂತರಗಳಲ್ಲೇ ನಿವೇ ಅವಕ್ಕೆ ಈಗಿರುವ ಕಂದಾಯ ಕಡಿಮೆಮಾಡಬೇಕು.

ನೀರಾವರಿ ವಿಚಾರದಲ್ಲಿ ಪೂರ್ಣವಾಗಿ ಕೆಲಸಗಳಿಗೆ ಅದ್ಯತೆ ಕೊಡಬೇಕು, ರೈತ ಉಳಿಯ ಬೇಕಾದರೆ ಅವನಿಗೆ ಅನುಕೂಲತೆಗಳನ್ನು ಕಲ್ಪಿಸಬೇಕು, ನೀರಿನ ಸೌಲಭ್ಯ ಮುಖ್ಯವಾಗಿ ಮಾಡಿಕೊಡಬೇಕು. ದೊಡ್ಡ ದೊಡ್ಡ ಜಲಾಶಯಗಳನ್ನು ತೆಗೆದುಕೊಳ್ಳುವಂತೆ ದೇಶದ ಎಲ್ಲಾ ಭಾಗಗಳಲ್ಲೂ ಕೂಡ ವಿರುಪೇರಿಲ್ಲದೆ ಸಮಾನವಾಗಿ ಎಲ್ಲ ಜಿಲ್ಲೆಗಳವರಿಗೂ ಅನುಕೂಲವಾಗುವಂತೆ ಒಂದು ತತ್ವವನ್ನನುಸರಿಸಿ ಕೆಲಸಮಾಡುವುದು ಅತ್ಯಗತ್ಯ. ಮುಖ್ಯವಾಗಿ ವಿದ್ಯುಚ್ಛಕ್ತಿ ಮತ್ತು ನೀರಾವರಿ ಇಲಾಖೆಗಳು ಸಂಸ್ಥಾನಕ್ಕೆ ಬಹಳ ಉಪಯೋಗ ಕರವಾದವುಗಳು ಈಗ ಕರೆಂಟಿನ ವಿಚಾರದಲ್ಲಿ ೧೫೦ ಕೋಟಿ ರೂಪಾಯಿ ಖರ್ಚುಮಾಡಿ ದೇಶದಾದ್ಯಂತ ಅನುಕೂಲ ಮಾಡಿ ಹೊರದೇಶಗಳಿಗೂ ಕರೆಂಟನ್ನು ಒದಗಿಸಲಾಗಿದೆ. ಆದರೆ ರೈತರಿಗೆ ಪಂಪ್‌ಸೆಟ್ಟುಗಳಿಗೆ ಮತ್ತು ನೀರಾವರಿಗೆ ಒದಗಿಸಿರುವ ಕರಂಟಿನ ದರ ಜಾಸ್ತಿ. ಅದೇ ಮದ್ರಾಸಿನವರು ಇನ್ನೂ ಕಡಿಮೆ ದರದಲ್ಲಿ ಒದಗಿಸುತ್ತಿದ್ದಾರೆ ಮೈಸೂರು ಸರಕಾರ ಶರಾವತಿ ಯೋಜನೆ ಮಾಡಿ ರೈತರಿಗೆ ಹೆಚ್ಚಿನ ಸೌಕರ್ಯ ಕಲ್ಪಿಸಿರುವುದು ಸಂತೋಷಕರವಾದುದು

ರೈತರಿಗೆ ಕೊಟ್ಟ ಮಾತಿನಂತೆ ಸರ್ಕಾರ ನಡೆದುಕೊಳ್ಳಬೇಕಾಗಿದೆ.ಮದ್ರಾಸ್ ರಾಜ್ಯದಲ್ಲಿ ೮ ಪೈಸೆ ಪ್ರಕಾರ ಒಂದು ಯುನಿಟ್‌ಗೆ ಚಾರ್ಜ್ ಮಾಡುತ್ತಿರಬೇಕಾದರೆ ನಮ್ಮ ರಾಜ್ಯದಲ್ಲಿ ೧೮ ಪೈಸೆ ತೆಗೆದುಕೊಳ್ಳುತ್ತಿದ್ದಾರೆ. ಇದು ನ್ಯಾಯವೇ ಎನ್ನುವುದನ್ನು ಸರ್ಕಾರದವರು ಆಲೋಚನೆ ಮಾಡಿ. ಇದರಿಂದ ರೈತರಿಗೆ ಉಂಟಾಗಿರತಕ್ಕ ಅನಾನುಕೂಲವನ್ನು ಸರಿಪಡಿಸಿ ಉತ್ತಮ ರೀತಿಯಿಂದ ವ್ಯವಸಾಯವನ್ನು ಮಾಡುವುದಕ್ಕೆ ಅವಕಾಶವನ್ನು ಸರ್ಕಾರ ಕಲ್ಪಿಸಿ ಕೊಡಬೇಕು.

ಅನೇಕ ರಸ್ತೆಗಳನ್ನು ಸರ್ಕಾರದವರು ೧೯೪೭ರಿಂದ ಈ ಹೊತ್ತಿನವರೆಗೂ ಬಹಳ ಚೆನ್ನಾಗಿ ಮಾಡಿ ಸಂಚಾರ ಸೌಲಭ್ಯವನ್ನು ಉತ್ತಮ ರೀತಿಯಲ್ಲಿ ಮಾಡಿದ್ದಾರೆ. ಬೆಂಗಳೂರಿನಿಂದ ಮಂಗಳೂರಿಗೆ ಬೆಂಗಳೂರಿಗೆ ನಿಂದ ಪೂನಾವರೆಗೆ ಇರತಕ್ಕ ಮಹತ್ವರವಾದ ಎರಡು ದೊಡ್ಡ ರಸ್ತೆಗಳು ಅನೇಕ ತೊಂದರೆಗಳಿಗೆ ಒಳಗಾಗಿವೆ. ಕಾರಣ ಹೆಚ್ಚು ಲಾರಿಗಳು, ಕಾರುಗಳು, ಇತರ ವಾಹನಗಳು ರಸ್ತೆಗಳಲ್ಲಿ ಹೆಚ್ಚು ಹೆಚ್ಚು ಸಂಚಾರ ಮಾಡತಕ್ಕ ಕಾಲ ಹೆಚ್ಚಿರುವುದರಿಂದ ಇದನ್ನ ಡಬ್ಬಲ್ ರೋಡ್ ಆಗಿ ಪರಿವರ್ತನೆ ಮಾಡಿ ಸಾವು ನೋವುಗಳಿಗೆ ಅವಕಾಶವಿಲ್ಲದೆ. ವಾಹನಗಳಿಗೂ ಭದ್ರತೆಯುಂಟಾಗುವ ಹಾಗೆ ಸರ್ಕಾರದವರು ಈ ಕಾರ್ಯವನ್ನು ಬಜೆಟ್ಟಿನಲ್ಲಿ ಸೇರಿಸಿ ಇದಕ್ಕೆ ತಗಲಬಹುದಾದ ಹಣವನ್ನು ಸರ್ಕಾರ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು.

ಪಬ್ಲಿಕ್ ವರ್ಕ್ಸ್ ಇಲಾಖೆಯ ಅಧಿಕಾರಿಗಳ ಮೇಲೆ ನಮ್ಮ ಸ್ನೇಹಿತರು ಅನೇಕ ದೂರುಗಳನ್ನು ಹೇಳಿದ್ದಾರೆ. ಈ ಇಲಾಖೆಯಲ್ಲಿ ಸಂಸ್ಥಾನದ ಇತರ ಇಲಾಖೆಗಳಲ್ಲಿ ಮತ್ತು ಅನೇಕ ಸಂಘ ಸಂಸ್ಥೆಗಳಲ್ಲಿ ಕೂಡ ದೂರುಗಳಿವೆ. ಆದರೆ ಈ ಇಲಾಖೆ ಬಹಳ ಮಹತ್ತರವಾದುದು, ದೇಶಕ್ಕೆ ಲಾಭ ಕೊಡತಕ್ಕದ್ದು. ಎಲ್ಲರೂ ತಪ್ಪು ದಾರಿಯಲ್ಲಿದ್ದಾರೆ ಎಂದು ಹೇಳುವುದಕ್ಕೆ ನಾನು ಬಯಸುವುದಿಲ್ಲ. ಅನೇಕರು ತಪ್ಪು ಮಾಡಿದವರು ಸರ್ಕಾರದ ಕೈಗೆ ಸಿಕ್ಕಿದ್ದಾರೆ, ಮತ್ತು ಅವರಿಗೆ ಸರಿಯಾದ ಶಿಕ್ಷೆಯೂ ಆಗಿದೆ. ಇಂಥದನ್ನು ನಿವಾರಣೆ ಮಾಡುವುದಕ್ಕೆ ಒಂದು ವ್ಯವಸ್ಥೆಯನ್ನು ಕೂಡ ಸರ್ಕಾರ ಮಾಡಿದೆ. ಅದು ಪೂರ್ಣ ಕೆಲಸವನ್ನು ಮಾಡುತ್ತಿದೆ. ಆದರೆ ಈ ರೀತಿಯ ದೂರುಗಳು ಇನ್ನೂ ಹೋಗಿಲ್ಲ. ದೂರುಗಳು ಬರುವುದು ಪೂರ್ಣ-ಭಾಗ ನಿಲ್ಲಬೇಕಾದರೆ ಇಲಾಖೆಯ ಮಂತ್ರಿಗಳು, ಇಲಾಖೆಯ ದೊಡ್ಡ ದೊಡ್ಡ ಅಧಿಕಾರಿಗಳು ಎಲ್ಲರೂ ಹೆಚ್ಚಿನ ಗಮನ ಕೊಟ್ಟು ಸದಸ್ಯರು ಈ ವೇದಿಕೆಯ ಮೂಲಕ ಆಗಾಗ ಕೊಡುವಂಥ ಸಲಹೆಗಳಿಗೆ ಗಮನ ಕೊಡಬೇಕೆಂದು ನಾನು ಸರ್ಕಾರವನ್ನು ತಮ್ಮ ಮೂಲಕ ಪ್ರಾರ್ಥಿಸುತ್ತೇನೆ.

ನಾನು ಹೇಳಿರತಕ್ಕ ಎಲ್ಲಾ ನೀರಾವರಿ ಕಾಮಗಾರಿಗಳನ್ನೂ ತ್ವರಿತಗತಿಯಿಂದ ತೆಗೆದುಕೊಳ್ಳುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕು ಮತ್ತು ಈಗಿರತಕ್ಕ ವಾಟರ್ ರೇಟ್ ಕಂದಾಯ ಇವುಗಳನ್ನು ಕಡಿಮೆ ಮಾಡಿ ರೈತರ ಬೆಳವಣಿಗೆಗೆ ಸಹಾಯಕರಾಗಬೇಕೆಂದು ಹೇಳುತ್ತೇನೆ.

ಮಾನ್ಯ ಚನ್ನಬಸಪ್ಪನವರು ಪಬ್ಲಿಕ್ ವರ್ಕ್ಸ್ ಮಂತ್ರಿಗಳಾಗಿದ್ದಾಗ ಗ್ರಾಮಾಂತರ ಪ್ರದೇಶದಲ್ಲಿ ನಾನಾ ಕಡೆ ರಸ್ತೆಗಳನ್ನು ಕೈಗೊಂಡರು. ಅದಕ್ಕೆ ೮ ಕೋಟಿ ರೂಪಾಯಿ ಖರ್ಚಾಯಿತು. ಆ ರಸ್ತೆಗಳ ಬಗ್ಗೆ ತಾಲ್ಲೂಕು ಬೋರ್ಡ್‌ಗಳಾಗಲೀ ಸರ್ಕಾರದವರಾಗಲಿ ನಿಗಾ ಕೊಟ್ಟಿಲ್ಲ. ಅವುಗಳ ರಿಪೇರಿ ಮಾಡುತ್ತಿಲ್ಲ ಸರ್ಕಾರ ಖರ್ಚು ಮಾಡಿರುವ ಹಣ ಪೋಲಾಗದಂತೆ, ಮಾಡಿದ ಕೆಲಸ ಭದ್ರವಾಗಿರಬೇಕಾದರೆ ಅಂಥ ರಸ್ತೆಗಳನ್ನು ಮೆಂಟೇನ್ ಮಾಡುವ ಜವಾಬ್ದಾರಿಯನ್ನು, ಯಾರಾದರೂ ವಹಿಸಿಕೊಳ್ಳಬೇಕು. ಈ ರಸ್ತೆಗಳ ಜವಾಬ್ದಾರಿಯನ್ನು ಯಾವ ಇಲಾಖೆಗಾದರೂ ವಹಿಸಬೇಕಾಗಿದೆ. ಇದನ್ನು ಸರ್ಕಾರದ ಗಮನಕ್ಕೆ ಅನೇಕ ಸಾರಿ ಬೇರೆ ಬೇರೆ

ವೇದಿಕೆಗಳಲ್ಲಿ ತಂದಿದ್ದೇನೆ. ಇನ್ನು ಮೇಲಾದರೂ ರಸ್ತೆಗಳನ್ನು ಮಾಡಿ, ಅವುಗಳನ್ನು ಸರಿಯಾಗಿ ನೋಡಿಕೊಳ್ಳುವ ವ್ಯವಸ್ಥೆಯನ್ನು ಮಾಡಿ, ದೇಶಕ್ಕೆ ಒಂದು ಆಸ್ತಿ ಮಾಡಿ ಕೊಡಬೇಕು. ಮಾಡಿದ ಕೆಲಸವನ್ನು ಮಧ್ಯದಲ್ಲಿ ಬಿಟ್ಟರೆ ದೇಶದ ಹಣ ಪೋಲಾಗುತ್ತದೆ, ಜನರಿಗೆ ಅನುಕೂಲವಾಗಲಿಲ್ಲ : ದೇಶಕ್ಕೆ ಆಸ್ತಿಯೂ ಇಲ್ಲದಂತಾಗುತ್ತದೆ. ಆದ್ದರಿಂದ ರಸ್ತೆಗಳನ್ನು ಮಾಡಲು ಖರ್ಚು ಮಾಡಿರುವ ಹಣ ಪೋಲಾಗದಂತೆ ಅವುಗಳನ್ನು ಸರಿಯಾಗಿ ನೋಡಿಕೊಳ್ಳುವ ಕೆಲಸವನ್ನೂ ಮಾಡಬೇಕು.

ಮಾಗಡಿ ತಾಲ್ಲೂಕಿನಲ್ಲಿ ಕೆಲವು ಕೆರೆಗಳು ರಸ್ತೆಗಳು ನಾದುರಸ್ತಾಗಿವೆ. ಈ ಕೆಲಸಗಳನ್ನು ಜಾಗ್ರತೆ ಕೈಕೊಂಡು ಆ ಭಾಗದ ಜನರಿಗೆ ಸಂತೋಷವನ್ನುಂಟುಮಾಡುವಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳಿ, ಅಧ್ಯಕ್ಷರು ನನಗೆ ನಾಲ್ಕೈದು ನಿಮಿಷ ಹೆಚ್ಚಾಗಿ ಅವಕಾಶ ಕೊಟ್ಟು ಉಪಕಾರ ಮಾಡಿರುವುದಕ್ಕಾಗಿ ಅವರನ್ನೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಜೈ ಹಿಂದ್—

‡ಶ್ರೀ ಬಿ. ಎಲ್. ನಾರಾಯಣ ಸ್ವಾಮಿ (ಶ್ರೀನಿವಾಸಪುರ) ಸನ್ಮಾನ್ಯ ಸಭಾಪತಿಗಳೇ ಲೋಕೋಪಯೋಗಿ ಕೆಲಸಗಳಲ್ಲಿ ಸರ್ಕಾರದಿಂದ ಅಪಾರವಾದ ಹಣವನ್ನು ವೆಚ್ಚ ಮಾಡುತ್ತಿದ್ದರೂ ಕೂಡ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಮಾಡುತ್ತಿಲ್ಲ ಎಂದು ಅನೇಕ ವೇಳೆ ಸರ್ಕಾರದ ಗಮನಕ್ಕೆ ನಾವು ತಂದಿದ್ದೇವೆ. ನೀರಾವರಿ ಕಾಮಗಾರಿಗಳ ವಿಚಾರದಲ್ಲಿ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳ ಯೋಜನೆಯ ರೀತಿಯಲ್ಲಿ ನಡೆಯುತ್ತಿವೆ, ಅದಕ್ಕೆ ಕೇಂದ್ರ ಸರ್ಕಾರದವರು ಹಣವನ್ನು ಕೊಡುವುದಲ್ಲದೆ ನಮ್ಮ ರಾಜ್ಯ ಸರ್ಕಾರದೀದಲೂ ಖರ್ಚು ಮಾಡುತ್ತಿದ್ದೇವೆ. ಆದರೆ ಬಹಳ ಹಿಂದುಳಿದಿರತಕ್ಕ ಪ್ರದೇಶಗಳಲ್ಲಿ ಯಾವುದಾದರೂ ಒಂದು ಸ್ವತ್ಯವಾದ ನೀತಿಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆಯೇ ಎಂದರೆ ಇಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಕೆಲವು ಅಧಿಕಾರಿಗಳ ದಯೆಯಿಂದ, ದಾಕ್ಷಿಣ್ಯದಿಂದ ಏನಾದರೂ ಕೆಲವು ಕೆಲಸಗಳು ಮಂಜೂರಾಗಬೇಕಾಗಿದೆಯೇ ಹೊರತು ವಾಸ್ತವವಾಗಿ ಸ್ಥಳೀಯ ಸ್ಥಿತಿಗತಿಗಳನ್ನನುಸರಿಸಿ, ಪ್ರಜೆಗಳ ಕಷ್ಟನಿವಾರಣೆಗೋಸ್ಕರ ಒಂದು ವ್ಯವಸ್ಥಿತವಾದ ಯೋಜನೆ ಇಲ್ಲ ಆ ಯೋಜನೆಗೆ ಅನುಸಾರವಾಗಿ ಕೆಲಸಗಳು ನಡೆಯುತ್ತಿಲ್ಲ. ಇದು ಬಹಳ ವಿಷಾದಕರವಾದ ವಿಚಾರ. ಏನಾದರೂ ಕೆಲಸವಾಗಬೇಕಾಗಿದ್ದರೆ ರೈತರು ಕಂಟ್ರಾಕ್ಟರನ್ನು ಹಿಡಿದುಕೊಳ್ಳಬೇಕು, ಕಂಟ್ರಾಕ್ಟರು ಆಫೀಸರುಗಳಿಗೆ ಮೊರೆ ಹೋಗಬೇಕು. ಸದಾ ಕಾಲ ಈ ರೀತಿ ಆಗಬೇಕು ಎಂದರೆ ಯಾರಿಗೂ ಕೂಡ ಯೋಗ್ಯವಾದುದಲ್ಲ, ನಮ್ಮ ಪ್ರಜಾಪ್ರಭುತ್ವದಲ್ಲಿ ಈ ರೀತಿ ನಡೆಯುತ್ತದೆ ಎಂದು ಹೇಳುವುದು ಯಾರಿಗೂ ಯೋಗ್ಯವಾದುದಲ್ಲ ಎಂದು ಹೇಳಬೇಕಾಗಿದೆ. ಅದಕ್ಕೋಸ್ಕರ ನನ್ನ ಸಲಹೆ ಇಷ್ಟೆ. ದಯವಿಟ್ಟು ಹಿಂದುಳಿದಿರತಕ್ಕ ಪ್ರದೇಶಗಳೇನಿವೆ, ಅಂಥ ಕಡೆಗಳಲ್ಲಿ ಹತ್ತು ವರ್ಷದ ಯೋಜನೆಗಳನ್ನು ಮಾಡಿ, ವಾಸ್ತವಾಂಶಗಳನ್ನು ಗಮನಿಸಿ ಅದಕ್ಕೆ ತಕ್ಕಂತ ಯೋಜನೆಯನ್ನು ತಯಾರು ಮಾಡಿ ಯಾರಾದರೂ ಕೇಳಲಿ, ಕೇಳದೆ ಇರಲಿ, ಹಾಕಿರುವ ಯೋಜನೆಯ ಪ್ರಕಾರ ಕೆಲಸಗಳು ನಡೆದರೆ ಸರ್ಕಾರಕ್ಕೂ ಮತ್ತು ಇಲಾಖೆಗೂ ಒಳ್ಳೆಯ ಕೀರ್ತಿ ಬರುತ್ತದೆ ಮತ್ತು ಪ್ರಜೆಗಳಿಗೂ ಬಹಳ ಸಂತೋಷವಾಗುತ್ತದೆ. ಈ ಹೊತ್ತು ಇರತಕ್ಕ ಪರಿಸ್ಥಿತಿಯಲ್ಲಿ ಏನಾಗಿದೆ ಎಂದರೆ ಹೊಸ ಯೋಜನೆಗಳು ಸರ್ಕಾರದ ಅನುಮತಿ ಇಲ್ಲದೆ ಮಂಜೂರಾಗಬಾರದು ಎಂದು ಮಾಡಿದ್ದಾರೆ. ಹಿಂದೆ ಅನೇಕ ಅಧಿಕಾರಿಗಳು ತಮಗೆ ಇಷ್ಟ ಬಂದಂತೆ ಕೆಲಸಗಳನ್ನು ಮಂಜೂರು ಮಾಡಿದ್ದಾರೆ. ಅದಕ್ಕೆ ದುಡ್ಡು ಒದಗಿಸುವುದಕ್ಕೆ ಸರ್ಕಾರಕ್ಕೆ ಕಷ್ಟವೆಂದು ತಿಳಿದುಕೊಂಡು ಈ ಹಾದಿ ಹಿಡಿದಿದ್ದಾರೆ ಎಂದು ಕಾಣುತ್ತೆ. ಸರ್ಕಾರ ಎಲ್ಲರನ್ನೂ ಒಂದೇ ರೀತಿಯಿಂದ ಕಾಣುತ್ತದೆ. ಹಿಂದುಳಿದಂಥ ಪ್ರದೇಶಗಳಿಗೆ ಎಷ್ಟೆಷ್ಟು ಸಹಾಯ ಮಾಡಬಹುದೋ ಅಷ್ಟನ್ನೂ ಮಾಡಬೇಕೆಂದು ಹೇಳುತ್ತೇನೆ.

ಕಳೆದ ವರ್ಷ ಒಂದೂವರೆ ಕೋಟಿ ರೂಪಾಯಿ ಹಣವನ್ನು ಸಣ್ಣ ನೀರಾವರಿ ಕಾಮಗಾರಿಗಳಿಗೆ ಕೊಟ್ಟರು. ಆ ಹಣವನ್ನು ಸಾಲಾ ಪೈರಿನಲ್ಲಿ ಕೊಟ್ಟರು. ಒಂದೂವರೆ ಕೋಟಿ ರೂಪಾಯಿನಲ್ಲಿ ಕಾಲು ಕೋಟಿ ರೂಪಾಯಿ ಮಾತ್ರ ಖರ್ಚಾಗಿದೆ. ಮುಂದಿನ ವರ್ಷಕ್ಕೆ ಅದೇ ದುಡ್ಡಿನಲ್ಲಿ ಕೆಲಸ ಮಾಡುತ್ತೇವೆಂದು ಕಣ್ಣೊರೆಸುವ ಮಾತು ಹೇಳುವುದು ಬೇಡ. ನಿಜವಾಗಿ ಸಣ್ಣ ನೀರಾವರಿ ಕಾಮಗಾರಿಗಳಿಗೆ ಉತ್ತೇಜನ ಕೊಡಬೇಕೆಂದು ಮಾಡುವಂಥ ಕೆಲಸವಲ್ಲ ದಯವಿಟ್ಟು ಸರ್ಕಾರದವರು ಮುಂದಿನ ವರ್ಷ ಹೆಚ್ಚು ಹಣವನ್ನು ಒದಗಿಸಿ ಕೆಲಸ ಮಾಡಬೇಕೆಂದು ನಾನು ಸೂಚಿಸುತ್ತೇನೆ.

6-00 P.M.

ಜಿಲ್ಲಾ ಮಟ್ಟದಲ್ಲಿ ಡಿವಿಜನ್ ಮಟ್ಟದಲ್ಲಿ ಗ್ರ್ಯಾಂಟ್ಸ್ ಕೊಡುತ್ತಿರುವುದು ವಿಚಿತ್ರವಾಗಿದೆ. ಕೆಲವು ಎಂಜಿನಿಯರುಗಳು ಕೆಳಮಟ್ಟದಲ್ಲಿ ಇರುತ್ತಾರೆ. ಹೆದರಿಸಿ ಬಿಟ್ಟು ಅದನ್ನು ಜಾಸ್ತಿ ಮಾಡುತ್ತಾರೆ. ಅದು ಅಕ್ರಮವಾಗಿದ್ದರೂ ಸಹ ಅದಕ್ಕೆ ಹಣ ಒದಗಿಸುತ್ತಾರೆ. ಅಕ್ರಮದಿಂದ ಮುಂದೆ ಹೋದವರು

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಮುಂದೆ ಮುಂದೆ ಹೋಗುತ್ತಾರೆ. ಇದರಿಂದ ನ್ಯಾಯ ದೊರಕುವುದಿಲ್ಲ. ಆಫೀಸಿನಲ್ಲಿ ಏನೇನೋ ಕೆಲಸಗಳಾಗುತ್ತವೆ ಇಲ್ಲದಿದ್ದರೆ ಕೆಲಸವೇ ಆಗುವುದಿಲ್ಲ. ಆದುದರಿಂದ ಸರಿಯಾದ ಒಂದು ನೀತಿ ಮೇಲ್ವಿಚಾರಣೆ, ದಕ್ಷತೆ ಇಲ್ಲಾ ಎಂದು ಹೇಳಬೇಕಾಗುತ್ತದೆ.

BUSINESS OF THE HOUR

Mr. DEPUTY SPEAKER :—The Hon. Member can continue tomorrow before the House adjourns, I want to make an announcement.

The Business Advisory Committee has suggested the following modifications in the programme for discussion of Demands for Grants—

(1) Discussion on the Demands for Grants relating to P.W.D. and Electricity will be contiued tomorrow also (Tuesday the 17th March 1970).

(2) Demands for Grants relating to Medical and Public Health will be taken up on Saturday 21st March 1970 along with other Demands scheduled for that day.

(3) Demands for Grants relating to Minister for Law, Labour and Parlimentary Affairs will be taken up on Tuesday, the 24th March 1970 and those relating to the Minister for Finance will be taken up on Wednesday, the 25th March 1970.

Other Demands will be taken up as per programme indicated already.

The House will now adjourned and re-assemble at 1-00 P.M. tomorrow.

The House adjourned at Six of the Clock to meet again at One of the Clock on Tuesday the 17th March 1970.

WD 14732—GPB—550—28-8-70